ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 5 ಮಂಗಳವಾರ 2026

ಸಂಪುಟ: 47 | ಸಂಚಿಕೆ: 19 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*



ಕಪಿಲಾರತಿ...



ಸುತ್ತೂರು ಶ್ರೀಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿರುವ ರೈತರ ಶಿಬಿರದಲ್ಲಿ ಸಂಜೆ ಕಪಿಲಾರತಿ ನೆರವೇರಿಸಲಾಯಿತು. ಶಿಬಿರಾರ್ಥಿಗಳು ಕಪಿಲಾ ಮಾತೆಗೆ ಜ್ಯೋತಿ ಬೆಳಗಿಸಿ ಶ್ರದ್ಧಾ ಭಕ್ತಿ ಸಮರ್ಪಿಸಿದರು.

ಮೂರು ರಾಜ್ಯದಲ್ಲಿ ಬಿಜೆಪಿ ಜಯಭೇರಿ

ಮೈಸೂರಲ್ಲಿ ಕಾರ್ಯಕರ್ತರ ಸಂಭ್ರಮಾಚರಣೆ



ಮೂರು ರಾಜ್ಯದಲ್ಲಿ ಬಿಜೆಪಿ ಗೆಲುವು ಕಂಡ ಹಿನ್ನೆಲೆ ಮೈಸೂರಿನಲ್ಲಿ ಬಿಜೆಪಿ ಕಾರ್ಯಕರ್ತರಿಂದ ಸಂಭ್ರಮಾಚರಣೆ ನಡೆಯಿತು.

ಮೈಸೂರು, ಮೇ 4(ಎಂಕೆ)– ಪಂಚ ರಾಜ್ಯ ಚುನಾವಣೆಯಲ್ಲಿ ಬಿಜೆಪಿ ಮೂರು ರಾಜ್ಯಗಳಲ್ಲಿ ಗೆಲುವು ಸಾಧಿಸಿದ ಹಿನ್ನೆಲೆ ಮೈಸೂರಿನಲ್ಲಿ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆ ಮಾಡಿದರು.

ಪಕ್ಷದ ಕಚೇರಿ ಎದುರು ಜಮಾಯಿಸಿದ ಪಕ್ಷದ ಕಾರ್ಯಕರ್ತರು, ಪಶ್ಚಿಮ ಬಂಗಾಳ, ಅಸ್ಸಾಂ ಮತ್ತು ಪುದುಚೇರಿಯಲ್ಲಿ ಗೆಲುವು ಸಾಧಿಸುತ್ತಿದ್ದಂತೆ ಪ್ರಧಾನಿ ನರೇಂದ್ರಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಸೇರಿದಂತೆ ಕೇಂದ್ರ ನಾಯಕರ ಪರವಾಗಿ ಜೈಕಾರದೊಂದಿಗೆ ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿ ಸಂಭ್ರಮಿಸಿದರು.

ಬಳಿಕ ಮಾತನಾಡಿದ ಶಾಸಕ ಟಿ.ಎಸ್. ಶ್ರೀವತ್ಸ, ಪಂಚರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಮೂರು ಕಡೆ ಐತಿಹಾಸಿಕ ಗೆಲುವು ಸಾಧಿಸಿದ್ದು, ಪಶ್ಚಿಮ ಬಂಗಾಳದಲ್ಲಿ ಮೊದಲ ಬಾರಿಗೆ ಪೂರ್ಣ ಬಹುಮತದೊಂದಿಗೆ ಅಧಿಕಾರ ಹಿಡಿಯುತ್ತಿದೆ. ಈ ಮೂಲಕ ಮಮತಾ ಬ್ಯಾನರ್ಜಿಯವರ 15 ವರ್ಷಗಳ ದುರಾಡಳಿತ ಅಂತ್ಯಗೊಂಡಿದೆ ಎಂದರು.

ಸಂವಿಧಾನ ವಿರೋಧಿಯಾಗಿ ನಡೆದುಕೊಂಡ ಮಮತಾ ಬ್ಯಾನರ್ಜಿಗೆ ಮತದಾರರು ತಕ್ಕ ಪಾಠ ಕಲಿಸಿದ್ದಾರೆ. ಅಸ್ಸಾಂ ಮತ್ತು ಪುದುಚೇರಿಯಲ್ಲೂ ಬಿಜೆಪಿ ಅಭೂತಪೂರ್ವ ಗೆಲುವು ಸಾಧಿಸಿದೆ. ಪಶ್ಚಿಮ ಬಂಗಾಳದಂತೆ ಕರ್ನಾಟಕದಲ್ಲೂ ಕಾಂಗ್ರೆಸ್ ದುರಾಡಳಿತ ನಡೆಸುತ್ತಿದ್ದು, ಮುಂಬರುವ ಕರ್ನಾಟಕದ ಚುನಾವಣೆಯಲ್ಲೂ ಪಶ್ಚಿಮ ಬಂಗಾಳದ ಮಾದರಿಯಲ್ಲೇ ಫಲಿತಾಂಶ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಎರಡು ಕ್ಷೇತ್ರಗಳ ಉಪಚುನಾವಣೆಯಲ್ಲಿ ಅನುಕಂಪ ಕೆಲಸ ಮಾಡಿದೆ. ಮತದಾರರು ಆಡಳಿತಾರೂಢ ಪಕ್ಷಕ್ಕೆ ಮತಹಾಕುವುದು ವಾಡಿಕೆ. ನಾವು ಅಧಿಕಾರದಲ್ಲಿದ್ದಾಗ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಗೆಲುವು ಸಾಧಿಸಿತ್ತು. ಮುಂಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಪಕ್ಷ ಹೀನಾಯವಾಗಿ ಸೋಲು ಕಾಣಲಿದೆ ಎಂದು ಭವಿಷ್ಯ ನುಡಿದರು. ಬಿಜೆಪಿ ನಗರ ಅಧ್ಯಕ್ಷ ಎಲ್.ನಾಗೇಂದ್ರ, ಜಿಲ್ಲಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಕೌಟುಂಬಿಕ ಕಲಹ: ಹೆಡ್ ಕಾನ್‌ಸ್ಟೇಬಲ್ ಆತ್ಮಹತ್ಯೆ

ಮೈಸೂರು, ಮೇ 4(ಬಿಎಲ್‌ಯು) –ಕೌಟುಂಬಿಕ ಕಲಹದಿಂದ ಮನನೊಂದ ಪೊಲೀಸ್ ಹೆಡ್‌ಕಾನ್ಸ್‌ಟೇಬಲ್ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರಿನ ಲಾಲ್ ಬಹದ್ದೂರ್ ಶಾಸ್ತ್ರಿನಗರದ ಪೊಲೀಸ್ ಲೇಔಟ್‌ನಲ್ಲಿ ಇಂದು ಸಂಭವಿಸಿದೆ.

ಮೈಸೂರಿನ ದೇವರಾಜ ಪೊಲೀಸ್ ಠಾಣೆಯ ಹೆಡ್ ಕಾನ್ಸ್‌ಟೇಬಲ್ ಶ್ಯಾಮ್ ಪ್ರಸಾದ್ (45) ಆತ್ಮಹತ್ಯೆ ಮಾಡಿಕೊಂಡವರಾಗಿದ್ದಾರೆ. ಅವರು ಕೌಟುಂಬಿಕ ಕಲಹದಿಂದ ಮನನೊಂದಿದ್ದರು. ಪೊಲೀಸ್ ಲೇಔಟ್‌ನಲ್ಲಿ ಸ್ವಂತ ಮನೆ ಹೊಂದಿರುವ ಅವರು, ಇಂದು ಅದೇ ಮನೆಯಲ್ಲಿ ಯಾರೂ ಇಲ್ಲದಿದ್ದಾಗ ನೇಣು ಬಿಗಿದು ಆತ್ಮಹತ್ಯೆಗೆ ಶರಣಾಗಿದ್ದಾರೆ. ಕಳೆದ 5 ವರ್ಷಗಳಿಂದ ದೇವರಾಜ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು. ಇಂದು ಬೆಳಿಗ್ಗೆ ಶುಭೋದಯ ಪಡೆ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ಆದರೆ ಕರ್ತವ್ಯಕ್ಕೆ ಗೈರಾಗಿದ್ದ ಹಿನ್ನೆಲೆಯಲ್ಲಿ ವಿಚಾರಿಸಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ತಿಳಿಯಿತು. ಈ ಸಂಬಂಧ ಆಲನಹಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಚುನಾವಣೆ

ಎರಡು ತಿಂಗಳಲ್ಲಿ ಮರು ಮತ ಎಣಿಕೆ ಮಾಡುವಂತೆ ಕೋರ್ಟ್ ಆದೇಶ

ಮೈಸೂರು, ಮೇ 4(ಎಸ್‌ಪಿಎನ್)– ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಮೈಸೂರು ಜಿಲ್ಲಾ ಘಟಕಕ್ಕೆ 2024ರ ಜು.21ರಂದು ನಡೆದಿದ್ದ ಅಧ್ಯಕ್ಷ, ನಿರ್ದೇಶಕ ಸ್ಥಾನ ಚುನಾವಣೆಯ ಮತ ಮರುಎಣಿಕೆಯನ್ನು 2 ತಿಂಗಳೊಳಗೆ ಮಾಡುವಂತೆ 12ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯ ಆದೇಶಿಸಿ, ಮುಂದಿನ ವಿಚಾರಣೆಯನ್ನು ಜೂನ್ 24ಕ್ಕೆ ಮುಂದೂಡಿದೆ.

ಜಿಲ್ಲಾಧ್ಯಕ್ಷ ಸ್ಥಾನದ ಅಭ್ಯರ್ಥಿ ವರುಣ ಮಹೇಶ್ ಮರುಎಣಿಕೆ ಮಾಡುವಂತೆ ಒತ್ತಾಯಿಸಿ 12ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯ(ಅರ್ಜಿ ಸಂಖ್ಯೆ:1388/2024)ದ ಮೊರೆ ಹೋಗಿದ್ದರು. ಈ ಹಿನ್ನೆಲೆಯಲ್ಲಿ ಅರ್ಜಿದಾರರ ಮನವಿ ಆಲಿಸಿದ ನ್ಯಾಯಾಲಯ, ಒಟ್ಟು ಮತದಾನದ ಮರುಎಣಿಕೆ ಮಾಡಿ, ನ್ಯಾಯಾಲಯಕ್ಕೆ ವರದಿ ನೀಡುವಂತೆ ಸಂಬಂಧಪಟ್ಟ ಚುನಾವಣಾಧಿಕಾರಿಗಳಿಗೆ ನ್ಯಾಯಾಲಯ ಸೂಚಿಸಿದೆ.

ಮತ ಎಣಿಕೆಯಲ್ಲಿ ಆಗಿರುವ ಲೋಪಗಳ ಪಟ್ಟಿ: ಚುನಾವಣಾಧಿಕಾರಿ ಮತ್ತು ಉಪಚುನಾವಣಾಧಿಕಾರಿ ಅವರ ಕಾರ್ಯಪದ್ಧತಿಯಲ್ಲಿ ಲೋಪ, ಮತದಾನದ ವೇಳೆ ಗೊಂದಲ ಮತ್ತು ಅಶಾಂತಿ ನೆಲೆಸಿತ್ತು. ಜಿಲ್ಲಾಧ್ಯಕ್ಷ ಸ್ಥಾನದ ಅಭ್ಯರ್ಥಿ ಹಿನಕಲ್ ಬಸವರಾಜು ತಂಡದ ಪರವಾಗಿ ಅಕ್ರಮ ಮತದಾನ ಮತ್ತು ನೂಕುನುಗ್ಗಲು ಉಂಟಾಗಿ ಅಕ್ರಮ ಮತದಾನ ನಡೆದಿರುವ ಶಂಕೆ ವ್ಯಕ್ತಪಡಿಸಿದ್ದು, ಈ ಮೇಲಿನ ಕಾರಣಗಳಿಂದಾಗಿ ಪ್ರಕಟಿತ ಫಲಿತಾಂಶವು ನಿಖರವಾಗಿಲ್ಲ. ಮತ ಚಲಾವಣೆಗೊಂಡ ಬ್ಯಾಲೆಟ್ ಪೇಪರ್‌ಗಳಲ್ಲಿ ವ್ಯತ್ಯಾಸ, ಪಾರದರ್ಶಕತೆ ಇಲ್ಲದ ಮತದಾನ ನಡೆದಿದೆ ಎಂದು ಆಪಾದಿಸಲಾಗಿತ್ತು.

ಅರ್ಜಿದಾರರ ಮನವಿ ಆಲಿಸಿರುವ 12ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಲಯ, ಎರಡು ತಿಂಗಳೊಳಗೆ ಮರುಎಣಿಕೆ ಕಾರ್ಯ ಮುಗಿಸಬೇಕು. ಎಲ್ಲಾ ಮತಪೆಟ್ಟಿಗೆಗಳು ಮತ್ತು ದಾಖಲೆಗಳನ್ನು ನ್ಯಾಯಾಲಯದ ವಶಕ್ಕೆ ಪಡೆಯಬೇಕು. ನ್ಯಾಯಾಲಯದ ನೇರ ಮೇಲ್ವಿಚಾರಣೆಯಲ್ಲಿ ಮರುಎಣಿಕೆ ನಡೆಸಬೇಕು ಎಂದು ತಿಳಿಸಿದೆ.

ನಾಳೆ ಮೈಸೂರಿಗೆ ಸಿಎಂ ಸಿದ್ದರಾಮಯ್ಯ ಭೇಟಿ



ಮೈಸೂರು, ಮೇ 4(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇ 6ರಂದು ತವರು ಜಿಲ್ಲೆ ಮೈಸೂರಿಗೆ ಆಗಮಿಸಲಿದ್ದಾರೆ. ಅಂದು ಬೆಳಿಗ್ಗೆ 10.30 ಗಂಟೆಗೆ ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದಿಂದ ವಿಶೇಷ ವಿಮಾನದಲ್ಲಿ ಹೊರಡುವ ಸಿದ್ದರಾಮಯ್ಯ, ಬೆಳಗ್ಗೆ 10.55 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಲಿದ್ದಾರೆ. ತರುವಾಯ ಮೈಸೂರಿನ ಕಲಾಮಂದಿರದಲ್ಲಿ ನಡೆಯುವ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತೋತ್ಸವ ಸಮಾರಂಭದಲ್ಲಿ ಪಾಲ್ಗೊಂಡು 2025–26ನೇ ಸಾಲಿನ ಕಾಯಕ ಯೋಗಿ ಶ್ರೀ ಸಿದ್ದರಾಮೇಶ್ವರ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ನಂತರ ರಾತ್ರಿ 7 ಗಂಟೆಗೆ ಖಾಸಗಿ ಕಾರ್ಯಕ್ರಮದಲ್ಲಿ ಪಾಲ್ಗೊಂಡು ರಾತ್ರಿ 11 ಗಂಟೆಗೆ ವಿಶೇಷ ವಿಮಾನದಲ್ಲಿ ಬೆಂಗಳೂರಿಗೆ ತೆರಳುವರು.

ರಾಜ್ಯ ಸರ್ಕಾರಿ ನೌಕರರ ಮಕ್ಕಳ ಪ್ರತಿಭಾ ಪುರಸ್ಕಾರಕ್ಕಾಗಿ ಅರ್ಜಿ

ಮೈಸೂರು, ಮೇ 4– ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಮಕ್ಕಳನ್ನು ಶೈಕ್ಷಣಿಕವಾಗಿ ಪ್ರೋತ್ಸಾಹಿಸಿ ಗೌರವಿಸುವ ಸಲುವಾಗಿ ಪ್ರತಿಭಾ ಪುರಷ್ಕಾರ ಕಾರ್ಯಕ್ರಮವನ್ನು ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಕ್ಷರಿ ಹಮ್ಮಿಕೊಂಡಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ 2026ನೇ ಸಾಲಿನ ಎಸ್‌ಎಸ್‌ಎಲ್‌ಸಿ ಅಥವಾ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ.90ಕ್ಕಿಂತ ಹೆಚ್ಚು ಅಂಕಗಳಿಸಿದ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಮಕ್ಕಳ ಪೋಷಕರು https://powermedia.info ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಮೇ 25 ರವರೆಗೆ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೈಸೂರು ಜಿಲ್ಲಾಧ್ಯಕ್ಷ ಡಾ.ಅರುಣ ಕುಮಾರ ಸಿ.ಬಿ, ಮೊ.ಸಂ: 9448208750 ಸಂಪರ್ಕಿಸಬಹುದೆಂದು ಪತ್ರಿಕಾ ಪ್ರಕಟಣೆ ತಿಳಿಸಿದೆ.

ಮಕ್ಕಳ ಮೇಲೆ ಪೋಷಕರು ನಿಗಾ ವಹಿಸಬೇಕು

ನೇಪಥ್ಯ ರಂಗ ತಂಡದ ಬೇಸಿಗೆ ಶಿಬಿರ ಸಮಾರೋಪದಲ್ಲಿ ಎಸಿಪಿ ರವಿಪ್ರಸಾದ್ ಕಿವಿಮಾತು



ನೇಪಥ್ಯ ರಂಗ ತಂಡವು 'ಹಾಡು ಆಟ ಆಡು' ಶೀರ್ಷಿಕೆಯಲ್ಲಿ ಕಲಾಮಂದಿರದ ಕಿರುರಂಗಮಂದಿರದಲ್ಲಿ ಏರ್ಪಡಿಸಿದ್ದ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭವನ್ನು ವಿಜಯನಗರ ವಿಭಾಗದ ಎಸಿಪಿ ರವಿಪ್ರಸಾದ್ ಉದ್ಘಾಟಿಸಿದರು.


ಮೈಸೂರು, ಮೇ 4– ಮಕ್ಕಳ ಮೇಲೆ ಪೋಷಕರು ನಿಗಾ ವಹಿಸಬೇಕು ಎಂದು ವಿಜಯನಗರ ವಿಭಾಗದ ಎಸಿಪಿ ರವಿ ಪ್ರಸಾದ್ ಸಲಹೆ ಮಾಡಿದರು.

ನೇಪಥ್ಯ ರಂಗ ತಂಡವು 'ಹಾಡು ಆಟ ಆಡು' ಶೀರ್ಷಿಕೆಯಲ್ಲಿ ಕಲಾಮಂದಿರದ ಕಿರುರಂಗಮಂದಿರದಲ್ಲಿ ಏರ್ಪಡಿಸಿದ್ದ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, 14 ವರ್ಷದ ಮಕ್ಕಳು ಕೂಡ ಕೊಕೇನ್, ಸಲ್ಯೂಷನ್ ಮೊದಲಾದ ಮಾದಕವಸ್ತುಗಳನ್ನು ಸೇವಿಸುವುದು ಕಂಡು ಬರುತ್ತಿದೆ. ಆದ್ದರಿಂದ ಮಕ್ಕಳಿಗೆ ಸ್ವಲ್ಪ ಸಮಯ ನೀಡಿ, ಏನು ಮಾಡುತ್ತಾರೆ. ಎಲ್ಲಿಗೆ ಹೋಗುತ್ತಾರೆ. ಯಾರೊಂದಿಗೆ ಇರುತ್ತಾರೆ ಎಂಬುದನ್ನು ಗಮನಿಸಿ, ಆ ಮೂಲಕ ದಾರಿತಪ್ಪದಂತೆ ನೋಡಿಕೊಳ್ಳಿ. ಮೊಬೈಲ್ ಎಷ್ಟು ಬೇಕೋ ಅಷ್ಟು ಬಳಸಿದರೆ ಉಪಯುಕ್ತ. ಅನಗತ್ಯವಾಗಿ ಬಳಸಿದರೆ ಹಾನಿಕಾರಕ. ಈ ಬಗ್ಗೆ ಮನವರಿಕೆ ಮಾಡಿಕೊಡಿ ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿ, ಮೊದಲೆಲ್ಲಾ ಬೇಸಿಗೆ ಬಂದರೆ ಮಕ್ಕಳು ಅಜ್ಜ–ಅಜ್ಜಿಯ ಮನೆಗೆ ಹೋಗುತ್ತಿದ್ದರು. ಈ ಸಂಪರ್ಕ ಯುಗದಲ್ಲಿ ಸಂಬಂಧಗಳಿಗೆ ಬೆಲೆ ಇಲ್ಲದಂತಾಗಿದೆ. ಪತಿ–ಪತ್ನಿ–ಮಗ ಮೂವರೇ ಒಂದು ಕುಟುಂಬ ಎಂಬಂತೆ ಆಗಿದೆ. ಇಂತಹ ಪರಿಸ್ಥಿತಿಯಲ್ಲಿ ನಗರ ಪ್ರದೇಶದವರು ಮಕ್ಕಳನ್ನು ಬೇಸಿಗೆ ಶಿಬಿರಗಳಿಗೆ ಕಳುಹಿಸಿ, ಕಲೆ, ಸಂಸ್ಕೃತಿ ಬಗ್ಗೆ ತಿಳಿಸುತ್ತಿರುವುದು ಉತ್ತಮವಾದುದು ಎಂದರು.

ರೋಟರಿ ಜಿಲ್ಲಾ ಗೌರ್ನರ್ ಯಶಸ್ವಿ ಸೋಮಶೇಖರ್, ನಿರಂತರ ರಂಗತಂಡದ ಸಂಸ್ಥಾಪಕ ಎ.ಎಂ.ಸುಗುಣ, ರೋಟರ್ಯಾಕ್ಟ್ ಕ್ಲಬ್ ಡಿಆರ್‌ಸಿಸಿ ಶಕುಂತಲಾ ಎಲಿಜಬೆತ್, ರಂಗಕರ್ಮಿ ದೀಪಕ್ ಮೈಸೂರು ಮಾತನಾಡಿದರು.

ನೈಪುಣ್ಯ ವಿದ್ಯಾರ್ಥಿಗಳಿಗೆ ಅಭಿನಂದನೆ...



ಮೈಸೂರು ಆರ್‌ಟಿನಗರದ ಐಸಿಎಸ್‌ಸಿ ಕ್ಯಾಂಪಸ್‌ನ 10ನೇ ತರಗತಿಯಲ್ಲಿ ಅತ್ಯುತ್ತಮ ಅಂಕಗಳಿಸಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಶಾಲೆಯ ಕ್ಯಾಂಪಸ್‌ನಲ್ಲಿ ಸಂಸ್ಥೆಯ ಕಾರ್ಯದರ್ಶಿ ಆರ್.ಕೌಟಿಲ್ಯ, ಪ್ರಾಂಶುಪಾಲೆ ದೇಚಮ್ಮಾ ಕೆ.ಎಸ್. ಅಭಿನಂದಿಸಿದರು.

ಅನಾಥಾಲಯ ಪ್ರವೇಶಾತಿಗೆ ಅರ್ಜಿ ಆಹ್ವಾನ

ಮೈಸೂರು: ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ವೀರಶೈವ ಅನಾಥಾಲಯ ಟ್ರಸ್ಟ್ ವತಿಯಿಂದ 2026–27ನೇ ಸಾಲಿನ ಪ್ರಥಮ, ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿರುವ ಶೇ.50 ಕ್ಕಿಂತ ಹೆಚ್ಚು ಅಂಕಗಳಿಸಿರುವ, ಆರ್ಥಿಕವಾಗಿ ಹಿಂದುಳಿದ ಗ್ರಾಮಾಂತರ ಭಾಗದ ವೀರಶೈವ ವಿದ್ಯಾರ್ಥಿಗಳಿಂದ ಅನಾಥಾಲಯ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಿದೆ. ಅರ್ಜಿಗಳನ್ನು ಸಂಸ್ಥೆಯ ಕಚೇರಿಯಲ್ಲಿ ವಿತರಿಸಲಾಗುವುದು. ಮೇ 15ರೊಳಗೆ ಭರ್ತಿ ಮಾಡಿ ಅರ್ಜಿ ಸಲ್ಲಿಸಬೇಕು. ಹೆಚ್ಚು ಅಂಕ ಪಡೆದ ಬಡ ವಿದ್ಯಾರ್ಥಿಗಳನ್ನು ಸಂದರ್ಶನದ ಮೂಲಕ ಆದ್ಯತೆ ಮೇರೆಗೆ ಪ್ರವೇಶಾತಿಗೆ ಆಯ್ಕೆ ಮಾಡಲಾಗುತ್ತದೆ. ಮೇ 17ರಂದು ಬೆಳಗ್ಗೆ 10 ಗಂಟೆಗೆ ಅನಾಥಾಲಯದ ಕಚೇರಿಯಲ್ಲಿ ಸಂದರ್ಶನ ನಡೆಯಲಿದ್ದು, ಸಂದರ್ಶನಕ್ಕೆ ವಿದ್ಯಾರ್ಥಿಗಳು ತಮ್ಮ ಪೋಷಕರನ್ನು ಕಡ್ಡಾಯವಾಗಿ ಜೊತೆಗೆ ಕರೆತರಬೇಕು. ಹೆಚ್ಚಿನ ಮಾಹಿತಿಗೆ ಮೊ:9916650106 ಸಂಪರ್ಕಿಸಬಹುದು.

ಕಮರ್ಷಿಯಲ್ ಸಿಲಿಂಡರ್ ದರ ಏರಿಕೆಗೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ತೀವ್ರ ಆಕ್ರೋಶ

■ ಬೆಲೆ ಏರಿಕೆ ಹಿಂಪಡೆಯಲು ಆಗ್ರಹ

ಮೈಸೂರು, ಮೇ 4(ಎಂಕೆ)–ಕೇಂದ್ರ ಸರ್ಕಾರವು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್‌ಗಳು ಮತ್ತು 5 ಕೆಜಿ ಸಿಲಿಂಡರ್‌ಗಳ ಬೆಲೆಯಲ್ಲಿ ತೀವ್ರ ಏರಿಕೆ ಮಾಡಿರುವುದಕ್ಕೆ ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)ಮೈಸೂರು ಜಿಲ್ಲಾ ಸಮಿತಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ಕೂಡಲೇ ಬೆಲೆ ಏರಿಕೆಯನ್ನು ಹಿಂದಕ್ಕೆ ಪಡೆಯಬೇಕು ಎಂದು ಒತ್ತಾಯಿಸಿದೆ.

ವಾಣಿಜ್ಯ ಸಿಲಿಂಡರ್ ದರಗಳಲ್ಲಿ ಸುಮಾರು 1 ಸಾವಿರ ರೂ.ಗಳಷ್ಟು ತೀವ್ರ ಏರಿಕೆ ಮಾಡಿದ್ದರಿಂದ ಬೇರೆಲ್ಲ ಸಾಮಗ್ರಿಗಳ ಬೆಲೆಗಳು ತೀವ್ರವಾಗಿ ಏರಿಕೆಯಾಗುತ್ತಿದೆ. ವಾಣಿಜ್ಯ ಸಂಸ್ಥೆಗಳು ಹೊರೆಗಳನ್ನು ಗ್ರಾಹಕರ ಮೇಲಾಕುತ್ತಿವೆ. ಇದರಿಂದ ಹಣದುಬ್ಬರ ಮತ್ತಷ್ಟು ಹೆಚ್ಚಾಗಲಿದ್ದು, ಅನೇಕ ಸಣ್ಣ ಸಂಸ್ಥೆಗಳು ಮುಚ್ಚುವಂತಾಗುತ್ತದೆ ಎಂದು ಆತಂಕ ವ್ಯಕ್ತಪಡಿಸಿದೆ.

ಗೃಹ ಬಳಕೆಯ 14 ಕೆಜಿ ಸಿಲಿಂಡರ್‌ಗಳ ಬೆಲೆ ಏರಿಕೆಯಾಗದಿದ್ದರೂ 5 ಕೆ.ಜಿ ಸಬ್ಸಿಡಿ ರಹಿತ ಸಿಲಿಂಡರ್‌ಗಳ ಬೆಲೆಯಲ್ಲಿ 261 ರೂ. ಹೆಚ್ಚಿಸಲಾಗಿದೆ. ಇದರಿಂದ ವಲಸೆ ಕಾರ್ಮಿಕರ ಮೇಲೆ ಅತ್ಯಂತ ಪ್ರತಿಕೂಲ ಪರಿಣಾಮ ಬೀರುತ್ತದೆ. ಕಳೆದ ಎರಡು ತಿಂಗಳಲ್ಲಿ ಮೋದಿ ಸರ್ಕಾರವು ವಾಣಿಜ್ಯ ಸಿಲಿಂಡರ್‌ಗಳ ಬೆಲೆಯನ್ನು ಎರಡನೇ ಬಾರಿ ಏರಿಕೆ ಮಾಡಿದೆ. ಸರ್ಕಾರವು ಎಲ್‌ಜಿಪಿ ಸಿಲಿಂಡರ್‌ಗಳ ಮೇಲಿನ ತೆರಿಗೆಗಳಿಂದ ಬರುವ ಆದಾಯವನ್ನು ಬಿಟ್ಟು ಕೊಡಲು ಸಿದ್ಧವಾಗಿದ್ದರೆ, ಸಾಮಾನ್ಯ ಜನರಿಗೆ ನಿರಾಳತೆ ದೊರಕುತ್ತಿತ್ತು. ಆದರೆ ತೆರಿಗೆ ಹಿಂಪಡೆಯುವ ನಿರ್ಧಾರ ಕೈಬಿಟ್ಟ ಸರ್ಕಾರ, ಬೆಲೆ ಹೆಚ್ಚಳದ ಜನ ವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಪತ್ರಿಕಾ ಪ್ರಕಟಣೆ ಮೂಲಕ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ



ಮೈಸೂರು,ಮೇ 4–ವಿ.ವಿ ಮೊಹಲ್ಲಾ ವಿಭಾಗ ವ್ಯಾಪ್ತಿಯ ವಿದ್ಯುತ್ ವಿತರಣಾ ಕೇಂದ್ರದಲ್ಲಿ 1ನೇ ತ್ರೈಮಾಸಿಕ ನಿರ್ವಹಣಾ ಕೆಲಸದ ನಿಮಿತ್ತ ಮೇ 5 ರಂದು ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ತೊಣಚಿಕೊಪ್ಪಲು, ಹರಿಹರ ಹೋಟೆಲ್, ಅಮ್ಮ ಕಾಂಪ್ಲೆಕ್ಸ್, ನ್ಯೂ ಕಾಂತರಾಜಅರಸ್ ರಸ್ತೆ, ಆರ್.ಟಿ.ಟಿ.ಸಿ ಕಾಂಪ್ಲೆಕ್ಸ್, ಅರವಿಂದನಗರ, ಕುವೆಂಪುನಗರ ಎಂ ಬ್ಲಾಕ್, ಎನ್ ಬ್ಲಾಕ್, ಕೆ ಬ್ಲಾಕ್, ಕುವೆಂಪುನಗರ ಕೆ.ಹೆಚ್.ಬಿ ಕಾಲೋನಿ, ಅನಿಕೇತನ ರಸ್ತೆ, ಪಡುವಣ ರಸ್ತೆ, ಸರಸ್ವತಿಪುರಂ 1 ರಿಂದ 4ನೇ ಮುಖ್ಯರಸ್ತೆ, ವಿಶ್ವಮಾನವ ಜೋಡಿ ರಸ್ತೆ, ಪಂಚಮಂತ್ರ ರಸ್ತೆ, ಎಂ ಬ್ಲಾಕ್ ಲೈಬ್ರರಿ, ಪಾಂಡುರಂಗ ದೇವಸ್ಥಾನ, ವಿವೇಕಾನಂದ ವೃತ್ತ, ವಿವೇಕಾನಂದ ನಗರ, ಇ.ಡಬ್ಲ್ಯೂ.ಎಸ್ ಗಣಪತಿ ದೇವಸ್ಥಾನ, ಎಂಎಲ್‌ಎ ವಿಶ್ವನಾಥ್ ಮನೆ ಸುತ್ತಮುತ್ತ, ಕೆನರಾ ಬ್ಯಾಂಕ್, ಬಿ.ಜಿ.ಎಸ್ ಬಾಲ ಜಗನ್ನಾಥ ಶಾಲೆ, ಎಸ್.ಬಿ.ಎಂ ಕಾಲೋನಿ, ಶಿವ ಟೆಂಪಲ್, ಸೂರ್ಯ ಲೇಔಟ್, ನಿಮಿಷಾಂಬ ಲೇಔಟ್, ಕಂದಾಯ ನಗರ 3ನೇ ಹಂತ, ಗಿರಿಯಪ್ಪ ನಿಂಗೇಗೌಡ ಲೇಔಟ್, ಟೆಂಪಲ್ ಬೆಲ್ ಲೇಔಟ್, ಮಹಾಲಿಂಗೇಶ್ವರ ದೇವಸ್ಥಾನ, ಕಬಿನಿ ಲೇಔಟ್, ಎಸ್.ಎಂ.ಎಸ್ ಸ್ಕೂಲ್ ಲೇಔಟ್, ಕಂದಾಯ ಲೇಔಟ್, ಹಂಸ ಲೇಔಟ್ 1ನೇ ಹಂತ, ಗಗನ ಶೇಖರ ಲೇಔಟ್, ಹುಲಿ ನಾರಾಯಣಪ್ಪ ಲೇಔಟ್, ಭವ್ಯ ಭಾರತಿ ಲೇಔಟ್, ಎಂ.ಡಿ.ಸಿ.ಸಿ ಬ್ಯಾಂಕ್ ಎಂಪ್ಲಾಯಿಸ್ ಲೇಔಟ್, ಟಿ.ಕೆ ಸ್ಟುಡಿಯೋ ಲೇಔಟ್, ಕಂದಾಯ ಲೇಔಟ್ 2ನೇ ಹಂತ, ತಪೋವನ, ಅನ್ನಪೂರ್ಣ ಲೇಔಟ್, ಎಂ.ಡಿ.ಸಿ.ಸಿ ಲೇಔಟ್, ಶ್ರೀರಾಂಪುರ, ಪ್ರೀತಿ ಲೇಔಟ್, ಡಿ.ವಿ.ಜಿ ಲೇಔಟ್, ಟಿ.ಕೆ ರಾಮ್ ಲೇಔಟ್, ಚಿದಾನಂದ ಮತ್ತು ರಕ್ಷಾ ಲೇಔಟ್, ಆರ್.ಕೆ ನಗರ ಕೆ ಬ್ಲಾಕ್, ವಾಸು ಲೇಔಟ್, ಮುಡಾ ಎಂಪ್ಲಾಯಿಸ್ ಲೇಔಟ್, ಮಾಧವ ಪಾರ್ಕ್, ಇ ಮತ್ತು ಎಫ್ ಬ್ಲಾಕ್, ಜನತಾನಗರ, ಶಾರದಾದೇವಿ ನಗರ, ನಿವೇದಿತಾನಗರ, ಬಸವೇಶ್ವರ ನಗರ, ಗಂಗೋತ್ರಿ ಹುಡ್ಕೋ ಲೇಔಟ್, ಸಬ್‌ರಿಜಿಸ್ಟಾರ್ ಆಫೀಸ್ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ನಿಧನ

ರವಿ ಸಾಗರ್



ಹುಣಸೂರು,ಮೇ4–ನಗರದ ಜೆಎಲ್‌ಬಿ ರಸ್ತೆಯಲ್ಲಿನ ಸುಬ್ರಹ್ಮಣ್ಯ ಚಿನ್ನಾಭರಣ ಮಳಿಗೆ ಮಾಲೀಕ ರವಿ ಸಾಗರ್(45) ಅವರು ಅನಾರೋಗ್ಯದಿಂದ ಸೋಮವಾರ ಬೆಳಗ್ಗೆ ನಿಧನರಾದರು.

ಇವರು ಪತ್ನಿ, ಪುತ್ರ, ತಂದೆ–ತಾಯಿ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ನಗರದ ಹಿಂದೂ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸತ್ಯನಾರಾಯಣ ರಾವ್ ರಾಶಿಂಕರ್



ಹುಣಸೂರು ನಗರದ ಜೆಎಲ್‌ಬಿ ರಸ್ತೆಯಲ್ಲಿ ಟೈಲರಿಂಗ್ ಅಂಗಡಿ ನಡೆಸುತ್ತಿದ್ದ ಹೆಚ್.ವಿ.ಸತ್ಯನಾರಾಯಣ ರಾವ್ ರಾಶಿಂಕರ್(60) ಅವರು ಸೋಮವಾರ(ಮೇ 4) ನಿಧನರಾದರು. ಇವರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸೋಮವಾರ ಸಂಜೆ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

05.5.2026 ಮಂಗಳವಾರ, ಮಳೆ ನಕ್ಷತ್ರ: ಭರಣಿ 27.04.2026ರಿಂದ 10.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಕೃಷ್ಣ ಪಕ್ಷ, ತಿಥಿ: ಚೌತಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11 ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.

■ **ಶಿವಶಕ್ತಿ ಸಾಮಾಜಿಕ ಮತ್ತು ಶೈಕ್ಷಣಿಕ ಟ್ರಸ್ಟ್** : ಸಾಧಕರಿಗೆ ಸನ್ಮಾನ ಕಾರ್ಯಕ್ರಮ, ಸಾನ್ನಿಧ್ಯ : ಕುದೇರು ಮಠಾಧ್ಯಕ್ಷ ಶ್ರೀ ಗುರುಶಾಂತ ಸ್ವಾಮೀಜಿ, ಉದ್ಘಾಟನೆ : ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಅಧ್ಯಕ್ಷತೆ : ಸೋಮಶೇಖರ್‌ಮೂರ್ತಿ, ಉಪಸ್ಥಿತರು : ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ. ಚಂದ್ರಶೇಖರ್, ಯೋಗಾಂಜನಪ್ಪ, ಶ್ರೀಮತಿ ರೇಣುಕಾರಾಜು, ಶ್ರೀಮತಿ ಶಾರದಾ ಸತ್ಯನಾರಾಯಣ, ಸ್ಥಳ: ಶ್ರೀ ಶಿವರಾತ್ರಿ ರಾಜೇಂದ್ರ ಭವನ, ಜೆಎಸ್‌ಎಸ್ ಆಸ್ಪತ್ರೆ ಆವರಣ, ಬೆಳಗ್ಗೆ 10ಕ್ಕೆ.

■ **ಶ್ರೀ ಅನ್ನಪೂರ್ಣೇಶ್ವರಿ ಹಾಗೂ ಬಲಮುರಿ ಗಣಪತಿ ದೇವಸ್ಥಾನ:** 21ನೇ ವಾರ್ಷಿಕೋತ್ಸವ ಅಂಗವಾಗಿ ಸಂಕಷ್ಟಹರ ಚತುರ್ಥಿಯಂದು ಸಂಜೆ 5 ಗಂಟೆಗೆ ಪಂಚಾಮೃತ ಅಭಿಷೇಕ; ಸಂಜೆ 6.30 ಗಂಟೆಗೆ ಮಹಾಗಣಪತಿ ಹಾಗೂ ಅನ್ನಪೂರ್ಣೇಶ್ವರಿ ಹೋಮ; ರಾತ್ರಿ 8 ಗಂಟೆಗೆ ಪೂರ್ಣಾಹುತಿ; ರಾತ್ರಿ 8.30 ಗಂಟೆಗೆ ಮಹಾಮಂಗಳಾರತಿ, ನಂತರ ಪ್ರಸಾದ ವಿನಿಯೋಗ, ಸ್ಥಳ: ಬಲಮುರಿ ಗಣಪತಿ ದೇವಸ್ಥಾನ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಬೊಜ್ಜು, ಸಕ್ಕರೆ ಕಾಯಿಲೆ, ಬಿಪಿ, ಕೀಲು ನೋವು, ಅಲರ್ಜಿ, ಚರ್ಮದ ರೋಗಗಳು, ಒತ್ತಡ, ಆತಂಕ, ಬಾಲನೆರೆ, ವಯೋಸಹಜ ಗುಣಗಳು, ದೃಷ್ಟಿಮಾಂದ್ಯ, ತಲೆನೋವು, ಕೆಮ್ಮು, ಅಸ್ತಮಾ, ಪಿಸಿಓಡಿ, ಪುರುಷ ಹಾಗೂ ಸ್ತ್ರೀ ಬಂಜೆತನ ತಪಾಸಣಾ ಶಿಬಿರ, ಬೆಳಗ್ಗೆ 9.30ರಿಂದ ಆರೋಗ್ಯ ತಪಾಸಣೆ ಮತ್ತು ಜಾಗೃತಿ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ಮೈಸೂರಿನ ಬ್ಯಾಂಟರ್ ಬಾಬು ಪಬ್ಲಿಕೇಷನ್** : ವಿಶ್ವ ವ್ಯಂಗ್ಯಚಿತ್ರಕಾರರ ದಿನಾಚರಣೆ ಅಂಗವಾಗಿ ಖ್ಯಾತ ವ್ಯಂಗ್ಯಚಿತ್ರಕಾರ, ಫುಲ್‌ಬ್ರೈಟ್ ಪ್ರಶಸ್ತಿ ಪುರಸ್ಕೃತ ಎಂ.ವಿ.ನಾಗೇಂದ್ರಬಾಬು ಅವರ ಯುದ್ಧ ಹಾಗೂ ಶಾಂತಿ ವ್ಯಂಗ್ಯ ಚಿತ್ರಕಲಾ ಪ್ರದರ್ಶನ, ಉದ್ಘಾಟನೆ : ಪ್ರಮತಿ ಶಿಕ್ಷಣ ಸಂಸ್ಥೆ ಸಂಸ್ಥಾಪಕ ಹೆಚ್.ವಿ. ರಾಜೀವ್, ಪ್ರಾಸ್ತಾವಿಕ ನುಡಿ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಅಧ್ಯಕ್ಷತೆ : ಶಿಲ್ಪ ಕಲಾವಿದ ಎಲ್.ಶಿವಲಿಂಗಪ್ಪ, ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ಅವರಿಂದ ಕಾರ್ಟೂನ್ ಸೂಪರ್ ಹೀರೋ 'ಆ್ಯಂಫಿ ಮ್ಯಾನ್' ಭಿತ್ತಿಚಿತ್ರ ಬಿಡುಗಡೆ, ಉಪಸ್ಥಿತರು: ಬ್ಯಾಂಟರ್ ಬಾಬು ಪಬ್ಲಿಕೇಷನ್‌ನ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಆರ್.ಯೋಗನರಸಿಂಹನ್, ಕಾರ್ಯದರ್ಶಿ ಆರ್.ಚಕ್ರಪಾಣಿ, ಸಂಚಾಲಕ ಎನ್.ಅನಂತ್, ಸ್ಥಳ: ಮೈಸೂರು ಆರ್ಟ್ ಗ್ಯಾಲರಿ, ರಾಮಾನುಜ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ಕನ್ನಡ ಸಾಹಿತ್ಯ ಪರಿಷತ್ತಿನ 112ನೇ ಸಂಸ್ಥಾಪನಾ ದಿನಾಚರಣೆ, ಅಧ್ಯಕ್ಷತೆ: ಹಿರಿಯ ಸಾಹಿತಿ ಡಾ.ಕೆ.ಅನಂತರಾಜು, ಪ್ರಾಸ್ತಾವಿಕ ನುಡಿ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಪದವಿಪೂರ್ವ ಶಿಕ್ಷಣ ಮಂಡಳಿ ಉಪನಿರ್ದೇಶಕಿ ಎಂ.ಪಿ.ನಾಗಮ್ಮ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಿ.ಉದಯ್‌ಕುಮಾರ್, ಸ್ಥಳ: ಪತ್ರಕರ್ತರ ಭವನ, ಮಧ್ಯಾಹ್ನ 12ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ–ಲೇಖನ ಮತ್ತು ಪ್ರಸ್ತುತಿ: ಟಿ.ಎಸ್.ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40–ಪ್ರಾಯೋಜಿತ ಕಾರ್ಯಕ್ರಮ ಕೆಎಸ್‌ಓಯು ಮುಕ್ತವಾಣಿ, ಪ್ರಾಯೋಜಕರು: ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಗಣಕ ವಿಜ್ಞಾನ ಅಧ್ಯಯನ ಮತ್ತು ಸಂಶೋಧನಾ ವಿಭಾಗದಲ್ಲಿರುವ ಅಧ್ಯಯನ ಅವಕಾಶಗಳನ್ನು ಕುರಿತು ವಿಭಾಗದ ಮುಖ್ಯಸ್ಥರಾದ ಡಾ.ಭವ್ಯಾ ಡಿ.ಎನ್. ಅವರೊಂದಿಗೆ ಸಂದರ್ಶನ, ಸಂದರ್ಶಕರು: ಲಕ್ಷ್ಮೀನಾರಾಯಣ ಎಸ್., ನಿರ್ಮಾಣ: ಎನ್.ಕೇಶವಮೂರ್ತಿ, 8.30 ಮತ್ತು ಸಂಜೆ 5.30– ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್–ಶಿಶುಗೀತೆಗಳ ಕಾರ್ಯಕ್ರಮ, 8.35 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಎ.ಕೆ.ಸಿ.ನಟರಾಜನ್ ಮತ್ತು ತಂಡದವರಿಂದ– ಕ್ಲಾರಿಯೋನೆಟ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹೊಂಗಿರಣ ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ: ಆರ್.ಲೋಕೇಶ್ವರಿ, ಬಿ. ಜಿ. ಕವಿತಾ ಹಾಗೂ ಎಸ್. ಲಕ್ಷ್ಮೀನಾರಾಯಣ

ಮಧ್ಯಾಹ್ನ: 12.05 ವನಿತಾ ವಿಹಾರ–ಮಂಡ್ಯ ಜಿಲ್ಲೆಯ ಜಾನಪದ ಜೆನ್ನಿಯರು ತಂಡದವರಿಂದ ಇತ್ತೀಚಿನ ದಿನಗಳಲ್ಲಿ ಮರೆಯಾಗುತ್ತಿರುವ ಜಾನಪದ ಗೀತೆಗಳ ಕುರಿತ ಕಾರ್ಯಕ್ರಮ ವೈವಿಧ್ಯ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಕೆ.ಎಂ.ಕುಸುಮ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಸ್.ಪಿ.ರಾಮ್–ಹಾಡುಗಾರಿಕೆ, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ– ಉಮಂಗ್, 4.00 ಕಥಾಕಾಲಕ್ಷೇಪ–ಶ್ರೀ ಪುರಂದರ ದಾಸರು, ಪ್ರಸ್ತುತಿ:ಸಂತ ಶ್ರೀ ಭದ್ರಗಿರಿ ಅಚ್ಯುತದಾಸರು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ– ಕಿಸಾನ್‌ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ಮಾಲಿನ್ಯವಾಗುತ್ತಿರುವ ಕೃಷಿ ಪರಿಸರದಲ್ಲಿ ಆಹಾರ ಸುರಕ್ಷತೆ ಈ ಕುರಿತು ನವದೆಹಲಿಯ ಭಾರತೀಯ ಕೃಷಿ ಅನುಸಂಧಾನ ಪರಿಷತ್ ನ ಉಪ ಮಹಾನಿರ್ದೇಶಕರಾದ ಡಾ. ಎನ್.ಕೆ. ಕೃಷ್ಣಕುಮಾರ್ ಅವರೊಂದಿಗೆ ಸಂದರ್ಶನ. ಸಂದರ್ಶಕರು : ಎನ್.ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ. ಪ್ರಸ್ತುತಿ–ದಿಗ್ವಿಜಯ್.ಬಿ, 8.00 ನಾಟಕ–ಕೃತ್ತಿಕಾ, ಕನ್ನಡದ ಮೊದಲ ಉಪಲಬ್ಧ ಗದ್ಯಕೃತಿ, ವಡ್ಡಾರಾಧನೆಯ ಕಾರ್ತಿಕ ಋಷಿಯ ಕಥೆ, ಬಾನುಲಿ ನಾಟಕ ರೂಪ, ಬಾನುಲಿಗೆ ಅಳವಡಿಕೆ–ಆರ್. ದಿಲೀಪ್ ಕುಮಾರ್, ನಿರ್ದೇಶನ ಮತ್ತು ನಿರ್ಮಾಣ–ಜಿ.ಶಾಂತಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಎ.ಎಸ್. ಪದ್ಮ–ವೀಣಾ ವಾದನ, 10.00ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ.ಎ.ಎಸ್.ಶಂಕರನಾರಾಯಣ, 10.30 ಸವಿನೆನಪು

■ **ಸುರಭಿ ಗಾನಕಲಾಮಂದಿರ ಚಾರಿಟಬಲ್ ಟ್ರಸ್ಟ್:** ವಿದುಷಿ ಡಾ.ಸುಕನ್ಯಾ ಪ್ರಭಾಕರ್ ಅವರಿಂದ ಶ್ರೀ ಸ್ವಾತಿ ತಿರುನಾಳ್ ಮಹಾರಾಜರ ಕೃಷ್ಣಪರ ರಚನೆಗಳ ಅಧ್ಯಯನ ಶಿಬಿರ, ಸ್ಥಳ: ಶ್ರೀಮತಿ ಲೀಲಾ ನಾಗರಾಜ್ ಅವರ ಸ್ವಗೃಹ, 13ನೇ ಮುಖ್ಯರಸ್ತೆ, ಸರಸ್ವತಿಪುರಂ, ಸಂಜೆ 4ಕ್ಕೆ.

■ **ಅದಮ್ಯ ರಂಗಶಾಲೆ, ವಿ.ಕೆ.ಪಬ್ಲಿಕ್ ಸ್ಕೂಲ್:** ಬಾಲಂ ಗೋಚಿ ಮಕ್ಕಳ ಬೇಸಿಗೆ ಶಿಬಿರದ ಸಮಾರೋಪ, ಅದಮ್ಯ ಕಾಯಕ ಯೋಗಿ ಪ್ರಶಸ್ತಿ ಪ್ರದಾನ ಹಾಗೂ ಮಕ್ಕಳ ನಾಟಕ ಪ್ರದರ್ಶನ ಕಾರ್ಯಕ್ರಮ, ಉದ್ಘಾಟನೆ : ಮೈಸೂರು ವಿಶ್ವ ವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ, ಆಶಯ ನುಡಿ : ಸಾಹಿತಿ ಟಿ.ಸತೀಶ್ ಜವರೇಗೌಡ, ಅಧ್ಯಕ್ಷತೆ : ವಿ.ಕೆ. ಪಬ್ಲಿಕ್ ಸ್ಕೂಲ್‌ನ ಕಾರ್ಯದರ್ಶಿ ರವಿಕುಮಾರ್ ಬೆಕ್ಕಾ, ಉಪಸ್ಥಿತರು: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಸ್ಥಳ: ಕಿರುರಂಗಮಂದಿರ, ಕಲಾಮಂದಿರದ ಆವರಣ, ಸಂಜೆ 6ಕ್ಕೆ

■ **ಬಸವ ಬಳಗಗಳ ಒಕ್ಕೂಟ:** ಬಸವ ಜಯಂತಿ, ಹಿರಿಯ ಕಲಾವಿದ ಎಲ್.ಶಿವಲಿಂಗಪ್ಪ ರಚಿತ ಮಹಾಮಾನವತಾವಾದಿ ಬಸವಣ್ಣ ವೀರವೈರಾಗ್ಯ ನಿಧಿ ಅಲ್ಲಮ ಪ್ರಭು ಕೃತಿಗಳ ಲೋಕಾರ್ಪಣೆ ಸಮಾರಂಭ, ಕೃತಿಗಳ ಲೋಕಾರ್ಪಣೆ: ಕೇಂದ್ರ ರೈಲ್ವೆ ಸಚಿವ ವಿ.ಸೋಮಣ್ಣ, ಕೃತಿಗಳ ಕುರಿತು: ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ವಿಶ್ರಾಂತ ಅಧ್ಯಕ್ಷ ಡಾ.ಪ್ರಧಾನ್ ಗುರುದತ್ತ, ಉಪಸ್ಥಿತರು: ಹಿರಿಯ ಕಲಾವಿದ ಎಲ್.ಶಿವಲಿಂಗಪ್ಪ, ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಸ್ಥಳ: ಸರ್ಕಾರಿ ಅತಿಥಿ ಗೃಹ, ನಜರ್‌ಬಾದ್, ಸಂಜೆ 6ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 5 ಮಂಗಳವಾರ 2026

ಸಂಪುಟ: 47 | ಸಂಚಿಕೆ: 19 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ಪಂಚ ರಾಜ್ಯಗಳ ಫಲಿತಾಂಶ

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಜಯಭೇರಿ

206 ಸ್ಥಾನ ಗೆದ್ದು ಅಧಿಕಾರ ಗದ್ದುಗೆಗೆ!

ಪ.ಬಂಗಾಳ: ಪಶ್ಚಿಮ ಬಂಗಾಳದಲ್ಲಿ ದ್ವಿಶತಕ ಸ್ಥಾನಗಳೊಂದಿಗೆ ಅದ್ವಿತೀಯ ಗೆಲುವು ದಾಖಲಿಸುವ ಮೂಲಕ ಬಿಜೆಪಿ ಇತಿಹಾಸ ಸೃಷ್ಟಿಸಿದೆ. ತೃಣಮೂಲ ಕಾಂಗ್ರೆಸ್ ನಾಯಕಿ ಮಮತಾ ಬ್ಯಾನರ್ಜಿ ಸುಮಾರು 15 ಸಾವಿರ ಮತಗಳ ಅಂತರದಲ್ಲಿ ಸೋಲುಂಡಿದ್ದು, ಈ ಮೂಲಕ ಅವರ 15 ವರ್ಷಗಳ ಸುದೀರ್ಘ ಆಡಳಿತ ಅಧಿಪತ್ಯಕ್ಕೆ ವಿರಾಮ ಬಿದ್ದಂತಾಗಿದೆ.



ಸುವೇಂಧು ಅಧಿಕಾರಿ

ಒಟ್ಟು 294 ಕ್ಷೇತ್ರಗಳಲ್ಲಿ ಬರೋಬ್ಬರಿ 206 ಸ್ಥಾನಗಳಲ್ಲಿ ಬಿಜೆಪಿ ಜಯಭೇರಿ ಭಾರಿಸಿದ್ದು, ಚುನಾವಣೆ ವೇಳೆ ಜಿದ್ದಾಜಿದ್ದಿ ನಡೆಸಿದ್ದ ಅಖಿಲ ಭಾರತ ತೃಣಮೂಲ ಕಾಂಗ್ರೆಸ್(ಎಐಟಿಸಿ) 81 ಸ್ಥಾನ ಗಳಿಸಲಷ್ಟೇ ಶಕ್ತವಾಗಿದೆ. ರಾಷ್ಟ್ರೀಯ ಕಾಂಗ್ರೆಸ್ ಕೇವಲ 2 ಸ್ಥಾನಗಳಲ್ಲಿ ಗೆಲುವು ಪಡೆದಿದೆ. ಎಜೆಯುಪಿ 2, ಸಿಪಿಐ(ಎಂ) ಹಾಗೂ ಎಐಎಸ್‌ಎಫ್ ತಲಾ ಒಂದು ಸ್ಥಾನ ಗೆದ್ದಿವೆ. ಪ್ರಧಾನಿ ಮೋದಿ ಅಲೆ ಹಾಗೂ ಚುನಾವಣಾ ಚಾಣಕ್ಯ ಅಮಿತ್ ಶಾ ತಂತ್ರಗಾರಿಕೆ ಪರಿಣಾಮ ಜನಸಂಘದ ಸಂಸ್ಥಾಪಕ ಶ್ಯಾಮ್‌ಪ್ರಸಾದ್ ಮುಖರ್ಜಿ ಅವರ ತವರಿನಲ್ಲಿ ಮೊದಲ ಬಾರಿ ಕಮಲ ಅರಳಿದೆ. ■6ನೇ ಪುಟಕ್ಕೆ

15 ಸಾವಿರಕ್ಕೂ ಅಧಿಕ ಮತಗಳಿಂದ ಸಿಎಂ ಮಮತಾ ಬ್ಯಾನರ್ಜಿಗೆ ಸೋಲು

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಟಿಎಂಸಿಗೆ ತೀವ್ರ ಮುಖಭಂಗವಾಗಿದೆ. 294 ಕ್ಷೇತ್ರಗಳಲ್ಲಿ ಟಿಎಂಸಿ 81 ರಲ್ಲಿ ಮಾತ್ರ ಗೆಲುವು ಸಾಧಿಸಿದೆ. ಈ ಮಧ್ಯೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಸೋಲು ಕಂಡಿದ್ದಾರೆ. ಪಶ್ಚಿಮ ಬಂಗಾಳದ ಭವಾನಿಪುರದಲ್ಲಿ ಸ್ಪರ್ಧಿಸಿದ್ದ ಮಮತಾ ಬ್ಯಾನರ್ಜಿ ಅವರು ಬಿಜೆಪಿಯ ಅಭ್ಯರ್ಥಿ ಸುವೇಂಧು ಅಧಿಕಾರಿ ವಿರುದ್ಧ ಸುಮಾರು 15 ಸಾವಿರಕ್ಕೂ ಹೆಚ್ಚು ಮತಗಳಿಂದ ಸೋಲು ಕಂಡಿದ್ದಾರೆ.



ತಮಿಳ್ನಾಡಲ್ಲಿ ವಿಜಯ್ ಜನ ನಾಯಗನ್

ಟಿವಿಕೆ 108; ಅತೀ ದೊಡ್ಡ ಪಕ್ಷ

ತಮಿಳುನಾಡು: ತಮಿಳುನಾಡಿನಲ್ಲಿ ನಟ ವಿಜಯ್ ಕಮಾಲ್ ಮಾಡಿದ್ದಾರೆ. ಇವರ ನೇತೃತ್ವದ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಪಕ್ಷವು ಅಚ್ಚರಿ ಸಾಧನೆ ಮೂಲಕ ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ.



ವಿಜಯ್

ಈ ಬಾರಿಯ ಚುನಾವಣೆ ಎಲ್ಲಾ ಲೆಕ್ಕಾಚಾರಗಳನ್ನು ಬುಡ ಮೇಲು ಮಾಡಿದೆ. ಸ್ಥಾಪನೆಯಾದ ಕೇವಲ ಎರಡು ವರ್ಷಗಳಲ್ಲೇ ತಮಿಳುನಾಡಿನಲ್ಲಿ ಅಧಿಕಾರ ಹಿಡಿಯುವ ಹಂತಕ್ಕೇರಿ ಇತಿಹಾಸ ನಿರ್ಮಿಸುವ ಮೂಲಕ ಟಿವಿಕೆ, ಆಡಳಿತಾರೂಢ ಡಿಎಂಕೆ ಮತ್ತು ಮುಖ್ಯ ವಿರೋಧ ಪಕ್ಷ ಎಐಎಡಿಎಂಕೆಗೆ ತೀವ್ರ ಆಘಾತ ನೀಡಿದೆ. ಒಟ್ಟು 234 ಸ್ಥಾನಗಳ ಪೈಕಿ ನಟ ವಿಜಯ್ ನೇತೃತ್ವದ ಟಿವಿಕೆ 108 ಸ್ಥಾನಗಳಲ್ಲಿ ಗೆಲುವು ಸಾಧಿಸಿದ್ದು, ಡಿಎಂಕೆ 59 ಹಾಗೂ ಮಾಜಿ ಮುಖ್ಯಮಂತ್ರಿ ಎಡಪ್ಪಾಡಿ ಕೆ.ಪಳನಿಸ್ವಾಮಿ ನೇತೃತ್ವದ ಎಐಎಡಿ ಎಂಕೆ 47 ಸ್ಥಾನ, ಕಾಂಗ್ರೆಸ್ 5, ಪಿಎಂಕೆ 4 ಸ್ಥಾನ ಗಳಿಸಿವೆ. ಟಿವಿಕೆ ಅತಿದೊಡ್ಡ ಪಕ್ಷವಾಗಿ ಹೊರ ಹೊಮ್ಮುವ ಮೂಲಕ ಸರ್ಕಾರ ರಚಿಸುವುದು ಬಹುತೇಕ ಖಚಿತವಾಗಿದೆಯಾದರೂ ಸರಳ ಬಹುಮತಕ್ಕೆ 118 ಸ್ಥಾನಗಳ ಬೇಕಿದೆ. ಈ ನಿಟ್ಟಿನಲ್ಲಿ ತೀವ್ರ ರೀತಿಯ ಬೆಳವಣಿಗೆಗಳು ನಡೆಯುತ್ತಿವೆ. ■6ನೇ ಪುಟಕ್ಕೆ

ಕೊಳತ್ತೂರಲ್ಲಿ ಟಿವಿಕೆ ಅಭ್ಯರ್ಥಿ ಎದುರು ಸ್ಟಾಲಿನ್‌ಗೆ ಸೋಲು

ಚೆನ್ನೈ: ತಮಿಳುನಾಡಿನ ಕೊಳತ್ತೂರು ಕ್ಷೇತ್ರದಲ್ಲಿ ಮುಖ್ಯಮಂತ್ರಿ ಎಂ.ಕೆ ಸ್ಟಾಲಿನ್ ಅವರು ಟಿವಿಕೆ ಅಭ್ಯರ್ಥಿ ವಿ.ಎಸ್ ಬಾಬು ಅವರ ಎದುರು 8,795 ಮತಗಳ ಅಂತರದಲ್ಲಿ ಸೋಲನನುಭವಿಸಿದ್ದಾರೆ. ಬಾಬು ಅವರು 82,997 ಮತಗಳನ್ನು ಪಡೆದರೆ, ಸ್ಟಾಲಿನ್ ಅವರು 74,202 ಮತಗಳನ್ನು ಪಡೆದರು.



ಟಿವಿಕೆ ಮುಖ್ಯಸ್ಥ ವಿಜಯ್ ಅವರು ಗೆದ್ದಿದ್ದಾರೆ. ಟಿವಿಕೆಯ ಎಲ್ಲ ಅಭ್ಯರ್ಥಿಗಳ ಗೆಲುವು ವಿಜಯ್ ಅವರ ಗೆಲುವಿದ್ದಂತೆ ಎಂದು ಬಾಬು ಹೇಳಿದ್ದಾರೆ.

ಕೇರಳದಲ್ಲಿ ಯುಡಿಎಫ್ 10 ವರ್ಷಗಳ ಬಳಿಕ ಅಧಿಕಾರಕ್ಕೆ

ಕೇರಳ: ಕೇರಳದಲ್ಲಿ ದಶಕದ ನಂತರ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಮೈತ್ರಿಕೂಟ ಅಧಿಕಾರದ ಚುಕ್ಕಾಣಿ ಹಿಡಿಯುತ್ತಿದ್ದು, ಆಡಳಿತಾರೂಢ ಎಲ್‌ಡಿಎಫ್ ಕೂಟವೂ ಭಾರೀ ಮುಖಭಂಗ ಅನುಭವಿಸಿದೆ.




ವೇಣುಗೋಪಾಲ್

ಒಟ್ಟು 140 ಸದಸ್ಯ ಸ್ಥಾನಗಳಲ್ಲಿ ಈ ಬಾರಿ ಚುನಾವಣೆಯಲ್ಲಿ ಕಾಂಗ್ರೆಸ್ 63 ಸೇರಿದಂತೆ ಯುಡಿಎಫ್ ಮಿತ್ರ ಪಕ್ಷಗಳು 102 ಸ್ಥಾನಗಳಲ್ಲಿ ಜಯಭೇರಿ ಬಾರಿಸಿವೆ. ಇನ್ನು ಸಿಪಿಐಎಂ 26 ಸೇರಿದಂತೆ ಎಲ್‌ಡಿಎಫ್ ಮೈತ್ರಿಕೂಟ 35 ಸ್ಥಾನಗಳಲ್ಲಿ ಗೆಲುವು ದಾಖಲಿಸಿವೆ. ಬಿಜೆಪಿ ಮೂರು ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಕೇರಳದಲ್ಲಿ ಖಾತೆ ತೆರೆದಿದೆ.

ಕೇರಳದಲ್ಲಿ ಚುನಾವಣೋತ್ತರ ಸಮೀಕ್ಷೆಗಳು ಎಲ್‌ಡಿಎಫ್ ಮತ್ತು ಕಾಂಗ್ರೆಸ್ ನೇತೃತ್ವದ ಯುಡಿಎಫ್ ನಡುವೆ ನಿಕಟ ಪೈಪೋಟಿ ಇರಲಿದೆ ಎಂದು ಹೇಳಿದ್ದವು. ಹಲವು ಸಂಸ್ಥೆಗಳು ಮತ್ತೆ ಎಲ್‌ಡಿಎಫ್‌ಗೆ ಅಧಿಕಾರ ಸಿಗಲಿದೆ ಎಂದು ಅಂದಾಜಿಸಿದ್ದವು. ಆದರೆ, ಸಮೀಕ್ಷೆ ಲೆಕ್ಕಾಚಾರ ಮೀರಿ, ಯುಡಿಎಫ್ ಅಧಿಕ ಸ್ಥಾನಗಳನ್ನು ಗಳಿಸುವ ಮೂಲಕ ಅಧಿಕಾರಕ್ಕೆ ಮರಳಿದೆ. 2001ರ ವಿಧಾನಸಭಾ ಚುನಾವಣೆಯಲ್ಲಿ ಯುಡಿಎಫ್ 99 ಸ್ಥಾನಗಳನ್ನು ಗೆದ್ದು ಇತಿಹಾಸ ನಿರ್ಮಿಸಿತ್ತು. ■6ನೇ ಪುಟಕ್ಕೆ

ಹಾಲಿ ಮುಖ್ಯಮಂತ್ರಿ ಪಿಣರಾಯ್ ಗೆಲುವು


ಈ ಬಾರಿ ಕೇರಳದಲ್ಲಿ ಆಡಳಿತ ವಿರೋಧಿ ಅಲೆಗೆ ಎಲ್‌ಡಿಎಫ್ ಬಲಿಯಾಗಿದೆ. ಆದಾಗ್ಯೂ ಧರ್ಮಧಂ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಹಾಲಿ ಮುಖ್ಯಮಂತ್ರಿ, ಸಿಪಿಐ(ಎಂ) ನಾಯಕ ಪಿಣರಾಯ್ ವಿಜಯನ್ ಗೆಲುವು ಪಡೆದಿದ್ದಾರೆ. ಆರಂಭಿಕ ಆರು ಸುತ್ತುಗಳ ಮತ ಎಣಿಕೆಯಲ್ಲಿ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಅಬ್ದುಲ್ ರಶೀದ್ ಎದುರು ಹಿನ್ನಡೆ ಅನುಭವಿಸಿದ್ದ ಪಿಣರಾಯ್, ನಂತರದ 9 ಸುತ್ತುಗಳಲ್ಲಿ ಚೇತರಿಸಿಕೊಂಡು ಅಂತಿಮವಾಗಿ 19247 ಮತಗಳ ಅಂತರದಲ್ಲಿ ಗೆಲುವು ದಾಖಲಿಸಿದರು.



ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್ ಗೆಲುವು

ಅಸ್ಸಾಂ: ಚಹಾ ತೋಟಗಳ ನಾಡು ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್ ಗೆಲುವಿನೊಂದಿಗೆ ಸತತ ಮೂರನೇ ಬಾರಿ ಅಧಿಕಾರದ ಚುಕ್ಕಾಣಿ ಹಿಡಿಯಲು ಸಜ್ಜಾಗಿದೆ.

ಅಸ್ಸಾಂ ಒಟ್ಟು 126 ವಿಧಾನಸಭಾ ಕ್ಷೇತ್ರಗಳನ್ನು ಹೊಂದಿದ್ದು, ಇದರಲ್ಲಿ ಬಿಜೆಪಿ 82 ಸ್ಥಾನಗಳಲ್ಲಿ ಗೆಲುವು ಸಾಧಿಸುವ ಮೂಲಕ ಬಿಜೆಪಿ ಮತ್ತೆ ಅಧಿಕಾರ ಪಡೆದಿದೆ. ಎದುರಾಳಿ ಕಾಂಗ್ರೆಸ್ 19 ಸ್ಥಾನಗಳಲ್ಲಿ ಗೆಲ್ಲುವಲ್ಲಿ ಶಕ್ತವಾಗಿದ್ದು, ಬಿಓಪಿಎಫ್ 10, ಎಜಿಪಿ 10, ಎಐಯುಡಿಎಫ್ ಹಾಗೂ ಆರ್‌ಜೆಆರ್‌ಡಿ ತಲಾ 2 ಮತ್ತು ಎಐಟಿಸಿ 1 ಸ್ಥಾನದಲ್ಲಿ ಜಯ ಗಳಿಸಿದೆ.



ಹಿಮಂತ ಬಿಸ್ವಾ

ಹಾಲಿ ಸಿಎಂ ಹಿಮಂತ ಬಿಸ್ವಾ ಶರ್ಮಾ, ಹಿತೇಂದ್ರನಾಥ್ ಗೋಸ್ವಾಮಿ, ರನೋಜ್ ಪೆಗು, ಚರಣ್ ಬೊರೊ, ಜಿಬಿನ್ ಗೊಗೊಯ್, ಪ್ರದ್ಯುತ್ ಬೋರ್ಡೋಲೊಯ್ ಸೇರಿದಂತೆ ಬಿಜೆಪಿಯ ಹಲವು ಪ್ರಮುಖರು ಜಯಭೇರಿ ಭಾರಿಸಿದ್ದು, ಕಾಂಗ್ರೆಸ್ ಅಧ್ಯಕ್ಷ ಗೌರವ್ ಗೋಗೋಯ್ ಸುಮಾರು 23 ಸಾವಿರ ಮತಗಳ ಅಂತರ ದಿಂದ ಹೀನಾಯ ಸೋಲು ಅನುಭವಿಸಿದ್ದಾರೆ. ಅಲ್ಲದೆ ಸೈಲೆನ್ ಸೋನೋವಾಲ್, ಮೀರಾ ಗೋಸ್ವಾಮಿ ಸೇರಿದಂತೆ ಹಲವು ಪ್ರಮುಖ ಕೈ ನಾಯಕರು ಸೋಲುಂಡಿದ್ದಾರೆ. ■6ನೇ ಪುಟಕ್ಕೆ

ಸಿಎಂ ಹಿಮಂತ ಗೆಲುವು: ಗೋಗೋಯ್‌ಗೆ ಸೋಲು


ಹಾಲಿ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ಅವರು ಜಲುಕ್ಬರಿ ಕ್ಷೇತ್ರದಿಂದ ಸ್ಪರ್ಧಿಸಿ ಕಾಂಗ್ರೆಸ್‌ನ ಮಹಿಳಾ ಅಭ್ಯರ್ಥಿ ಬಿದಿಶಾ ನಿಯೋಗ್ ವಿರುದ್ಧ ಬರೋಬ್ಬರಿ 89,434 ಭಾರೀ ಮತಗಳ ಅಂತರ ದಿಂದ ಗೆಲುವು ದಾಖಲಿಸಿದ್ದಾರೆ. ಮತ್ತೊಂದೆಡೆ ಕಾಂಗ್ರೆಸ್ ಸಿಎಂ ಅಭ್ಯರ್ಥಿ ಗೌರವ್ ಗೋಗೋಯ್ ಹೀನಾಯವಾಗಿ ಸೋಲನ್ನನುಭವಿಸಿದ್ದಾರೆ. ಜೋರ್ಹತ್ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ ವಿರುದ್ಧ 23,182 ಮತಗಳಿಂದ ಸೋತಿದ್ದಾರೆ.



ಗೋಗೋಯ್

ಪುದುಚೇರಿಯಲ್ಲಿ ಎನ್‌ಡಿಎ ಮತ್ತೆ ಅಧಿಕಾರಕ್ಕೆ

ಪುದುಚೇರಿ: ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಂದಾದ ಪುದುಚೇರಿಯಲ್ಲಿ ಆಲ್ ಇಂಡಿಯಾ ಎನ್‌ಆರ್ ಕಾಂಗ್ರೆಸ್ ನೇತೃತ್ವದ ಎನ್‌ಡಿಎ ಒಕ್ಕೂಟ ಭರ್ಜರಿ ಗೆಲುವು ಸಾಧಿಸುವ ಮೂಲಕ ಸತತ 2ನೇ ಅವಧಿಗೆ ಅಧಿಕಾರ ಹಿಡಿದಿದೆ.



ರಂಗಸಾಮಿ

ಪುದುಚೇರಿಯ ಒಟ್ಟು 30 ಕ್ಷೇತ್ರಗಳಲ್ಲಿ ಆಲ್ ಇಂಡಿಯಾ ಎನ್‌ಆರ್ ಕಾಂಗ್ರೆಸ್ 12, ಡಿಎಂಕೆ 5, ಬಿಜೆಪಿ 4, ಟಿವಿಕೆ 2, ಕಾಂಗ್ರೆಸ್, ಎಲ್‌ಜೆಕೆ, ಎಡಿಎಂಕೆ, ಎನ್‌ವೈಎಂಕೆ ತಲಾ ಒಂದು ಕ್ಷೇತ್ರ ಹಾಗೂ ಮೂವರು ಸ್ವತಂತ್ರ ಅಭ್ಯರ್ಥಿಗಳು ಗೆಲುವು ಪಡೆದಿದ್ದಾರೆ. ಬಹುಮತಕ್ಕೆ ಅಗತ್ಯವಾದ 16 ಸ್ಥಾನಗಳನ್ನು ಎನ್‌ಡಿಯ ಮೈತ್ರಿಕೂಟ ಗಳಿಸಿಕೊಂಡಿದೆ. ತಟ್ಟಂಡವಾಡಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಹಾಲಿ ಸಿಎಂ ಎನ್.ರಂಗಸ್ವಾಮಿ 4,441 ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಹಿರಿಯ ಕಾಂಗ್ರೆಸ್ ನಾಯಕ ವಿ.ವೈತಿಲಿಂಗಂ ಹೀನಾಯ ಸೋಲು ಕಂಡಿದ್ದಾರೆ. ಅದೇ ರೀತಿ ಅರಿಯನ್ನುಪ್ಪಂ ಕ್ಷೇತ್ರದಿಂದ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ವಿಜಯಲಕ್ಷ್ಮಿ ವಿರುದ್ಧ ಎನ್‌ಆರ್ ಕಾಂಗ್ರೆಸ್‌ನ ಸಿ.ಅಯ್ಯಪ್ಪನ್ ಗೆಲುವು ದಾಖಲಿಸಿದ್ದಾರೆ. ಕಳೆದ ಚುನಾವಣೆಯಲ್ಲಿ 30 ಸದಸ್ಯ ಬಲದ ವಿಧಾನಸಭೆಯಲ್ಲಿ ಎನ್‌ಡಿಎ ಮೈತ್ರಿಕೂಟವು ಸರಳ ಬಹುಮತ ಪಡೆದು, ಅಧಿಕಾರ ಹಿಡಿದಿತ್ತು.

ರಂಗಸಾಮಿ ಐದನೇ ಬಾರಿ ಮುಖ್ಯಮಂತ್ರಿ!

ತಟ್ಟಂಚವಾಡಿ ವಿಧಾನಸಭಾ ಕ್ಷೇತ್ರದಲ್ಲಿ ಗೆದ್ದಿರುವ ಎನ್.ರಂಗಸಾಮಿ 5ನೇ ಬಾರಿ ಮುಖ್ಯಮಂತ್ರಿಯಾಗಿ ಆಯ್ಕೆಯಾಗುವ ನಿರೀಕ್ಷೆಯಿದೆ. ಎನ್.ರಂಗಸಾಮಿ ಅವರು ಪ್ರಾಯೋಗಿಕ ಆಡಳಿತ, ಕಲ್ಯಾಣ ಕಾರ್ಯಕ್ರಮಗಳಿಂದ ಮತ್ತು ಜನಸಾಮಾನ್ಯರ ಜೊತೆ ವ್ಯವಹರಿಸುವ ರೀತಿ ಮೂಲಕ ಗಮನ ಸೆಳೆದಿದ್ದು, ತಮ್ಮ 75ನೇ ವಯಸ್ಸಿನಲ್ಲಿ ಮತ್ತೊಮ್ಮೆ ಮುಖ್ಯಮಂತ್ರಿ ಗಾದಿಗೆ ಏರುವುದು ಬಹುತೇಕ ಖಚಿತವಾಗಿದೆ. 2021ರಲ್ಲಿ ಎನ್‌ಡಿಎ ಮೈತ್ರಿಕೂಟಕ್ಕೆ ಸೇರಿ ನಾಲ್ಕನೇ ಬಾರಿ ಸಿಎಂ ಆಗಿ, ಪೆರುಂತಲೈವರ್ ಕಾಮರಾಜರ್ ವಸತಿ ಯೋಜನೆ ಸೇರಿದಂತೆ ಹಲವಾರು ಪ್ರಮುಖ ಕಲ್ಯಾಣ ಕಾರ್ಯಕ್ರಮಗಳನ್ನು ಆರಂಭಿಸಿದರು.

ದಾವಣಗೆರೆ ದಕ್ಷಿಣ, ಬಾಗಲಕೋಟೆ ಮತ್ತೆ 'ಕೈ'ವಶ

ಬಾಗಲಕೋಟೆ	
ಉಮೇಶ್ ಮೇಟಿ	98,919
ವೀರಣ್ಣ ಚರಂತಿಮಠ	76,587
ಗೆಲುವಿನ ಅಂತರ	22,332

ದಾವಣಗೆರೆ ದಕ್ಷಿಣ	
ಸಮರ್ಥ್ ಶಾಮನೂರು	69,578
ಶ್ರೀನಿವಾಸ್ ಟಿ.ದಾಸಕರಿಯಪ್ಪ	63,870
ಗೆಲುವಿನ ಅಂತರ	5,708

ಸಮರ್ಥ್ ಶಾಮನೂರು ಮಲ್ಲಿಕಾರ್ಜುನ, ಉಮೇಶ್ ಮೇಟಿ ಗೆಲುವು

ಬೆಂಗಳೂರು: ರಾಜ್ಯದ ಎರಡು ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲಿ ಆಡಳಿತಾರೂಢ ಕಾಂಗ್ರೆಸ್ ಜಯಭೇರಿ ಭಾರಿಸಿದೆ.



ಉಮೇಶ್ ಮೇಟಿ

ಬಾಗಲಕೋಟೆ ಕ್ಷೇತ್ರದಲ್ಲಿ ದಿವಂಗತ ಶಾಸಕ ಹೆಚ್.ವೈ.ಮೇಟಿ ಅವರ ಪುತ್ರ ಉಮೇಶ್ ಮೇಟಿ ಭಾರೀ ಮತಗಳ ಅಂತರದಿಂದ ವಿಜಯಶಾಲಿಯಾಗಿದ್ದು, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ದಿವಂಗತ ಶಾಮನೂರು ಶಿವಶಂಕರಪ್ಪ ಅವರ ಮೊಮ್ಮಗ ಸಮರ್ಥ್ ಶಾಮನೂರು ಮಲ್ಲಿಕಾರ್ಜುನ ಪ್ರಯಾಸದ ಗೆಲುವು ಕಂಡಿದ್ದಾರೆ.

ಚೊಚ್ಚಲು ಸ್ಪರ್ಧೆಯಲ್ಲೇ ದಾಖಲೆ: ಬಾಗಲಕೋಟೆ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಉಮೇಶ್ ಮೇಟಿ ತಮ್ಮ ಚೊಚ್ಚಲ ಸ್ಪರ್ಧೆಯಲ್ಲೇ 22,332 ಮತಗಳ ಭಾರೀ ಅಂತರದಲ್ಲಿ ಗೆಲುವು ದಾಖಲಿಸಿ ದ್ದಾರೆ. ಇವರು ಒಟ್ಟು 98,919 ಮತ ಗಳಿಸಿದ್ದು, ಪ್ರತಿಸ್ಪರ್ಧಿ ಬಿಜೆಪಿಯ ವೀರಣ್ಣ ಚರಂತಿಮಠ್ ಅವರಿಗೆ 76,587 ಮತಗಳು ಸಂದಿವೆ. ಒಟ್ಟು ಮತದಾನದಲ್ಲಿ ಕಾಂಗ್ರೆಸ್ ಶೇ.55.41 ಹಾಗೂ ಬಿಜೆಪಿ ಶೇ.42.9 ರಷ್ಟು ಮತ ಗಳಿಸಿವೆ.

ಪ್ರಯಾಸದ ಗೆಲುವು: ಚುನಾವಣೆ ವೇಳೆ ನಡೆದ ವ್ಯತಿರಿಕ್ತ ಬೆಳವಣಿಗೆ ನಡುವೆಯೂ ಕಾಂಗ್ರೆಸ್ ದಾವಣಗೆರೆಯಲ್ಲಿ ಪ್ರಯಾಸದ ಗೆಲುವು ಕಂಡಿದೆ. ಕಾಂಗ್ರೆಸ್ ಅಭ್ಯರ್ಥಿ ಸಮರ್ಥ್ ಶಾಮನೂರು ಮಲ್ಲಿಕಾರ್ಜುನ 5,708 ಅತ್ಯಲ್ಪ ಮತಗಳ ಅಂತರದಲ್ಲಿ ಗೆದ್ದಿದ್ದಾರೆ. ಇವರು ಒಟ್ಟು 69,578 ಮತ ಪಡೆದಿದ್ದು, ಪ್ರತಿಸ್ಪರ್ಧಿ ಬಿಜೆಪಿಯ ಶ್ರೀನಿವಾಸ ಟಿ.ದಾಸಕರಿಯಪ್ಪ 63,870 ಮತಗಳೊಂದಿಗೆ ಪರಾಜಿತರಾಗಿದ್ದಾರೆ. ಈ ಚುನಾವಣೆಯಲ್ಲಿ ಕಾಂಗ್ರೆಸ್ ಶೇ.43.95 ಹಾಗೂ ಬಿಜೆಪಿ ಶೇ.40.34 ಮತ ಗಳಿಕೆ ಮಾಡಿವೆ.



ಸಮರ್ಥ್ ಶಾಮನೂರು

ಇನ್ನು ಎಸ್‌ಡಿಪಿಐ ಅಭ್ಯರ್ಥಿ ಅಫ್ಸರ್ ಕೊಡ್ಲಿಪೇಟೆ 18,485(ಶೇ.11.99) ಮತಗಳನ್ನು ಪಡೆದಿದ್ದಾರೆ. ಈ ಮೂಲಕ ಎಸ್‌ಡಿಪಿಐ 3ನೇ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದು, ಕಾಂಗ್ರೆಸ್‌ಗೆ ಭವಿಷ್ಯದಲ್ಲಿ ಅಲ್ಪಸಂಖ್ಯಾತ ಮತಗಳು ಕೈತಪ್ಪುವ ಆತಂಕ ಶುರುವಾಗಿದೆ. ■6ನೇ ಪುಟಕ್ಕೆ

ಉಪಸಮರ ಸೋಲು ಒಪ್ಪಿಕೊಳ್ತೇವೆ

ಬೆಂಗಳೂರು, ಮೇ 4(ಕೆಎಂಶಿ)– ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಬಿಜೆಪಿಗೆ ಗೆಲುವಿನ ವಿಶ್ವಾಸವಿತ್ತು. ಆದರೆ, ಸೋಲು ಒಪ್ಪಿಕೊಳ್ಳುವುದಾಗಿ ಪಕ್ಷದ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಇಂದಿಲ್ಲಿ ಪ್ರತಿಕ್ರಿಯಿಸಿದ್ದಾರೆ.




ವಿಜಯೇಂದ್ರ

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಜೊತೆ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆಯಲ್ಲಿ ಕಾಂಗ್ರೆಸ್ ಗೆದ್ದಿದ್ದರೂ ಎರಡೂ ಕ್ಷೇತ್ರಗಳಲ್ಲಿ ನಮ್ಮ ಕಾರ್ಯಕರ್ತರು ಸಾಕಷ್ಟು ಶ್ರಮ ಹಾಕಿದ್ದಾರೆ ಎಂದರು. ಮುಖ್ಯ ಮಂತ್ರಿ ಸಿದ್ದರಾಮಯ್ಯ ಅಲ್ಲದೆ, ಸಚಿವ ಸಂಪುಟದ ಸದಸ್ಯರೂ ಬಾಗಲಕೋಟೆಯಲ್ಲಿ 15 ದಿನ ಬಿಡಾರ ಹೂಡಿದ್ದರು. ಉಪಚುನಾವಣೆ ಗೆದ್ದಾಕ್ಷಣ ಕಾಂಗ್ರೆಸ್ ಕಡೆ ಜನರ ಒಲವಿದೆ ಎನ್ನಲಾಗದು ಎಂದು ಅವರು ಪ್ರತಿಕ್ರಿಯಿಸಿದ್ದಾರೆ.

ಕೇರಳದಲ್ಲಿ ಕಾಂಗ್ರೆಸ್ ಉತ್ತಮ ಪ್ರದರ್ಶನ; ಪಶ್ಚಿಮ ಬಂಗಾಳ, ತಮಿಳುನಾಡಿನಲ್ಲಿ ಆಡಳಿತ ವಿರೋಧಿ ಅಲೆ

ಬೆಂಗಳೂರು: ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸ್ ನಿರೀಕ್ಷೆಗಳನ್ನು ಪೂರೈಸಿದೆ ಅಥವಾ ಮೀರಿದೆ. ಕೆಲವು ಪ್ರದೇಶಗಳಲ್ಲಿನ ಫಲಿತಾಂಶಗಳು ಬದಲಾಗುತ್ತಿರುವ ಮತದಾರರ ಭಾವನೆಗಳನ್ನು ಪ್ರತಿಬಿಂಬಿಸುತ್ತವೆ ಎಂದು ಪಂಚರಾಜ್ಯಗಳ ಚುನಾವಣಾ ಫಲಿತಾಂಶ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಸೋಮವಾರ ಹೇಳಿದ್ದಾರೆ.



ಅಸ್ಸಾಂನಲ್ಲಿ ಜನಾದೇಶವನ್ನು ಒಪ್ಪಿಕೊಂಡಿದ್ದೇವೆ. ಕೇರಳದಲ್ಲಿ, ನಿರೀಕ್ಷೆಗಿಂತ ಹೆಚ್ಚಿನ ಸ್ಥಾನಗಳನ್ನು ಗೆದ್ದಿದ್ದೇವೆ. ಸುಮಾರು 76 ರಿಂದ 80 ಸ್ಥಾನಗಳನ್ನು ನಿರೀಕ್ಷಿಸಿದ್ದೆವು. ಆದರೆ, ಸುಮಾರು 95 ಸ್ಥಾನಗಳಿಗೆ ಏರಿದ್ದೇವೆ. ಪಶ್ಚಿಮ ಬಂಗಾಳ ಮತ್ತು ತಮಿಳುನಾಡಿನಲ್ಲಿ ಆಡಳಿತ ವಿರೋಧಿ ಅಲೆ ಇದ್ದಿರಬಹುದು. ಅದು ಫಲಿತಾಂಶಗಳ ಮೇಲೆ ಪ್ರಭಾವ ಬೀರಿರಬಹುದು ಎಂದರು.

ಎನ್‌ಡಿಎ ಮೈತ್ರಿಕೂಟದ ಮೇಲಿನ ಜನರ ನಂಬಿಕೆಯ ಫಲವಿದು

ಬೆಂಗಳೂರು, ಮೇ 4(ಕೆಎಂಶಿ)– ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ, ತಮಿಳುನಾಡು ವಿಧಾನಸಭಾ ಚುನಾವಣೆಗಳ ಫಲಿತಾಂಶ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರದ ಸಬ್‌ಕಾ ಸಾಥ್, ಸಬ್‌ಕಾ ವಿಕಾಸ್, ಸಬ್‌ಕಾ ವಿಶ್ವಾಸ್' ತತ್ವಗಳ ■6ನೇ ಪುಟಕ್ಕೆ



ದೇಶದ ಒಟ್ಟು 7 ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಯಲ್ಲಿ ಬಿಜೆಪಿ ಮೇಲುಗೈ

ಬೆಂಗಳೂರು: ಕರ್ನಾಟಕದ ಎರಡು ಕ್ಷೇತ್ರ ಸೇರಿದಂತೆ ದೇಶದ ವಿವಿಧ 7 ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪಚುನಾವಣೆಯಲ್ಲೂ ಬಿಜೆಪಿ ಮೇಲುಗೈ ಸಾಧಿಸಿದೆ. ಕರ್ನಾಟಕದ ಬಾಗಲಕೋಟೆ, ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ದಾಖಲಿಸಿದ್ದು, ವಿವಿಧ ರಾಜ್ಯಗಳ ನಾಲ್ಕು ಕ್ಷೇತ್ರಗಳಲ್ಲಿ ಬಿಜೆಪಿ ಹಾಗೂ ಒಂದು ಕ್ಷೇತ್ರದಲ್ಲಿ ಎನ್‌ಸಿಪಿ ಗೆಲುವು ಪಡೆದಿವೆ. ಗುಜರಾತ್‌ನ ■6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಹುಡುಗ : ನಿನ್ನ ಹೆಸರೇನು?
ಹುಡುಗಿ : ಎಲ್ಲರೂ ನನ್ನ ಅಕ್ಕ ಅಂತ ಕರೀತಾರೆ
ಹುಡುಗ : ಓಹ್! ಅದಕ್ಕೆ ಎಲ್ಲರೂ ನನ್ನ ಈ ನಡುವೆ 'ಭಾವ' ಅಂತ ಕರೆಂಯೋಕೆ ಶುರು ಮಾಡಿದ್ದಾರೆ.

ಮೈಸೂರು ಮಿತ್ರ

ಮಂಗಳವಾರ, ಮೇ 5, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.


ಅಮೃತ ವಾಹಿನಿ..........

ಕಿರಿಯರಿದ್ದಾಗ ಹಿರಿಯರನ್ನು ಗೌರವಿಸಿ, ಸಬಲರಿದ್ದಾಗ ದುರ್ಬಲರಿಗೆ ಸಹಾಯ ಮಾಡಿ. ಯಾಕೆಂದರೆ ಬದುಕಿನಲ್ಲಿ ನೀವೂ ಒಂದು ದಿನ ಹಿರಿಯರಾಗುತ್ತೀರಿ, ದುರ್ಬಲರಾಗುತ್ತೀರಿ.–ಕಲಾಂ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಪ್ರಯತ್ನಕ್ಕೆ ಪರಮೇಶ್ವರನೂ ಸಹಾಯ ಮಾಡುವನು.

ನಿಮ್ಮ ಪತ್ರಗಳು

ಬಿಸಿಲಿನಲ್ಲಿ ಬೆವರು ಸುರಿಸುವ ಶ್ರಮಿಕರಿಗೆ ಸಿಗಲಿ ವಿಶೇಷ ಸೌಲಭ್ಯ



ಮಾನ್ಯರೆ,

ಪ್ರಸ್ತುತ ರಾಜ್ಯ ಸೇರಿದಂತೆ ದೇಶದಾದ್ಯಂತ ಬೇಸಿಗೆಯ ಬಿಸಿಲಿನ ತಾಪಮಾನ ಏರುತ್ತಲೇ ಸಾಗಿದ್ದು, ಜನ ಸಾಮಾನ್ಯರು ರಸ್ತೆಯಲ್ಲಿ ಓಡಾಡಲೂ ಅಸಾಧ್ಯವಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇಂತಹ ಸುಡುವ ಬಿಸಿಲಿನಲ್ಲಿಯೂ ಹೊಟ್ಟೆಪಾಡಿಗಾಗಿ ರಸ್ತೆಗೆ ಡಾಂಬರು ಹಾಕುವವರು, ಗುಂಡಿ ತೋಡುವ ಕಾರ್ಮಿಕರು, ಕಟ್ಟಡ ನಿರ್ಮಾಣದ ಕೆಲಸಗಾರರು ಹಾಗೂ ಕೃಷಿ ಕೂಲಿ ಕಾರ್ಮಿಕರು ವಿಶ್ರಾಂತಿಯಿಲ್ಲದೆ ದುಡಿಯುತ್ತಿದ್ದಾರೆ. ಬೆಳಿಗ್ಗೆಯಿಂದ ಸಂಜೆಯವರೆಗೆ ನೇರವಾಗಿ ಸೂರ್ಯನ ಶಾಖಕ್ಕೆ ಮೈಯೊಡ್ಡಿ ಕೆಲಸ ಮಾಡುವ ಈ ಅಸಂಘಟಿತ ಕಾರ್ಮಿಕರಿಗೆ ಉಷ್ಣಾಘಾತವಾಗಿ ಆರೋಗ್ಯ ಏರುಪೇರಾಗುವ ಅಪಾಯ ಹೆಚ್ಚಿದೆ.

ಇವರ ಕಡುಕಷ್ಟವನ್ನು ಪರಿಗಣಿಸಿ ಸರ್ಕಾರವು ತಕ್ಷಣವೇ ಕೆಲವು ವಿಶೇಷ ಕ್ರಮಗಳನ್ನು ಕೈಗೊಳ್ಳಬೇಕಿದೆ. ಮುಖ್ಯವಾಗಿ, ಮಧ್ಯಾಹ್ನದ ತೀವ್ರ ತಾಪಮಾನವಿರುವ ಅವಧಿಯಲ್ಲಿ, ಅಂದರೆ 12 ರಿಂದ 4 ಗಂಟೆಯವರೆಗೆ ಕಡ್ಡಾಯವಾಗಿ ಕೆಲಸಕ್ಕೆ ವಿರಾಮ ಘೋಷಿಸಬೇಕು. ಈ ಅವಧಿಯ ಕೆಲಸವನ್ನು ಬೆಳಿಗ್ಗೆ ಅಥವಾ ಸಂಜೆಯ ತಂಪಾದ ವೇಳೆಗೆ ಹೊಂದಾಣಿಕೆ ಮಾಡಿಕೊಡಲು ಉದ್ಯೋಗದಾತರಿಗೆ ಸೂಚಿಸಬೇಕು. ಕೆಲಸದ ಸ್ಥಳಗಳಲ್ಲಿ ತಂಪಾದ ಕುಡಿಯುವ ನೀರು, ನೆರಳಿನ ವ್ಯವಸ್ಥೆ ಹಾಗೂ ತುರ್ತು ಚಿಕಿತ್ಸೆಗಾಗಿ ಒಆರ್‌ಎಸ್‌ನಂತಹ ಕಿಟ್‌ಗಳನ್ನು ಒದಗಿಸುವುದು ಸರ್ಕಾರದ ಜವಾಬ್ದಾರಿಯಾಗಿದೆ. ಇದರೊಂದಿಗೆ, ಜೀವದ ಹಂಗು ತೊರೆದು ಶ್ರಮಿಸುವ ಈ ವರ್ಗದವರಿಗೆ ವಿಶೇಷ ಬೇಸಿಗೆ ಭತ್ಯೆ ನೀಡುವ ಮೂಲಕ ಸರ್ಕಾರ ಅವರ ಸಾಮಾಜಿಕ ಹಿತವನ್ನು ಕಾಯಬೇಕೆಂದು ಈ ಮೂಲಕ ವಿನಂತಿಸುತ್ತೇನೆ.

–ಬಿ.ಗಣೇಶ, ಕೆ.ಜಿ.ಕೊಪ್ಪಲು, ಮೈಸೂರು.

ಪರಿಸರ ನೀತಿಯ ವೈಫಲ್ಯ ಸಲ್ಲ

ಮಾನ್ಯರೇ,

ಕರ್ನಾಟಕದಲ್ಲಿ ಅದರಲ್ಲೂ ಪ್ರಮುಖವಾಗಿ ತುಮಕೂರು ಜಿಲ್ಲೆಯಲ್ಲಿ ಒಂದೇ ದಿನ ಸರಿ ಸುಮಾರು 80 ನವಿಲುಗಳ ಸಾವು ನಮ್ಮ ಪ್ರತಿಕ್ರಿಯಾತ್ಮಕ ವನ್ಯಜೀವಿ ನೀತಿಗೆ ಹಿಡಿದ ಕೈಗನ್ನಡಿ. ರಾಷ್ಟ್ರಪಕ್ಷಿ ಹೆಣವಾದಾಗ ಮಾತ್ರ ಎಚ್ಚೆತ್ತುಕೊಳ್ಳುವ ವ್ಯವಸ್ಥೆ ಒಂದು ವ್ಯವಸ್ಥಿತ ಸೋಲು. ನಮಗೆ ಈಗ ಬೇಕಿರುವುದು ಕೇವಲ ತನಿಖೆಯಲ್ಲ, ಬದಲಾಗಿ ಬಯೋ–ಡಿಜಿಟಲ್ ಕವಚ. ಹೆಚ್ಚಿನ ಅಪಾಯವಿರುವ ವಲಯಗಳಲ್ಲಿ ಎಐ ಆಧಾರಿತ ಅಕೌಸ್ಟಿಕ್ ಬಯೋ–ಸೆನ್ಸರ್‌ಗಳನ್ನು ಅಳವಡಿಸುವುದರಿಂದ ಹಕ್ಕಿಗಳ ಉಸಿರಾಟದ ಏರುಪೇರನ್ನು ಮೊದಲೇ ಪತ್ತೆ ಹಚ್ಚಿ ಭೋಪಾಲ್ ಲ್ಯಾಬ್ ವರದಿಗಾಗಿ ಕಾಯುವ ಅಮೂಲ್ಯ ಸಮಯ ಉಳಿಸಬಹುದು. ವಲಸೆ ಹಕ್ಕಿಗಳ ಮಾರ್ಗವನ್ನು ಸ್ಯಾಟಲೈಟ್ ಮ್ಯಾಪಿಂಗ್ ಮೂಲಕ ಗಮನಿಸಿ ಒನ್ ಹೆಲ್ತ್ ಡೇಟಾ ಪ್ಲಾಟ್‌ಫಾರ್ಮ್ ಸೃಜಿಸುವುದು ಇಂದು ಅತ್ಯಗತ್ಯವಾಗಿದೆ. ಸಂರಕ್ಷಣೆ ಕೇವಲ ಭಾಷಣಕ್ಕೆ ಸೀಮಿತವಾಗಬಾರದು ನಮ್ಮ ತಂತ್ರಜ್ಞಾನವು, ರೋಗಕಾರಕಗಳು ಹರಡುವ ಮೊದಲೇ ಅವುಗಳನ್ನು ಪತ್ತೆಹಚ್ಚುವಂತಿರಬೇಕು. ಇಲ್ಲದಿದ್ದರೆ ನಮ್ಮ ಪರಿಸರ ಕಾಳಜಿ ಬರಿ ಪೊಳ್ಳು ವಾದವಷ್ಟೇ.

– ಡಾ. ಎಚ್.ಕೆ. ವಿಜಯಕುಮಾರ, ಮೈಸೂರು.

ಆಕಾಶವಾಣಿ ಎದುರು ಮೀನು ಮಾರಾಟ ಕೇಂದ್ರ ಇರುವುದು ಸರಿಯೇ?

ಮಾನ್ಯರೆ,



ಇದು, ಮೈಸೂರಿನ ಕೆ.ಆರ್‌ಎಸ್ ರಸ್ತೆಯ ಆಕಾಶವಾಣಿ ಕೇಂದ್ರದ ಎದುರು ಇರುವ ಮೀನು ಮಾರಾಟ ಕೇಂದ್ರ. ಇದಕ್ಕೆ ಹೊಂದಿಕೊಂಡಂತೆ ಹಿರಿಯ ನಾಗರಿಕರೇ ಹೆಚ್ಚಿನ ಸಂಖ್ಯೆಯಲ್ಲಿ ವಾಯುವಿಹಾರಕ್ಕೆ ಬರುವ ಮೈಸೂರಿನ ಪ್ರತಿಷ್ಠಿತ ಚೆಲುವಾಂಬ ಪಾರ್ಕ್ ಇದೆ. ಈ ಮೀನು ಮಾರಾಟ ಕೇಂದ್ರದಲ್ಲಿ ರಾತ್ರಿ 10 ಗಂಟೆಯ ತನಕವೂ ಫಿಷ್, ಚಿಕನ್ ಕಬಾಬ್, ಇನ್ನಿತರೆ ಖಾದ್ಯ ಮಾರಾಟ ಮಾಡುವುದರಿಂದ ಇದರ ವಾಸನೆ ಹಿಡಿದು ಬರುವ ಬೀದಿ ನಾಯಿಗಳಿಂದ ಇದರ ಸುತ್ತ ಮುತ್ತಲಿನ ಪ್ರದೇಶ ಅನೈರ್ಮಲ್ಯದಿಂದ ಕೂಡಿದೆ. ಇದರ ಎದುರುಗಡೆಯೇ ಶತಮಾನದ ಹೊಸ್ತಿಲಲ್ಲಿರುವ ಪ್ರತಿಷ್ಠಿತ ಮೈಸೂರು ಆಕಾಶವಾಣಿ ಕೇಂದ್ರವಿದೆ. ಆಕಾಶವಾಣಿಯ ಸಿಬ್ಬಂದಿ ವರ್ಗದವರು ಈ ಮೀನು ಮಾರಾಟ ಕೇಂದ್ರವನ್ನು ಬೇರೆಡೆಗೆ ಸ್ಥಳಾಂತರ ಮಾಡಲು ಇದುವರೆಗೂ ಯಾರಿಗೂ ದೂರು ನೀಡದೇ ಇರುವುದು ಆಶ್ಚರ್ಯವೆನಿಸುತ್ತದೆ. ಶುದ್ಧ ಗಾಳಿ ಕುಡಿಯಲು ಚೆಲುವಾಂಬ ಪಾರ್ಕ್‌ಗೆ ಬರುವ ಹಿರಿಯ ನಾಗರಿಕರು ಸಹ ಇದನ್ನು ಮೌನವಾಗಿಯೇ ಸಹಿಸಿಕೊಂಡಿದ್ದಾರೆ. ನಗರ ಪಾಲಿಕೆಯ ಆರೋಗ್ಯಾಧಿಕಾರಿಗಳು ಖುದ್ದು ಭೇಟಿ ನೀಡಿ ಪರಿಶೀಲಿಸಿ, ಈ ಮೀನು ಮಾರಾಟ ಕೇಂದ್ರವನ್ನು ಬೇರೆಡೆಗೆ ಸ್ಥಳಾಂತರ ಮಾಡಲು ಕ್ರಮ ಕೈಗೊಳ್ಳಬೇಕಿದೆ.

– ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ಒಳ್ಳೆಯವರಿಗೆ ಕಾಲವಿಲ್ಲ !

ಮಾನ್ಯರೆ,

ಬೆಸ್ಕಾಂನಲ್ಲಿ ಜಾಗೃತ ದಳದ ಎಸ್‌ಪಿಯಾಗಿದ್ದ ಹಿರಿಯ ಐಪಿಎಸ್ ಅಧಿಕಾರಿ ಶ್ರೀಮತಿ ಎಲ್.ಲಾವಣ್ಯ, ಕ್ಯಾನ್ಸರ್ ರೋಗಕ್ಕೆ ತುತ್ತಾಗಿ ಕಿರಿಯ ವಯಸ್ಸಿನಲ್ಲೇ ಮರಣ ಹೊಂದಿರುವುದು ತೀರಾ ದುರದೃಷ್ಟಕರವಾಗಿದೆ. ಅವರು ಪೊಲೀಸ್ ಅಧಿಕಾರಿಯಾಗಿ ಮಹತ್ವದ ಜವಾಬ್ದಾರಿಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿ, ಇಲಾಖೆಯಲ್ಲಿ ದಕ್ಷ ಅಧಿಕಾರಿಣಿ ಎಂಬ ಪ್ರಶಂಸೆಗೆ ಪಾತ್ರರಾಗಿದ್ದರು. ಆದರೆ ಕೇವಲ 40 ವಯಸ್ಸಿಗೆ ಕ್ಯಾನ್ಸರ್ ಮಹಾಮಾರಿ ಅವರ ಭವ್ಯ ಭವಿಷ್ಯವನ್ನೇ ಅಳಿಸಿ ಹಾಕಿತು. ಒಳ್ಳೆಯವರಿಗೆ ಕಾಲವಿಲ್ಲ ಎಂಬ ಮಾತು ಮತ್ತೊಮ್ಮೆ ಸಾಬೀತಾಗಿದೆ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.



ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ: 94815 33167

ಬಹುಮುಖಿ

ಕನ್ನಡ ಸಾಹಿತ್ಯ ಪರಿಷತ್ತಿನ ಕಥೆ–ವ್ಯಥೆ

ಆಗಿನ್ನೂ ಮೈಸೂರು ರಾಜ್ಯಕ್ಕೆ ಕರ್ನಾಟಕವೆಂದು ನಾಮಕರಣವನ್ನೇ ಮಾಡಿರಲಿಲ್ಲ. ಅಷ್ಟೇ ಏಕೆ ಏಕೀಕರಣವೇ ಆಗಿರಲಿಲ್ಲ. ಒಂದೆಡೆ ಮೈಸೂರು ಸಂಸ್ಥಾನ, ಮತ್ತೊಂದೆಡೆ ಮುಂಬೈ ಸಂಸ್ಥಾನ, ಇನ್ನೊಂದೆಡೆ ಮದ್ರಾಸ್ ಸಂಸ್ಥಾನ, ಮಗದೊಂದೆಡೆ ಹೈದರಾಬಾದ್ ಸಂಸ್ಥಾನ. ಈ ರೀತಿ ಹರಿದು ಹಂಚಿ ದಿಕ್ಕಾಪಾಲಾಗಿ ಕನ್ನಡಿಗರೆಲ್ಲಾ ಒಂದು ರೀತಿ ದಿಕ್ಕೆಟ್ಟು ಹೋಗಿದ್ದರು. ಒಬ್ಬರಿಗೊಬ್ಬರು ಅಪರಿಚಿತರಂತಾಗಿ ಒಗ್ಗೂಡುವಿಕೆ ಇಲ್ಲವಾಗಿತ್ತು. ಹಾಗಾಗಿ ತಮಿಳು, ತೆಲುಗು, ಮರಾಠಿ ಭಾಷೆಗಳ ಪ್ರಭಾವ ತಾರಕಕ್ಕೇರಿತ್ತು. ಆಗ ತುರ್ತಾಗಿ ಕನ್ನಡ ಭಾಷೆಗೆ ಶಕ್ತಿ ತುಂಬುವ ಕೆಲಸ ಆಗಬೇಕಾಗಿತ್ತು. ಆ ಕಾಲಕ್ಕೆ ದಿವಾನರಾಗಿದ್ದ ಸರ್.ಎಂ.ವಿಶ್ವೇಶ್ವರಯ್ಯ ಅವರು ಆಸಕ್ತಿ ವಹಿಸಿ ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ಕಾಳಜಿಯಿಂದ ಮೈಸೂರು ಸಂಪದಭ್ಯುದಯ ಸಮಾಜ ಎಂಬ ಸಂಸ್ಥೆಯನ್ನು 1913ರಲ್ಲಿ ಹುಟ್ಟುಹಾಕಿ ಇದರ ಮೇಲುಸ್ತುವಾರಿಯನ್ನು ನೋಡಿಕೊಳ್ಳುವ ಹೊಣೆಯನ್ನು ಎಚ್.ವಿ.ನಂಜುಂಡಯ್ಯ ಅವರಿಗೆ ವಹಿಸಿದರು. ನಂತರದ ದಿನಗಳಲ್ಲಿ ಮುಂದೆ ಈ ಸಮಾಜದ ವಾರ್ಷಿಕ ಅಧಿವೇಶನ 1914ರಲ್ಲಿ ಜರುಗಿದ್ದಾಗ ಅಲ್ಲಿ ಸೇರಿದ್ದ ಬಹಳಷ್ಟು ಕನ್ನಡಾಭಿಮಾನಿ ಗಣ್ಯರ ಚರ್ಚೆ, ಸಲಹೆಯಿಂದ ಸಂಪೂರ್ಣವಾಗಿ ಕನ್ನಡ ಭಾಷೆಯ ಅಭಿವೃದ್ಧಿಗಾಗಿ ಬೆಂಗಾವಲು ರೀತಿಯ ಪಡೆಯೊಂದನ್ನು ಕಟ್ಟಲು ನಿರ್ಧರಿಸಲಾಯಿತು. ಅದು ಕನ್ನಡ ಉಳಿಸಿ ಬೆಳೆಸಲು ಸ್ವತಂತ್ರಾಧಿಕಾರವುಳ್ಳ ಸಂಸ್ಥೆಯಾಗಿರಬೇಕೆಂಬುದು ಎಲ್ಲರ ಆಶಯವಾಗಿತ್ತು. ಇದಕ್ಕೆ ಅಂದಿನ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಒತ್ತಾಸೆಯು ದೊರೆಯಿತು. ಜೊತೆಗೆ ಅಂದು ಕನ್ನಡದಲ್ಲೊಂದು ಮೈಲಿಗಲ್ಲಾಗಬಹುದಾದ ಮತ್ತೊಂದು ನಿರ್ಣಯವನ್ನು ಕೈಗೊಳ್ಳಲಾಯಿತು. ಅದೇ ಕನ್ನಡ ಭಾಷೆಯ ಇತಿಹಾಸದಲ್ಲೇ ಮೊಟ್ಟ ಮೊದಲಿಗೆ 1915ರ ಮೇ 3ರಿಂದ 6ರವರೆಗೆ ನಾಲ್ಕು ದಿನಗಳ ಕಾಲ ಬೆಂಗಳೂರಿನ ಕೋಟೆಯ ಸರ್ಕಾರಿ ಪ್ರೌಢಶಾಲೆಯಲ್ಲಿ ಹೆಚ್.ವಿ. ನಂಜುಂಡಯ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನ.

ಇದರ ಫಲವಾಗಿ ಅದೇ ಸಮ್ಮೇಳನದ 3ನೇ ದಿನ ನಡೆದ ಮಹಾಸಭೆಯಲ್ಲಿ ಸ್ವಾತಂತ್ರ್ಯ ಪೂರ್ವದಲ್ಲೇ ಅಂದರೆ 1915ರ ಮೇ 5ರಂದು ಅಂದಿನ ಇಪ್ಪತ್ತು ಕನ್ನಡ ಭಾಷಿಕರ ಸಂಸ್ಥಾನಗಳಿಂದ ಬಂದಿದ್ದ ಗಣ್ಯ ಸಾಹಿತಿಗಳ, ಕವಿಗಳ, ಪತ್ರಕರ್ತರ, ಕನ್ನಡಾಭಿಮಾನಿಗಳ, ಕನ್ನಡಪರ ಸಂಘಟನೆಗಳ ನೇತಾರರ ಮಹತ್ವದ ಸಭೆಯಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಜನ್ಮತಾಳಿತು. ಹೆಚ್.ವಿ.ನಂಜುಂಡಯ್ಯನವರೇ ಪರಿಷತ್‌ನ ಮೊದಲ ಅಧ್ಯಕ್ಷರಾದರು. ಅದು ಕನ್ನಡಿಗರ ಕನಸಿನ ಸಂಸ್ಥೆಯೊಂದು ಅಸ್ತಿತ್ವಕ್ಕೆ ಬಂದ ಶುಭದಿನವಾದದ್ದು ಈಗ ಇತಿಹಾಸ.

1915ರಿಂದ 1920ರವರೆಗೆ ಐದು ವರ್ಷ ಕಾಲ ಪರಿಷತ್ತಿನ ಅಧ್ಯಕ್ಷರಾಗಿದ್ದ ಹೆಚ್.ವಿ.ನಂಜುಂಡಯ್ಯ ಅವರು 1915 ಮತ್ತು 1916 ಹಾಗೂ 1917ರಲ್ಲಿ ನಡೆದ ಪ್ರಾರಂಭದ ಮೂರೂ ವರ್ಷಗಳ ಕನ್ನಡ ಸಾಹಿತ್ಯ ಸಮ್ಮೇಳನಗಳಿಗೂ ಅವರೇ ಅಧ್ಯಕ್ಷರಾಗಿದ್ದರು. ಇದೊಂದು ದಾಖಲೆಯೂ ಹೌದು. 1920ರಲ್ಲಿ ಹೆಚ್.ವಿ.ನಂಜುಂಡಯ್ಯನವರು ನಿಧನರಾದ ನಂತರ 1946ರ ತನಕ ಪರಿಷತ್ತಿನ ಅಧ್ಯಕ್ಷ ಪದವಿಯು ರಾಜಮನೆತನದವರಿಗೆ ಮಾತ್ರ ಸೀಮಿತವಾಗಿ ಚುನಾಯಿತ ಉಪಾಧ್ಯಕ್ಷರು ಪರಿಷತ್ತಿನ ಆಡಳಿತವನ್ನು ನಿರ್ವಹಿಸುತ್ತಿದ್ದರು. ಈ ಅವಧಿಯಲ್ಲಿ ರಾವ್ ಬಹದ್ದೂರ್ ಎಂ.ಶಾಮರಾವ್ (1915–1919), ಕರ್ಪೂರ ಶ್ರೀನಿವಾಸರಾವ್ (1919–1933), ಡಿವಿಜಿ (1934–1937), ಬಿಎಂಶ್ರೀ (1938–1942), ಮಾಸ್ತಿ (1943–1947) ಅವರುಗಳು ಉಪಾಧ್ಯಕ್ಷರಾಗಿ ಪರಿಷತ್ತನ್ನು ಕಟ್ಟಿಬೆಳೆಸಿದ್ದಾರೆ. ಆರಂಭದಿಂದ ಕರ್ನಾಟಕ ಸಾಹಿತ್ಯ ಪರಿಷತ್ತು ಎಂದಿದ್ದ ಹೆಸರು 1938ರಲ್ಲಿ ರಂ.ರಾ. ದಿವಾಕರ ಅವರ ಅಧ್ಯಕ್ಷತೆಯಲ್ಲಿ ಬಳ್ಳಾರಿಯಲ್ಲಿ ನಡೆದ 23ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸರ್ವಸದಸ್ಯರ ಮಹಾಸಭೆಯಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಎಂದು ಬದಲಾಯಿತು. ಹಾಗೆಯೇ ಕನ್ನಡ ಸಾಹಿತ್ಯ ಸಮ್ಮೇಳನದ ಹೆಸರು ಕೂಡ ವಿಶಾಲ ವ್ಯಾಪ್ತಿ ಹೊಂದಿ 1976ರಲ್ಲಿ ಎಸ್.ವಿ. ರಂಗಣ್ಣ ಅವರ ಅಧ್ಯಕ್ಷತೆಯಲ್ಲಿ ಶಿವಮೊಗ್ಗದಲ್ಲಿ ನಡೆದ 49ನೇ ಸಮ್ಮೇಳನದಿಂದ 'ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ' ಎಂದು ಕರೆಯಲಾಗುತ್ತಿದೆ.

ಬೆಂಗಳೂರಿನ ಚಾಮರಾಜಪೇಟೆಯ ನಾಲ್ಕನೆ ಮುಖ್ಯರಸ್ತೆಯ ನಾನಾರಾಯ ಎಂಬುವವರ ಮನೆಯ ಒಂದು ಕೊಠಡಿಯಲ್ಲಿ ಕಾರ್ಯಾರಂಭ ಮಾಡಿದ ಕನ್ನಡ ಸಾಹಿತ್ಯ ಪರಿಷತ್ತು ನಂತರದ ದಿನಗಳಲ್ಲಿ 1923ರ ಹೊತ್ತಿಗೆ ಶಂಕರಪುರದ ವಾಜಪೇಯಿಂ ಸೂರಪ್ಪನವರ ಇಡೀ ಮನೆಯನ್ನು ಬಾಡಿಗೆಗೆ ಪಡೆದುಕೊಂಡು ಕಾರ್ಯನಿರ್ವಹಿಸುವ ಮಟ್ಟಕ್ಕೆ ಬೆಳೆಯಿತು. ಆಗ ತಿಂಗಳ ಬಾಡಿಗೆ ಮೂವತ್ತು ರೂಪಾಯಿ. ಆದರೆ ಆಗ ಪರಿಷತ್ತಿನ ಉಪಾಧ್ಯಕ್ಷರಾಗಿದ್ದ ಕರ್ಪೂರ ಶ್ರೀನಿವಾಸರಾವ್ ರವರಿಗೆ ಪರಿಷತ್‌ನದೇ ಆದ ಒಂದು ಸ್ವಂತ ಕಚೇರಿಯನ್ನು ಹೊಂದುವ ಹಂಬಲ. ಅದಕ್ಕೆ ಪ್ರಯತ್ನ. ಆಗ ದಿವಾನರಾಗಿದ್ದ ಮಿರ್ಜಾ ಇಸ್ಮಾಯಿಲ್ ಅವರನ್ನು ನೋಡಿ ಮನವಿ ಮಾಡಿಕೊಂಡಾಗ ಈಗ ಪರಿಷತ್ ಇರುವ ನಿವೇಶನವನ್ನು ಅವರು ಧಾರಾಳವಾಗಿ ದಾನವಾಗಿಯೇ ಕೊಟ್ಟೇಬಿಟ್ಟರು. ಗಾಂಧಿ ಮೈದಾನವೆಂದೇ ಹೆಸರಾಗಿದ್ದ ಅಲ್ಲಿ ಆ ಕಾಲದಲ್ಲಿ ಸ್ವಾತಂತ್ರ್ಯ ಚಳವಳಿಯ ಸಭೆಗಳು ನಡೆಯುತ್ತಿದ್ದವು. ಮೊದಲೇ ಮೈಸೂರು ಬ್ರಿಟಿಷರ ಆಶ್ರಿತ ಸಂಸ್ಥಾನ. ಹಾಗಾಗಿ ಬ್ರಿಟಿಷ್ ರೆಸಿಡೆಂಟರು ಮಿರ್ಜಾ ಇಸ್ಮಾಯಿಲ್ ರವರಿಗೆ ಈ ಸ್ವಾತಂತ್ರ್ಯ ಚಳುವಳಿಯ ಸಭೆಗಳನ್ನು ಹತ್ತಿಕ್ಕಲು ಹೇಳಿದ್ದರು.



> **“ಕನ್ನಡ ನಾಡಿನ ಹೆಮ್ಮೆಯ ಕನ್ನಡ ಸಾಹಿತ್ಯ ಪರಿಷತ್ತು ಇವತ್ತು ಸಂಪೂರ್ಣ ರಾಜಕೀಕರಣಗೊಂಡು ವ್ಯಾಪಾರೀಕರಣವಾಗಿ ಭ್ರಷ್ಟರ ಕಪಿಮುಷ್ಟಿಯಲ್ಲಿ ನಲುಗುತ್ತಿದೆ. ಕನ್ನಡವನ್ನು ಕಟ್ಟುವ ಸದಾಶಯದಿಂದ ಅವತ್ತು ಮಹನೀಯ ಹಿರಿಯರು ಕಟ್ಟಿದ ಪರಿಷತ್ತಿನಲ್ಲಿ ಇಂದು ಇರಿದು ತಿನ್ನುವ ಹೀನ ಕೆಲಸಗಳು ನಡೆಯುತ್ತಿವೆ. ಪರಿಷತ್ತಿನ ನಡೆಯನ್ನು ಸೂಕ್ಷ್ಮವಾಗಿ ಗಮನಿಸಿದವರಿಗೆ ಇದು ಅರಿವಾಗದಿರದು. ಪ್ರಾರಂಭದಿಂದಲೂ ಪರಿಷತ್ತು ಸ್ಫಟಿಕದಂತೆ ಪರಿಶುದ್ಧವಾಗಿತ್ತು. ಭಾಷೆಯ ಬಗ್ಗೆ ಬದ್ಧತೆಯಿತ್ತು, ಕಾಳಜಿಯಿತ್ತು. ಆದರೆ ಇದಕ್ಕೆ ಐವತ್ತು, ಎಪ್ಪತ್ತು ತುಂಬುವ ಹೊತ್ತಿಗೆ ಒಂದಿಷ್ಟು ಸಣ್ಣಪುಟ್ಟ ರಾಜಕೀಯ, ಭ್ರಷ್ಟಾಚಾರ ನುಸುಳಿತ್ತಾದರೂ ಪರಿಷತ್ತನ್ನು ಹಾಳು ಮಾಡುವಷ್ಟು ಅಪಾಯಕಾರಿಯಾಗಿರಲಿಲ್ಲ. ಆದರೆ ಪರಿಷತ್ತು ಶತಮಾನದ ಹೊಸ್ತಿಲನ್ನು ತಲುಪುತ್ತಿದ್ದಂತೆಯೇ ಅದರ ಸಂಪನ್ಮೂಲ ಕೂಡ ನೂರ್ಮಡಿಗೊಂಡು ಪರಿಷತ್ತಿನ ಖಜಾನೆ ನೂರಾರು ಕೋಟಿ ಹಣದಿಂದ ತುಂಬಿತುಳುಕಿತು.**

ಅದೇ ಸಮಯಕ್ಕೆ ಮಿರ್ಜಾ ಇಸ್ಮಾಯಿಲ್ ಅವರನ್ನು ಭೇಟಿಯಾದ ಕರ್ಪೂರ ಶ್ರೀನಿವಾಸರಾವ್ ಅವರು ನಿವೇಶನ ಕೇಳಿದ್ದರು. ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆದಂತೆ ಪರಿಷತ್ತಿಗೆ ನಿವೇಶನ ನೀಡಿ ಅಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳವಳಿಯ ಸಭೆಗಳಿಗೆ ಮಿರ್ಜಾ ಇಸ್ಮಾಯಿಲ್ ತಮ್ಮ ಬುದ್ಧಿವಂತಿಕೆಯಿಂದ ಕಡಿವಾಣ ಹಾಕಿದ್ದರು. ಹೀಗೆ ಹಠಹಿಡಿದು ನಿವೇಶನ ಪಡೆದ ಕರ್ಪೂರ ಶ್ರೀನಿವಾಸರಾವ್ ಅವರು 1931ನೇ ಏಪ್ರಿಲ್ 12ರಂದು ಇತಿಹಾಸ ಪ್ರಸಿದ್ಧ ಗಾಂಧಿ ಮೈದಾನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಟ್ಟಡಕ್ಕೆ ಶಂಕುಸ್ಥಾಪನೆ ಮಾಡಿದ್ದರು. ಆ ಕಾಲದಲ್ಲಿ ಕೃಷ್ಣರಾಜ ಒಡೆಯರ್‌ರವರು ಕಟ್ಟಡ ಕಟ್ಟಲು ಐದು ಸಾವಿರ ರೂ.ಗಳನ್ನು ನೀಡಿದ್ದರಿಂದ ಅವರ ಗೌರವಾರ್ಥ ಕೃಷ್ಣರಾಜ ಪರಿಷನ್ಮಂದಿರವನ್ನು ನಿರ್ಮಿಸಿ ಕಛೇರಿಯ ಕಟ್ಟಡದ ಜೊತೆಯಲ್ಲೇ 1933ರ ಮೇ 29ರಂದು ಕೃಷ್ಣರಾಜ ಪರಿಷನ್ಮಂದಿರವನ್ನು ಉದ್ಘಾಟನೆ ಮಾಡಲಾಯಿತು.

ಅಂದಿನ ಮೈಸೂರು ಸರ್ಕಾರ 1928ರಿಂದ ಪ್ರತಿ ವರ್ಷ 1800 ರೂಪಾಯಿಯನ್ನು ಅನುದಾನವಾಗಿ ನೀಡತೊಡಗಿದಾಗ ಕುಂಟುತ್ತಿದ್ದ ಪರಿಷತ್ ತುಸು ಎದ್ದು ನಿಲ್ಲುವಂತಾಯಿತು. ಡಿವಿಜಿ ಎಂಬ ಮೂರಕ್ಷರ ಮಾತ್ರದಿಂದಲೇ ಸಮಸ್ತ ಕನ್ನಡಿಗರನ್ನು ಮೋಡಿ ಮಾಡಿದ್ದ ಡಿ.ವಿ.ಗುಂಡಪ್ಪ ಅವರು 1934ರಲ್ಲಿ ಉಪಾಧ್ಯಕ್ಷರಾಗಿ ಬಂದು ಕನ್ನಡವನ್ನು ಬೆಳೆಸುವ ದಿಶೆಯಲ್ಲಿ ಹಲವಾರು ಯೋಜನೆಗಳನ್ನು ಅನುಷ್ಠಾನ ಗೊಳಿಸಿದರು. ನಂತರ 1938ರಲ್ಲಿ ಉಪಾಧ್ಯಕ್ಷರಾಗಿ ಪರಿಷತ್ ಪ್ರವೇಶಿಸಿದ ಕನ್ನಡದ ಕಣ್ವ ಬಿಎಂಶ್ರೀ ಅವರು ಈಗಿರುವ ಪರಿಷತ್‌ನ ಲಾಂಛನವನ್ನು ಸಿದ್ಧಪಡಿಸಿದರಲ್ಲದೆ ಸ್ವತಃ ತಮ್ಮ ಕೈನಿಂದ ಆರು ಸಾವಿರ ರೂ.ಗಳನ್ನು ಹಾಕಿ ಅಚ್ಚುಕೂಟ ಪ್ರಾರಂಭಿಸಿದರು. ಇವತ್ತಿಗೂ ಆ ಮುದ್ರಣಾಲಯ ಕಾಲಕ್ಕೆ ತಕ್ಕಂತೆ ಆಧುನೀಕರಣಗೊಂಡು ಬಿಎಂಶ್ರೀ ಅಚ್ಚುಕೂಟವೆಂದೇ ಕನ್ನಡಿಗರಿಗೆ ಪರಿಚಿತ. ಇವರ ಕಾಲದಲ್ಲೇ ಪರಿಷತ್ಪತ್ರಿಕೆ, ಅನಕೃ ಸಂಪಾದಕತ್ವದಲ್ಲಿ ಕನ್ನಡನುಡಿ ವಾರಪತ್ರಿಕೆ ಆರಂಭವಾದದ್ದು. ಅದೀಗ ಮಾಸಪತ್ರಿಕೆಯಾಗಿ ಪ್ರಕಟಗೊಳ್ಳುತ್ತಿದೆ. ಪರಿಷತ್‌ನ ಮಹಿಳಾ ಶಾಖೆಯ ಆರಂಭಕ್ಕೂ ಇವರು ನಾಂದಿ ಹಾಡಿದರು. ಇವರ ನಂತರ 1943ರಲ್ಲಿ ಉಪಾಧ್ಯಕ್ಷರಾಗಿ ಬಂದ ಕನ್ನಡದ ಆಸ್ತಿ ಮಾಸ್ತಿ ಅವರು ಸಮಸ್ತ ಕನ್ನಡಿಗರ ಆಸ್ತಿಯಾದ ಪರಿಷತ್ತನ್ನು ಕಾಪಾಡಿ ಬೆಳೆಸುವಲ್ಲಿ ಸಾಕಷ್ಟು ಶ್ರಮಿಸಿದರು. ದೇಶಕ್ಕೆ ಸ್ವಾತಂತ್ರ್ಯ ಬಂದ ವರ್ಷ 1947ರ ಡಿಸೆಂಬರ್ 29ರಂದು ಕಾಸರಗೋಡಿನಲ್ಲಿ ಸಮಾವೇಶಗೊಂಡಿದ್ದ ಸರ್ವ ಸದಸ್ಯರ ಸಭೆಯಲ್ಲಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೇ ಪರಿಷತ್ತಿನ ಅಧ್ಯಕ್ಷರಾಗಬೇಕೆಂದು ನಿರ್ಣಯ ಕೈಗೊಂಡ ಪ್ರಯುಕ್ತ 1947 ಡಿಸೆಂಬರ್ 29ರಿಂದ ತಿ.ತಾ. ಶರ್ಮಾ ಅವರು ಪರಿಷತ್ತಿನ ಅಧ್ಯಕ್ಷರಾದರು. ಆಗ ಉಪಾಧ್ಯಕ್ಷ ಸ್ಥಾನ ರದ್ದಾಯಿತು.

1947ರಿಂದ ಸಾರಸ್ವತ ಲೋಕದ ಅನೇಕ ಮಂದಿ ದಿಗ್ಗಜರು ಪರಿಷತ್‌ನ ಅಧ್ಯಕ್ಷ ಪಟ್ಟದಲ್ಲಿ ಕುಳಿತು ಕನ್ನಡವನ್ನು ಕಟ್ಟುವ ಕಾಯಕ ಮಾಡುತ್ತಾ ಬಂದಿದ್ದಾರೆ. 1956ರಲ್ಲಿ ಕರ್ನಾಟಕ ಏಕೀಕರಣಗೊಂಡಾಗ ಪರಿಷತ್‌ನ ಅಧ್ಯಕ್ಷರಾಗಿದ್ದ ಬಿ.ಶಿವಶಂಕರ ಶಾಸ್ತ್ರಿ ಅವರು ಗಡಿಭಾಗದಲ್ಲಿ ಕನ್ನಡವನ್ನು ಜಾಗೃತಿಗೊಳಿಸುವ ಕಾರ್ಯವನ್ನು ಅತ್ಯಂತ ಯಶಸ್ವಿಯಾಗಿ ಮಾಡಿದವರು. ಹಾಗೆಯೇ 1964 ರಿಂದ 1969 ರವರೆಗೆ ಅಧ್ಯಕ್ಷರಾಗಿದ್ದ ಜಿ.ವೆಂಕಟಸುಬ್ಬಯ್ಯನವರಂತೂ ಪರಿಷತ್‌ನ ಅಭ್ಯುದಯದ ವಿಷಯದಲ್ಲಿ ಜಗಳಮಾಡಿಯಾದರೂ ಸರಿಯೇ ಹಿಡಿದ ಕೆಲಸವನ್ನು ಸಾಧಿಸಿ ಬಿಡುತ್ತಿದ್ದರು. ವಿಧಾನಸೌಧದಲ್ಲಿ ಕುಳಿತು ಸರ್ಕಾರದೊಡನೆ ವಾಗ್ವಾದ ಮಾಡಿ ಮೊಟ್ಟಮೊದಲಿಗೆ ಇಪ್ಪತ್ತೈದು ಸಾವಿರ ರೂ.ಗಳ ಅನುದಾನ ತಂದವರು ಇದೇ ಜೀವಿ ಅವರು. ಆ ಕಾಲಕ್ಕೆ ಇದು ಭಾರೀ ಸುದ್ದಿಯಾಗಿತ್ತು. ಅಂತೆಯೇ ರಾಜಧಾನಿ ಬೆಂಗಳೂರಿನಲ್ಲಿ ಮಾತ್ರ ಕೇಂದ್ರೀಕೃತಗೊಂಡಿದ್ದ ಪರಿಷತ್ತನ್ನು ಅದರಾಚೆಗೆ ವಿಸ್ತರಿಸಿ ಜಿಲ್ಲಾ ಘಟಕಗಳನ್ನು, ತಾಲ್ಲೂಕು ಘಟಕಗಳನ್ನು ಮಾಡಿದ ಕೀರ್ತಿ 1969ರಿಂದ 1978ರ ಅವಧಿಯಲ್ಲಿ ಅಧ್ಯಕ್ಷ ಸ್ಥಾನದಲ್ಲಿ ಕುಳಿತಿದ್ದ ಜಿ.ನಾರಾಯಣ ಅವರಿಗೆ ಸಲ್ಲಬೇಕು. ಹೀಗೆ ಒಬ್ಬೊಬ್ಬರೂ ಒಂದೊಂದು ರೀತಿಯಲ್ಲಿ ತಮ್ಮ ಕೈಂಕರ್ಯ ಮಾಡಿದ್ದಾರೆ. ಇವರುಗಳಲ್ಲಿ ಯಾರು ಹೆಚ್ಚು ಯಾರು ಕಮ್ಮಿ ಎನ್ನುವಂತಿಲ್ಲ. ಎಲ್ಲರೂ ಅವರವರ ಮಟ್ಟಿಗೆ ಪ್ರಾಮಾಣಿಕವಾಗಿ ಸೇವೆಗೈದವರೇ. ಇಂತಹ ಮಹನೀಯರಿಂದಾಗಿ ನಿಯತಕಾಲಿಕೆಗಳು, ಅಮೂಲ್ಯ ಗ್ರಂಥಗಳ ಪ್ರಕಟಣೆ, ಪುಸ್ತಕ ಪ್ರಕಾಶನ ಮತ್ತು ಮಾರಾಟ, ದತ್ತಿನಿಧಿಗಳ ಉಪನ್ಯಾಸಗಳು, ಬಹುಮಾನಗಳು, ಗ್ರಂಥ ಭಂಡಾರ, ಧ್ವನಿ ಮುದ್ರಣ ಮತ್ತು ಸಾಕ್ಷ್ಯ ಚಿತ್ರ ಭಂಡಾರ, ವಸ್ತು ಸಂಗ್ರಹಾಲಯ, ಸಂಶೋಧನಾ ಕೇಂದ್ರ, ಹಸ್ತಪ್ರತಿಗಳ ಸಂಗ್ರಹ, ಕನ್ನಡ ಕಾವ, ಜಾಣ, ರತ್ನ ಪರೀಕ್ಷೆಗಳು, ಕನ್ನಡ ಪ್ರವೇಶ ಪರೀಕ್ಷೆ, ಶಾಸನ ಶಾಸ್ತ್ರ ಡಿಪ್ಲೊಮಾ ಮತ್ತು ಜನಪದ ಡಿಪ್ಲೋಮಾ..... ಹೀಗೆ ತನ್ನಲ್ಲಿ ಎಲ್ಲವನ್ನು ಒಳಗೊಂಡಿರುವ ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ ಹೆಮ್ಮೆ. ಶ್ರೀಕೃಷ್ಣರಾಜ ಪರಿಷನ್ಮಂದಿರ ಸಭಾಂಗಣ, ಬಿಎಂಶ್ರೀ ಅಚ್ಚುಕೂಟ, ಸುವರ್ಣ ಮಹೋತ್ಸವ ಕಟ್ಟಡ ಹಾಗೂ ವಜ್ರಮಹೋತ್ಸವ ಕಟ್ಟಡ ಹೀಗೆ ನಾಲ್ಕು ಕಟ್ಟಡಗಳಲ್ಲಿ ಇಡೀ ಕನ್ನಡ ನಾಡಿಗೆ ತನ್ನ ಬೇರನ್ನು ಇಳಿಬಿಟ್ಟು ಕನ್ನಡ ಸಾಹಿತ್ಯ ಪರಿಷತ್ತು ಕನ್ನಡ ಕೈಂಕರ್ಯಗಳನ್ನು ನಡೆಸಿಕೊಂಡು ಬರುತ್ತಿದೆ. 1940ರಲ್ಲಿ ರಜತ ಮಹೋತ್ಸವವನ್ನೂ, 1973ರಲ್ಲಿ ಸುವರ್ಣ ಮಹೋತ್ಸವ, 1977ರಲ್ಲಿ ವಜ್ರ ಮಹೋತ್ಸವ, 1991ರಲ್ಲಿ ಅಮೃತ ಮಹೋತ್ಸವ, 2014ರಲ್ಲಿ ಶತಮಾನೋತ್ಸವವನ್ನು ಕನ್ನಡ ಸಾಹಿತ್ಯ ಪರಿಷತ್ತು ಆಚರಿಸಿಕೊಂಡಿದೆ.

ವಿಷಾದನೀಯ ವಿಷಯವೆಂದರೆ ಇಂಥಾ ಕನ್ನಡ ನಾಡಿನ ಹೆಮ್ಮೆಯ ಕನ್ನಡ ಸಾಹಿತ್ಯ ಪರಿಷತ್ತು ಇವತ್ತು ಸಂಪೂರ್ಣ ರಾಜಕೀಯಕರಣಗೊಂಡು ವ್ಯಾಪಾರೀಕರಣವಾಗಿ ಭ್ರಷ್ಟರ ಕಪಿಮುಷ್ಟಿಯಲ್ಲಿ ನಲುಗುತ್ತಿದೆ. ಕನ್ನಡವನ್ನು ಕಟ್ಟುವ ಸದಾಶಯದಿಂದ ಅವತ್ತು ಮಹನೀಯ ಹಿರಿಯರು ಕಟ್ಟಿದ ಪರಿಷತ್ತಿನಲ್ಲಿ ಇಂದು ಇರಿದು ತಿನ್ನುವ ಹೀನ ಕೆಲಸಗಳು ನಡೆಯುತ್ತಿವೆ. ಪರಿಷತ್ತಿನ ನಡೆಯನ್ನು ಸೂಕ್ಷ್ಮವಾಗಿ ಗಮನಿಸಿದವರಿಗೆ ಇದು ಅರಿವಾಗದಿರದು. ಪ್ರಾರಂಭದಿಂದಲೂ ಪರಿಷತ್ತು ಸ್ಫಟಿಕದಂತೆ ಪರಿಶುದ್ಧವಾಗಿತ್ತು. ಭಾಷೆಯ ಬಗ್ಗೆ ಬದ್ಧತೆಯಿತ್ತು, ಕಾಳಜಿಯಿತ್ತು. ಆದರೆ ಇದಕ್ಕೆ ಐವತ್ತು, ಎಪ್ಪತ್ತು ತುಂಬುವ ಹೊತ್ತಿಗೆ ಒಂದಿಷ್ಟು ಸಣ್ಣಪುಟ್ಟ ರಾಜಕೀಯ, ಭ್ರಷ್ಟಾಚಾರ ನುಸುಳಿತ್ತಾದರೂ ಪರಿಷತ್ತನ್ನು ಹಾಳು ಮಾಡುವಷ್ಟು ಅಪಾಯಕಾರಿಯಾಗಿರಲಿಲ್ಲ. ಆದರೆ ಪರಿಷತ್ತು ಶತಮಾನದ ಹೊಸ್ತಿಲನ್ನು ತಲುಪುತ್ತಿದ್ದಂತೆಯೇ ಅದರ ಸಂಪನ್ಮೂಲ ಕೂಡ ನೂರ್ಮಡಿಗೊಂಡು ಪರಿಷತ್ತಿನ ಖಜಾನೆ ನೂರಾರು ಕೋಟಿ ಹಣದಿಂದ ತುಂಬಿತುಳುಕಿತು. ವಿಶೇಷವಾಗಿ ಪರಿಷತ್ತಿನ ಶತಮಾನೋತ್ಸವ ಆಚರಣೆಯ ಹೆಸರಿನಲ್ಲಿ ಸರ್ಕಾರದಿಂದ ಹಿಡಿದು ಖಾಸಗಿಯವರ ತನಕ ನೂರಾರು ಕೋಟಿಗಳನ್ನು ಕೊಳ್ಳೆ ಹೊಡೆಯಲಾಯಿತು. ಇದಾವುದಕ್ಕೂ ನೆಟ್ಟಗೆ ಲೆಕ್ಕವಿಲ್ಲ. ಪಾರದರ್ಶಕ ನಡೆಯಿಲ್ಲ. ಬಿಎಂಶ್ರೀ, ಡಿವಿಜಿ, ಮಾಸ್ತಿ, ಜೀವಿ ಅವರುಗಳಂತಹ ಸಾಹಿತಿಗಳು ತಮ್ಮ ಜೇಬನ್ನು ಖಾಲಿ ಮಾಡಿಕೊಂಡು ಸೈಕಲ್ ಹೊಡೆದು ಕಟ್ಟಿ ಬೆಳೆಸಿದ ಪರಿಷತ್ತು ಒಂದು ಕಾಲದಲ್ಲಿ ಪೈಸೆ ಪೈಸೆಗೂ ಪರದಾಡುವ ಸ್ಥಿತಿಯಲ್ಲಿತ್ತು. ಆದರೆ ಇವತ್ತು ಹಣದ ಥೈಲಿಯೇ ಪರಿಷತ್ತಿನಲ್ಲಿದೆ. ಅವತ್ತು ಪರಿಷತ್ ಕಟ್ಟಿದವರು ಜೇಬು ಖಾಲಿ ಮಾಡಿಕೊಂಡರೆ ಇವತ್ತು ಪರಿಷತ್ತಿನ ಚುಕ್ಕಾಣಿ ಹಿಡಿದವರು ಜೇಬು ತುಂಬಿಸಿಕೊಂಡು ಐಶಾರಾಮಿ ಕಾರಿನಲ್ಲಿ ಓಡಾಡುತ್ತಿದ್ದಾರೆ. ಇವರ ಅಧಿಕಾರದ ದಾಹ, ಹಣದ ಮೋಹ, ದುರಾಡಳಿತ ಮೇರೆ ಮೀರಿದೆ.

ಇದಕ್ಕೆ ಪ್ರತ್ಯಕ್ಷ ಸಾಕ್ಷಿಯೆಂಬಂತೆ ಮೂರು ವರ್ಷಗಳ ಅವಧಿಗೆ ಆಯ್ಕೆಯಾಗಿದ್ದು ಅಧಿಕಾರದ ದುರಾಸೆಯಿಂದ ಇವರು ಅಕ್ರಮವಾಗಿ ಐದು ವರ್ಷಗಳಿಗೆ ಮುಂದುವರಿಸಿಕೊಳ್ಳಲು ಹಾಗೂ ಪರಿಷತ್ತಿನ ಆಜೀವ ಸದಸ್ಯತ್ವವನ್ನು 250 ರೂ.ಗಳಿಂದ 1000 ರೂ.ಗಳಿಗೆ ಹೆಚ್ಚಿಸಿಕೊಳ್ಳಲು ಹೋಗಿ ಇವೆಲ್ಲ ಹಗರಣಗಳಿಂದ ಪರಿಷತ್ತನ್ನು ಕೋರ್ಟ್ ಮೆಟ್ಟಿಲಲ್ಲಿ ನಿಲ್ಲುವಂತೆ ಮಾಡಿದ್ದು ಅಲ್ಲದೆ ಇದ್ದ ಅಧ್ಯಕ್ಷನನ್ನೂ ಕಿತ್ತುಹಾಕಿ ಪರಿಷತ್ ಅಧಿಕಾರದ ಜುಟ್ಟನ್ನು ಆಡಳಿತಾಧಿಕಾರಿಗೆ ನೀಡಿದ್ದಾರೆ. ಇದೆಲ್ಲವನ್ನೂ ಗಮನಿಸುತ್ತಿರುವ ಕನ್ನಡ ಜನತೆ, ಪರಿಷತ್ತನ್ನು ನುಂಗಿ ನೀರು ಕುಡಿಯುತ್ತಿರುವ ಇಂತಹ ದುರುಳರಿಂದ ಪರಿಷತ್ತನ್ನು ಕಾಪಾಡುವಂತೆ ಮೌನವಾಗಿಯೇ ತಾಯಿ ಕನ್ನಡಮ್ಮನಲ್ಲಿ ಮೊರೆಯಿಡುತ್ತಿದ್ದಾರೆ.


ದೇಶದಲ್ಲೇ ಕಾಂಗ್ರೆಸ್ ಅಸ್ತಿತ್ವ ಶೂನ್ಯ; ಮುಂದೆ ಕರ್ನಾಟಕದಲ್ಲೂ ಮನೆಗೆ

ಕೇಂದ್ರ ಸಚಿವ ಪ್ರಹ್ಲಾದ್ ಜೋಶಿ ವ್ಯಂಗ್ಯ

ನವದೆಹಲಿ: ನಾಲ್ಕು ರಾಜ್ಯಗಳು ಮತ್ತು ಒಂದು ಕೇಂದ್ರಾಡಳಿತ ಪ್ರದೇಶಕ್ಕೆ ನಡೆದ ಚುನಾವಣೆಯಲ್ಲಿ ಕೇರಳ ಬಿಟ್ಟರೆ ದೇಶದಲ್ಲಿ ಕಾಂಗ್ರೆಸ್ ಅಸ್ತಿತ್ವ ಶೂನ್ಯವಾಗಿದೆ. ಮುಂಬರುವ ಚುನಾವಣೆಯಲ್ಲಿ ಕರ್ನಾಟಕದಲ್ಲಿಯೂ ಇದೇ ಸ್ಥಿತಿ ಎದುರಾಗಲಿದೆ ಎಂದು ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಹ್ಲಾದ ಜೋಶಿ ಭವಿಷ್ಯ ನುಡಿದಿದ್ದಾರೆ.

ದೆಹಲಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಪಂಚ ರಾಜ್ಯ ಚುನಾವಣೆ ಫಲಿತಾಂಶ ಕುರಿತು ಪ್ರತಿಕ್ರಿಯಿಸಿದ ಸಚಿವರು, ದುರಾಡಳಿತ, ಮಿತಿಮೀರಿದ ತುಷ್ಟೀಕರಣ, ಭ್ರಷ್ಟಾಚಾರ, ಗೂಂಡಾಗಿರಿ ವಿರುದ್ಧ ಅತ್ಯಂತ ಸ್ಪಷ್ಟ ಜನಾದೇಶ ಇದಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ–ಬಿಜೆಪಿ ಆಡಳಿತಕ್ಕೆ ಬಹುದೊಡ್ಡ ಗೆಲುವು ತಂದು ಕೊಟ್ಟಿದ್ದಾರೆಂದು ಹೇಳಿದರು.

ಅಸ್ಸಾಂ, ಪಶ್ಚಿಮ ಬಂಗಾಳ ಮತ್ತು ಪುದುಚೇರಿಯಲ್ಲಿ ಎನ್‌ಡಿಎಗೆ ಅಭೂತಪೂರ್ವ ಗೆಲುವು ಸಿಕ್ಕಿದೆ. ಮೋದಿ ಅವರ 12 ವರ್ಷಗಳ ಸಮರ್ಥ ಆಡಳಿತ, ಅದ್ಭುತ ಕಾರ್ಯ ಕಂಡು ಬಿಜೆಪಿಗೆ ಮನ್ನಣೆ ನೀಡಿದ್ದಾರೆ. ಕೇರಳದಲ್ಲಿ ನಮಗೆ ಯಶಸ್ಸು ಸಿಕ್ಕಿಲ್ಲ. ಆದರೆ, ಕಮ್ಯುನಿಸ್ಟ್ ಮತ್ತು ಕಾಂಗ್ರೆಸ್ ಮುಕ್ತವಾಗಿದೆ ಎಂದು ವ್ಯಾಖ್ಯಾನಿಸಿದರು.



ದೇಶಾದ್ಯಂತ ಕಾಂಗ್ರೆಸ್ ಶೂನ್ಯ: ಒಂದು ರಾಷ್ಟ್ರೀಯ ಪಕ್ಷವಾಗಿ ಕಾಂಗ್ರೆಸ್ ದೇಶಾದ್ಯಂತ ಶೂನ್ಯಕ್ಕೆ ತಳ್ಳಲ್ಪಟ್ಟಿದೆ. ಕೇರಳ ಬಿಟ್ಟರೆ ಬೇರೆಲ್ಲೆಡೆ ಅಸ್ತಿತ್ವ ಕಳೆದುಕೊಂಡಿದೆ. ಪಶ್ಚಿಮ ಬಂಗಾಳ–0, ತಮಿಳುನಾಡು–0, ಅಸ್ಸಾಂ–22–24 ಸ್ಥಾನ ಗೆದ್ದಿದೆ ಅಷ್ಟೇ. ಕಾಂಗ್ರೆಸ್‌ನ ತುಷ್ಟೀಕರಣದ ಪರಮಾವಧಿ, ಭ್ರಷ್ಟಾಚಾರ, ಬಹುಸಂಖ್ಯಾತ ಹಿಂದೂಗಳ ತಿರಸ್ಕಾರ, ವೋಟ್ ಬ್ಯಾಂಕ್ ರಾಜಕಾರಣಕ್ಕೆ ಜನ ತಕ್ಕ ಪಾಠ ಕಲಿಸಿದ್ದಾರೆ ಎಂದು ಜೋಶಿ ವಿಶ್ಲೇಷಿಸಿದರು.

ತಮಿಳುನಾಡಲ್ಲಿ ವಿಜಯ್ ಜತೆ ಹೋಗುತ್ತೇವೆ ಎಂದಿದ್ದಾರೆ. ಅಲ್ಲಿ ಹೋಗಲು ಅವರಲ್ಲೇನೂ ಉಳಿದಿಲ್ಲ. ಇನ್ನೇನು ಹೋಗುತ್ತಾರೆ? ಇನ್ನು ಕೇರಳದಲ್ಲಿ ದೇಶ ಇಬ್ಭಾಗ ಮಾಡುವ ಮನಸ್ಥಿತಿಯ ಮುಸ್ಲಿಂ ಲೀಗ್ ಜತೆ ಒಪ್ಪಂದದೊಂದಿಗೆ ಹಿಂದೂ ವಿರೋಧಿಯಾಗಿ ವರ್ತಿಸಿದ್ದರ ಪರಿಣಾಮ ದೇಶದೆಲ್ಲೆಡೆಯೂ ಕಾಂಗ್ರೆಸ್ ಧೂಳೀಪಟವಾಗಿದೆ ಎಂದು ಟೀಕಿಸಿದರು.

ಪ್ರಧಾನಿ ನಿಂದನೆ ಮುಳುವು: ಕಾಂಗ್ರೆಸ್ ಇಷ್ಟರ ಮಟ್ಟಿಗೆ ನೆಲಕಚ್ಚಲು ಸದಾ ನೆಗೆಟಿವ್ ಪ್ರಚಾರ, ಪ್ರಧಾನಿ ಮೋದಿ ಅವರ ನಿಂದನೆಯಲ್ಲಿ ತೊಡಗಿದ್ದೇ ಮುಳುವಾಗಿದೆ. ಜನಪ್ರಿಯ ಪ್ರಧಾನಿ ಅವರನ್ನು ವಿಷಸರ್ಪ, ಟೆರರಿಸ್ಟ್ ಎಂದೆಲ್ಲಾ ನಿಂದಿಸಿತ್ತು. ಜನ ಅದಕ್ಕೆಲ್ಲ ತಕ್ಕ ಉತ್ತರ ಕೊಟ್ಟಿದ್ದಾರೆ. ಅನಾಗರಿಕ ರಾಜಕೀಯ ಸಂಸ್ಕೃತಿ, ರೌಡಿಸಂ, ತುಷ್ಟೀಕರಣ, ಹಿಂದೂ ವಿರೋಧಿ ನಡೆ ಒಪ್ಪುವುದಿಲ್ಲ ಎಂಬ ಸ್ಪಷ್ಟ ಸಂದೇಶ ರವಾನಿಸಿದ್ದಾರೆ, ಎಚ್ಚರಿಕೆ ಕೊಟ್ಟಿದ್ದಾರೆ ಎಂದರು.

ಪಶ್ಚಿಮ ಬಂಗಾಳದಲ್ಲಿ ಜನ ಹೊರ ಬಂದು ಮತದಾನಕ್ಕೂ ಹೆದರುತ್ತಿದ್ದರು. ನಾಮಿನೇಷನ್‌ಗೂ ಬಿಡುತ್ತಿರಲಿಲ್ಲ. ಅಷ್ಟರ ಮಟ್ಟಿಗೆ ರೌಡಿಸಂ ಇತ್ತು. ಆದರೆ, ಕಟ್ಟುನಿಟ್ಟಿನ ಕಾನೂನು ಸುವ್ಯವಸ್ಥೆ ರೂಪಿಸಿದ್ದರ ಪರಿಣಾಮ ಇಂದು ಜನ ಧೈರ್ಯದಿಂದ ಮತದಾನ ಮಾಡಿದ್ದಾರೆ. ರೌಡಿಸಂ ಮೆಟ್ಟಿ ನಿಂತು ಚುನಾವಣೆಯಲ್ಲಿ ಭಾಗಿಯಾದರು. ಇದಕ್ಕಾಗಿ ಅಲ್ಲಿನ ಜನಕ್ಕೆ ವಿಶೇಷ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಕರ್ನಾಟಕದಲ್ಲೂ ಮನೆಗೆ ಕಳಿಸ್ತಾರೆ: ಕರ್ನಾಟಕದಲ್ಲಿ ಕಾಂಗ್ರೆಸ್ ದುರಾಡಳಿತ, ಭ್ರಷ್ಟಾಚಾರ, ತುಷ್ಟೀಕರಣ ಪರಾಕಾಷ್ಠೆ ಮಿತಿಮೀರಿದೆ. ಹೀಗಾಗಿ ಮುಂದಿನ ಚುನಾವಣೆಯಲ್ಲಿ ಕರ್ನಾಟಕದ ಜನರೂ ಕಾಂಗ್ರೆಸ್ ಅನ್ನು ಮನೆಗೆ ಕಳಿಸುತ್ತಾರೆ ಎಂದು ಸಚಿವರು ಇದೇ ವೇಳೆ ಭವಿಷ್ಯ ನುಡಿದರು.

ತಡರಾತ್ರಿ ಕೊಟ್ಟಿದ್ದಾರೆ ಫಲಿತಾಂಶ: ಶೃಂಗೇರಿ ವಿಧಾನಸಭೆ ಕ್ಷೇತ್ರದ ಅಂಚೆ ಮತ ಮರು ಎಣಿಕೆ ಫಲಿತಾಂಶವನ್ನು ಲೀಗಲ್ ನೋಟಿಸ್ ಜಾರಿ ಮಾಡಿದ ಬಳಿಕ ರಾತ್ರೋರಾತ್ರಿ ಈ ಮೇಲ್ ಅಲ್ಲಿ ಫಲಿತಾಂಶದ ಪತ್ರ ರವಾನಿಸಿದ್ದಾರೆ. ಪಕ್ಷದ ಬೆಂಬಲದಿಂದ ಬಿಜೆಪಿ ಅಭ್ಯರ್ಥಿ ಜೀವರಾಜ್ ಅವರು ನಡೆಸಿದ ಸತತ ಹೋರಾಟ ಮತ್ತು ನ್ಯಾಯಕ್ಕೆ ಸಂದ ಜಯ ಇದಾಗಿದೆ ಎಂದು ಸಚಿವ ಪ್ರಲ್ಹಾದ ಜೋಶಿ ಪ್ರತಿಪಾದಿಸಿದರು.

ಡಿಸಿಎಂ ಬೇಜವಾಬ್ದಾರಿ ಹೇಳಿಕೆ: ಕಳೆದ ಮೂರು ವರ್ಷದಿಂದ ಕಾಂಗ್ರೆಸ್ ಸರ್ಕಾರವೇ ಇದೆ. ಕೋಲಾರದಲ್ಲಿ ಕಾಂಗ್ರೆಸ್ ಗೆದ್ದರೆ ಸಂಭ್ರಮಿಸಿದರು. ಶೃಂಗೇರಿಯಲ್ಲಿ ಬಿಜೆಪಿ ಗೆದ್ದರೆ ಕ್ಷುಲ್ಲಕ ಆರೋಪ ಮಾಡುತ್ತಾರೆ. ಹಾಗಾದರೆ, ಇಲ್ಲಾದ ಮತ ಎಣಿಕೆ ಲೋಪಕ್ಕೆ ಎಸ್ಪಿ, ಡಿಸಿ ಅವರನ್ನು 'ಸಸ್ಪೆಂಡ್' ಮಾಡುತ್ತಾರಾ? ಎಂದು ಅವರು ಇದೇ ವೇಳೆ ಪ್ರಶ್ನಿಸಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಆರ್ಥಿಕ ಸಂಕಷ್ಟದಲ್ಲಿರುವ ಮೈಸೂರು ವಿವಿಯಲ್ಲಿ ಮತ್ತೊಂದು ಹಗರಣ ಆರೋಪ

ಸಿಂಡಿಕೇಟ್ ಸಭೆ, ಆಡಳಿತ ಕುಲಸಚಿವರ ಒಪ್ಪಿಗೆ ಇಲ್ಲದೆ 5 ಕೋಟಿ ಟೆಂಡರ್


ಸಿಂಡಿಕೇಟ್ ಸದಸ್ಯ ಡಾ. ಚಂದ್ರಶೇಖರ್ ಗಂಭೀರ ಆಪಾದನೆ

ಮೈಸೂರು, ಮೇ 4(ಬಿಎಲ್‌ಯು)– ವೇತನ ನೀಡಲು ಹಣಕಾಸು ಮುಗ್ಗಟ್ಟು ಎದುರಿಸುತ್ತಿರುವ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಐಟಿ ಮೂಲಸೌಕರ್ಯ ಹಾಗೂ ಸಾಧನಗಳ ಖರೀದಿಯಲ್ಲಿ 5 ಕೋಟಿಗಳ ಟೆಂಡರ್ ಹಗರಣ ನಡೆದಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸದಸ್ಯ ಡಾ.ಟಿ.ಆರ್. ಚಂದ್ರಶೇಖರ್ ಆರೋಪಿಸಿದ್ದಾರೆ.

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಅವರು, ಸಿಂಡಿಕೇಟ್ ಸಭೆಯ ಒಪ್ಪಿಗೆ ಹಾಗೂ ಆಡಳಿತ ಕುಲಸಚಿವರ ಸಮ್ಮತಿ ಇಲ್ಲದೆ ಕಾನೂನುಬಾಹಿರವಾಗಿ ಟೆಂಡರ್ ನೀಡಿದ್ದಾರೆ ಎಂದು ಆಪಾದಿಸಿದ್ದಾರೆ.

ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಪರಿಕ್ಷಾಂಗ ಕುಲಸಚಿವ ಪ್ರೊ.ಎನ್.ನಾಗರಾಜು ಹಾಗೂ ಇತರೆ ಅಧಿಕಾರಿಗಳು ಈ ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ನೇರ ಆರೋಪ ಮಾಡಿದ್ದಾರೆ.

ಮೌಲ್ಯ ಭವನದಲ್ಲಿ ಡಿಜಿಟಲ್ ಮೌಲ್ಯ ನಿರ್ಣಯಕ್ಕಾಗಿ ಐಟಿ ಮೂಲ ಸೌಕರ್ಯ ಹಾಗೂ ಸಾಧನಗಳ ಖರೀದಿಗಾಗಿ 4,97,25,000 ಮೊತ್ತದ ಟೆಂಡರ್ ಕರೆಯಲಾಗಿದೆ. ಪರಿಕ್ಷಾಂಗ ಕುಲಸಚಿವ ಪ್ರೊ.ನಾಗರಾಜ್ ಹಾಗೂ ಅಮಾನತ್ತಿನಲ್ಲಿರುವ ಪ್ರೊ.ಆರ್.ಎಸ್.ಉಮಾಕಾಂತ ಅವರಿಗೆ ಕಾನೂನಾತ್ಮಕ ಅಧಿಕಾರ ಇಲ್ಲದಿದ್ದರೂ ಟೆಂಡರ್ ಕರೆದಿದ್ದಾರೆ ಎಂದು ಚಂದ್ರಶೇಖರ್ ದೂರಿದ್ದಾರೆ.


ಡಾ.ಚಂದ್ರಶೇಖರ್

ವಿಶ್ವವಿದ್ಯಾನಿಲಯದ ಆಡಳಿತ ಕುಲಸಚಿವರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗಿಯಾಗಿಲ್ಲ. ಸಿಂಡಿಕೇಟ್ ಹಾಗೂ ಆಡಳಿತ ಕುಲಸಚಿವರ ಗಮನಕ್ಕೆ ತರದೆ ಅಂದಿನ ಟೆಂಡರ್ ಪ್ರಕ್ರಿಯೆ ನಡೆಸಲು ಪ್ರೊ.ಲೋಕನಾಥ್ ಅಧಿಕಾರ ನೀಡಿದ್ದಾರೆ. ಅಲ್ಲದೆ ಅಂದಿನ ಹಣಕಾಸು ಅಧಿಕಾರಿ ಕೆ.ಎಸ್.ರೇಖಾ ಅವರಿಗೆ 4.97 ಕೋಟಿ ಪಾವತಿ ಮಾಡುವಂತೆ ಆದೇಶ ನೀಡಿರುವುದು ದಾಖಲಾತಿಗಳಿಂದ ಸ್ಪಷ್ಟವಾಗಿದೆ ಎಂದು ಹೇಳಿದ್ದಾರೆ.

ಈ ಸಂಬಂಧ ಅಕ್ಟೋಬರ್ 9, 2025ರಂದು ನಡೆದ ಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ ನಾನು ಆಕ್ಷೇಪ ವ್ಯಕ್ತಪಡಿಸಿದ್ದೆ. ಈ ವಿಚಾರವಾಗಿ ಅಂದಿನ ಸಭೆಯಲ್ಲಿ ಗಲಾಟೆ ಕೂಡ ನಡೆಯಿತು. ಅಂದಿನ ಗಲಾಟೆ ದೃಶ್ಯವನ್ನು ವೀಡಿಯೊ ಚಿತ್ರೀಕರಣ ಮಾಡಿ ದಾಖಲು ಮಾಡುವಂತೆ ಸಿಂಡಿಕೇಟ್ ಸಭೆ ಸರ್ವಾನುಮತದ ತೀರ್ಮಾನ ಕೈಗೊಂಡಿತ್ತು ಎಂದು ತಿಳಿಸಿದ್ದಾರೆ.

ಇದರ ಜೊತೆಗೆ ಪರಿಕ್ಷಾಂಗ ಕುಲಸಚಿವ ಪ್ರೊ.ನಾಗರಾಜ್ ಅವರು ಮಾರ್ಚ್ 30,2026ರಂದು ಅಧಿಕಾರ ಇಲ್ಲದಿದ್ದರೂ ಮತ್ತೆ 18,50,000 ರೂಪಾಯಿಗಳಿಗೆ ಉತ್ತರ ಪತ್ರಿಕೆಗಳ ಮುದ್ರಣ ಹಾಗೂ ಸರಬರಾಜಿಗೆ ಟೆಂಡರ್ ಕರೆದಿದ್ದಾರೆ. ವಿಶ್ವವಿದ್ಯಾನಿಲಯದಲ್ಲೇ ಸ್ವಂತ ಮುದ್ರಣಾಲಯ ಇರುವಾಗ ಖಾಸಗಿ ಏಜೆನ್ಸಿಗೆ ಟೆಂಡರ್ ನೀಡಿ ಅಕ್ರಮ ಎಸಗಿದ್ದಾರೆ ಎಂದು ಚಂದ್ರಶೇಖರ್ ಆರೋಪಿಸಿದ್ದಾರೆ.

ಈ ಬಗ್ಗೆ ಆಡಳಿತ ಕುಲಸಚಿವೆ ಎಂ.ಕೆ.ಸವಿತಾ ಅವರು ಕೂಡ ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ ಯಾವುದೇ ಕಾನೂನಾತ್ಮಕ ಕ್ರಮ ಕೈಗೊಳ್ಳದೆ ಸವಿತಾ ಅವರು ಮೌನ ವಹಿಸಿರುವುದು ಅವರು ಕೂಡ ಇದಕ್ಕೆ ಜವಾಬ್ದಾರರಾಗುತ್ತಾರೆ ಎಂದು ಎಚ್ಚರಿಸಿದ್ದಾರೆ.

ಕಾನೂನುಬಾಹಿರವಾಗಿ ಕರೆದಿರುವ ಟೆಂಡರ್‌ಗಳನ್ನು ಕೂಡಲೇ ರದ್ದು ಮಾಡಬೇಕು. ಇಲ್ಲದಿದ್ದರೆ ಪ್ರೊ.ಲೋಕನಾಥ್, ಪ್ರೊ.ನಾಗರಾಜ್ ಹಾಗೂ ರೇಖಾ ಅವರ ವಿರುದ್ಧ ತನಿಖೆ ನಡೆಸುವಂತೆ ರಾಜ್ಯಪಾಲರು, ಉನ್ನತ ಶಿಕ್ಷಣ ಸಚಿವರು ಹಾಗೂ ಲೋಕಾಯುಕ್ತಕ್ಕೆ ದೂರು ನೀಡಬೇಕಾಗುತ್ತದೆ ಎಂದು ಡಾ.ಟಿ.ಆರ್. ಚಂದ್ರಶೇಖರ್ ಎಚ್ಚರಿಕೆ ನೀಡಿದ್ದಾರೆ.

ಕಳೆದ ಸಾಲಿನ ದಸರಾ ಖರ್ಚು–ವೆಚ್ಚ ಮಂಡನೆ

ಒಟ್ಟು 45.03 ಕೋಟಿಯಲ್ಲಿ ಖರ್ಚಾಗಿದ್ದು 42.95 ಕೋಟಿ: ಉಳಿದಿರುವುದು 2.94 ಕೋಟಿ

ಮೈಸೂರು,ಮೇ 4(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವದ ಆಯವ್ಯಯ ಪಟ್ಟಿಯನ್ನು ಕೊನೆಗೂ ಜಿಲ್ಲಾಡಳಿತ ಬಿಡುಗಡೆ ಮಾಡಿದ್ದು, 2025ನೇ ಸಾಲಿನ ಅದ್ದೂರಿ ದಸರಾ ಮಹೋತ್ಸವಕ್ಕೆ 42,95,27,007 ರೂ. ಖರ್ಚು ಮಾಡಿರುವುದಾಗಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ.



ರಾಜ್ಯದಲ್ಲಿ ಕಳೆದ ವರ್ಷ ಉತ್ತಮ ಮಳೆಯಾಗಿ ಎಲ್ಲಾ ಜಲಾಶಯಗಳು ಅವಧಿಗೂ ಮುನ್ನವೇ ಭರ್ತಿಯಾಗಿದ್ದರಿಂದ 2025ನೇ ಸಾಲಿನ ದಸರಾ ಮಹೋತ್ಸವವನ್ನು ಅದ್ದೂರಿಯಾಗಿ ನಡೆಸಲು ನಿರ್ಧರಿಸಲಾಗಿತ್ತು. ಅದಕ್ಕಾಗಿ ರಾಜ್ಯ ಸರ್ಕಾರ 30 ಕೋಟಿ ರೂ., ಮೈಸೂರು ಅಭಿವೃದ್ಧಿ ಪ್ರಾಧಿಕಾರ 10 ಕೋಟಿ ರೂ. ಅನುದಾನ ನೀಡಿತ್ತು. ಅಲ್ಲದೆ, ವಿವಿಧ ಕಾರ್ಯಕ್ರಮಗಳಿಗೆ ಪ್ರಾಯೋಜಕತ್ವದ ರೂಪದಲ್ಲಿ 1,81,96,000 ರೂ. ಬಂದಿತ್ತು. ಜೊತೆಗೆ ವಿವಿಧ ಟಿಕೆಟ್ ಮಾರಾಟದಿಂದ 3,21,92,055 ರೂ. ಲಭಿಸಿತ್ತು.

ಒಟ್ಟಾರೆ 45,03,88,055 ರೂ.ಗಳಲ್ಲಿ ದಸರಾ ಮಹೋತ್ಸವಕ್ಕೆ ಜಿಲ್ಲಾಡಳಿತ 42,95,27,007 ರೂ. ಖರ್ಚು ಮಾಡಿದ್ದು, 2,94,27,185 ರೂ. ಉಳಿತಾಯ ಆಗಿದೆ.

ಖರ್ಚಿನ ವಿವರ: ದಸರಾ ಮಹೋತ್ಸವದ ವಿವಿಧ ಉಪಸಮಿತಿಗಳ ಮೂಲಕ ನಾನಾ ಕಾಮಗಾರಿ, ಕಾರ್ಯಕ್ರಮಕ್ಕೆ ಖರ್ಚು ಮಾಡಿದ ವಿವರದ ಪಟ್ಟಿಯನ್ನು ಜಿಲ್ಲಾಡಳಿತ ಬಿಡುಗಡೆ ಮಾಡಿದೆ. ಅದರಲ್ಲಿ ಸ್ವಾಗತ, ಆಮಂತ್ರಣ ಮತ್ತು ಸ್ಥಳಾವಕಾಶಕ್ಕೆ 5,57,37,095 ರೂ., ಜಂಬೂ ಸವಾರಿ ಮೆರವಣಿಗೆಗೆ 1,60,00,000 ರೂ., ಬನ್ನಿಮಂಟಪದಲ್ಲಿ ನಡೆದ ಪಂಜಿನ ಕವಾಯತುಗೆ 1,48,00,000 ರೂ., ಸ್ತಬ್ಧ ಚಿತ್ರಕ್ಕೆ 7,00,000 ರೂ., ರೈತ ದಸರಾ ಕಾರ್ಯಕ್ರಮಕ್ಕೆ 52,00,000 ರೂ., ಸಾಂಸ್ಕೃತಿಕ ದಸರಾಗೆ 2,08,00,000 ರೂ., ಲಲಿತ ಕಲೆಗೆ 22,00,000 ರೂ., ಕವಿಗೋಷ್ಠಿಗೆ 68,90,000 ರೂ., ಯೋಗ ದಸರಾಗೆ 23,00,000 ರೂ., ಯುವ ದಸರಾಗೆ 15,94,00,000 ರೂ., ಯುವ ಸಂಭ್ರಮಕ್ಕೆ 2, 52,50,000 ರೂ., ಮಹಿಳಾ ಮತ್ತು ಮಕ್ಕಳ ದಸರಾಗೆ 40,00,000 ರೂ., ದಸರಾ ಚಲನ ಚಿತ್ರೋತ್ಸವಕ್ಕೆ 40,50,000 ರೂ., ದಸರಾ ಕುಸ್ತಿಗೆ 49,00.000 ರೂ., ಗಜಪಯಣ, ಗಜಪಡೆ ನಿರ್ವಹಣೆ ಸೇರಿದಂತೆ ಅರಣ್ಯ ಇಲಾಖೆಗೆ 80,00,000 ರೂ., ನಂಜನಗೂಡಿನ ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿ ನಡೆದ ದಸರಾ ಕಾರ್ಯಕ್ರಮಕ್ಕೆ 60,00,000 ರೂ., ಮೈಸೂರಿನ ರಂಗಾಯಣದಲ್ಲಿ ನಡೆದ ನವರಾತ್ರಿ ರಂಗೋತ್ಸವ ಕಾರ್ಯಕ್ರಮಕ್ಕೆ 10,00,000 ರೂ. ವೆಚ್ಚ ಮಾಡಲಾಗಿದೆ. ಒಟ್ಟು ಕಾರ್ಯಕ್ರಮಕ್ಕೆ 33,72,27,095 ರೂ. ವೆಚ್ಚ ಮಾಡಲಾಗಿದೆ ಎಂದು ತಿಳಿಸಿದೆ.

ಇದರೊಂದಿಗೆ ವಿವಿಧ ಅನುಷ್ಠಾನಾಧಿಕಾರಿಗಳಿಗೆ 5,73,72,727 ರೂ. ಬಿಡುಗಡೆ ಮಾಡಲಾಗಿತ್ತು. ಏರ್ ಶೋಗೆ 55,00,000 ರೂ. ಖರ್ಚು ಮಾಡಲಾಗಿದೆ. ಅಲ್ಲದೆ, ಮಂಡ್ಯ ಜಿಲ್ಲಾಧಿಕಾರಿಗೆ 2,00,00,000 ರೂ. ಬಿಡುಗಡೆ ಮಾಡಲಾಗಿದೆ. ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರಕ್ಕೆ 55,00,000 ರೂ., ಐಟಿ ಮತ್ತು ಜಿಎಸ್‌ಟಿಗೆ 37,27,185 ರೂ. ಪಾವತಿಸಲಾಗಿದೆ. ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ 2,00,000 ರೂ. ನೀಡಲಾಗಿದೆ ಎಂದು ಜಿಲ್ಲಾಧಿಕಾರಿಗಳು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಗೆಲುವಿಗೆ ಹಣ ಬಲ, ಅಧಿಕಾರ ದುರುಪಯೋಗವೇ ಕಾರಣ

ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಆರೋಪ

ಮೈಸೂರು, ಮೇ 4(ಎಂಕೆ)– ಹಣ ಬಲ ಮತ್ತು ಅಧಿಕಾರ ದುರುಪಯೋಗದ ಮೂಲಕ ಕಾಂಗ್ರೆಸ್, ದಾವಣಗೆರೆ ಮತ್ತು ಬಾಗಲಕೋಟೆ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಜಯಗಳಿಸಿದೆ ಎಂದು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಆಕ್ಷೇಪಿಸಿದ್ದಾರೆ.


ಅಬ್ದುಲ್ ಮಜೀದ್

ಹಿಂಬಾಗಿಲಿನಿಂದ ಚುನಾವಣಾ ಅಕ್ರಮ, ಅಪಾರ ಪ್ರಮಾಣದ ಸಂಪನ್ಮೂಲ ಬಳಸಿರುವ ಕಾಂಗ್ರೆಸ್, ಎರಡೂ ಕ್ಷೇತ್ರಗಳ ಪ್ರತಿಯೊಂದು ವಾರ್ಡ್‌ನಲ್ಲೂ ನೇರ ಹಸ್ತಕ್ಷೇಪ ನಡೆಸಿದೆ. ಅಧಿಕಾರದಲ್ಲಿರುವ ಮಂತ್ರಿಗಳು, ಶಾಸಕರು ಮತ್ತು ಅನೇಕ ನಿಗಮಗಳ ಅಧ್ಯಕ್ಷರನ್ನು ಚುನಾವಣಾ ಪ್ರಕ್ರಿಯೆಯನ್ನು ಸೂಕ್ಷ್ಮವಾಗಿ ನಿಯಂತ್ರಿಸಲು ನಿಯೋಜಿಸಲಾಗಿದೆ. ಈ ಮೂಲಕ ಸ್ವತಂತ್ರ ಮತ್ತು ನ್ಯಾಯ ಸಮ್ಮತ ಚುನಾವಣಾ ವ್ಯವಸ್ಥೆಯನ್ನೇ ಹಾಳು ಮಾಡಲಾಗುತ್ತಿದೆ. ಅಲ್ಲದೆ ಈ ಫಲಿತಾಂಶವು ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಒಳ ಒಪ್ಪಂದ ನಡೆದಿರುವ ಬಗ್ಗೆಯೂ ಅನುಮಾನಗಳಿವೆ ಎಂದು ಸಂಶಯ ವ್ಯಕ್ತಪಡಿಸಿದ್ದಾರೆ.

ಇಂತಹ ರಾಜಕೀಯ ಹೊಂದಾಣಿಕೆಗಳ ಮೂಲಕ ಎಸ್‌ಡಿಪಿಐ ಪರ್ಯಾಯ ಶಕ್ತಿಯಾಗುತ್ತಿದೆ. ಪ್ರಮುಖ ಪಕ್ಷಗಳು ಪರಸ್ಪರ ರಕ್ಷಿಸಿಕೊಳ್ಳುತ್ತಿವೆ. ಈ ಎಲ್ಲಾ ಸವಾಲುಗಳ ನಡುವೆಯೂ ದಾವಣಗೆರೆಯಲ್ಲಿ ಎಸ್‌ಡಿಪಿಐಗೆ ಜನಬೆಂಬಲ ಹೆಚ್ಚುತ್ತಿರುವುದು ದೃಢ ಸೂಚಕವಾಗಿದ್ದು, ಭ್ರಷ್ಟಾಚಾರ ಅಥವಾ ಅನೈತಿಕ ವಿಧಾನಗಳಿಗೆ ತಲೆಬಾಗದೆ ಪ್ರಾಮಾಣಿಕತೆ, ನಿಷ್ಠೆ ಮತ್ತು ಜನರ ಸಮಸ್ಯೆಗಳತ್ತ ಬದ್ಧತೆಯೊಂದಿಗೆ ಹೋರಾಡಿದ್ದೇವೆ ಮತ್ತು ಇದೇ ರೀತಿಯ ಹೋರಾಟವನ್ನು ಮುಂದುವರೆಸುತ್ತೇವೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶಾಸಕ ಜಿ.ಟಿ.ದೇವೇಗೌಡರಿಂದ ಶುದ್ಧ ಕುಡಿಯುವ ನೀರಿನ ಘಟಕ ಉದ್ಘಾಟನೆ...



ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ವಾರ್ಡ್ 58ರ ರಾಮಕೃಷ್ಣನಗರ ಹೆಚ್–ಬ್ಲಾಕ್‌ನಲ್ಲಿ 12 ಲಕ್ಷ ರೂ. ವೆಚ್ಚದಲ್ಲಿ ಶಾಸಕರ ಅನುದಾನದಲ್ಲಿ ನಿರ್ಮಾಣಗೊಂಡಿರುವ ಶುದ್ಧ ಕುಡಿಯುವ ನೀರಿನ ಘಟಕವನ್ನು ಶಾಸಕ ಜಿ.ಟಿ.ದೇವೇಗೌಡರು ಉದ್ಘಾಟಿಸಿದರು. ಈ ವೇಳೆ ನಿವಾಸಿಗಳು ಸೇರಿದಂತೆ ಮುಖಂಡರಾದ ಕಾರ್ಗಿಲ್ ಮಹೇಶ್, ದಿನೇಶ್ ಹಾಜರಿದ್ದರು.

ಅಶೋಕಪುರಂ ಲೀಗ್–2026 ಕ್ರಿಕೆಟ್ ಟ್ರೋಫಿ ವಿತರಣೆ....



ಅಶೋಕಪುರಂ ಮಹದೇಶ್ವರ ಯೂತ್ ವತಿಯಿಂದ ಮೈಸೂರಿನ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಕ್ರೀಡಾಂಗಣ(ಎನ್‌ಐಇ)ದಲ್ಲಿ ನಡೆದ ಅಶೋಕಪುರಂ ಲೀಗ್–2026 ಕ್ರಿಕೆಟ್ ಟೂರ್ನಿಯಲ್ಲಿ ಜೆ.ಕೆ.ಗ್ರೂಪ್ಸ್ ತಂಡ ಪ್ರಥಮ ಬಹುಮಾನವಾಗಿ 1 ಲಕ್ಷ ನಗದು ಮತ್ತು ಆಕರ್ಷಕ ಟ್ರೋಫಿ ತನ್ನದಾಗಿಸಿಕೊಂಡಿತು. ಎ.ಪಿ.ಥಂಡರ್ಸ್ 50 ಸಾವಿರ ನಗದು ಬಹುಮಾನ ಮತ್ತು ಆಕರ್ಷಕ ಟ್ರೋಫಿಯೊಂದಿಗೆ ದ್ವಿತೀಯ ಸ್ಥಾನ, ಎ.ಪಿ.ಪ್ಯಾಂಥರ್ಸ್ ತಂಡ 25 ಸಾವಿರ ನಗದು ಬಹುಮಾನ ಮತ್ತು ಆಕರ್ಷಕ ಟ್ರೋಫಿಯೊಂದಿಗೆ ತೃತೀಯ ಸ್ಥಾನ ಪಡೆದುಕೊಂಡಿತು. ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್ ವಿಜೇತ ತಂಡಗಳಿಗೆ ಟ್ರೋಫಿ ವಿತರಿಸಿದರು. ಈ ವೇಳೆ ಮಾಜಿ ಮೇಯರ್ ಪುರುಷೋತ್ತಮ್, ಮುಖಂಡರಾದ ಆರ್.ಸಿ.ಜೋಗಿ ಮಹೇಶ್, ನಗರಪಾಲಿಕೆ ಮಾಜಿ ಸದಸ್ಯ ಪಿ.ಟಿ.ಕೃಷ್ಣ, ಗುರು, ಹರಿದಾಸ್, ಆದರ್ಶ ಭೀಮ್, ಮನು, ನಾಗೇಂದ್ರ, ಹರಿ, ಚೇತನ್ ಮತ್ತಿತರರು ಪಾಲ್ಗೊಂಡಿದ್ದರು.

ನಿಜ ಜನ ನಾಯಕ ವಿಜಯ್!

ಮೈಸೂರು, ಮೇ 4(ಎಂಕೆ)– ನಿಜವಾಗಲೂ ಒಬ್ಬ ಜನ ನಾಯಕ ಹುಟ್ಟುವುದು ಜನರ ಮಧ್ಯೆ ಹೊರತು ದೊಡ್ಡ ಕುಟುಂಬಗಳಿಂದಲ್ಲ. ಅದೇ ಈ ಮಣ್ಣಿನ ನಿಜವಾದ ಗುಣ ಎಂಬುದನ್ನು ತಮಿಳು ನಾಡಿನ ನಟ, ರಾಜಕಾರಣಿ ವಿಜಯ್ ತೋರಿಸಿಕೊಟ್ಟಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಪ್ರದೀಪ್ ಎಂ.ಕುಮಾರ್ ಸಾಮಾಜಿಕ ಜಾಲತಾಣದಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಳ್ಳುವ ಮೂಲಕ ಅಭಿನಂದನೆ ತಿಳಿಸಿದ್ದಾರೆ.



ದೇಶದ ಒಂದು ಉತ್ತಮ ಬೆಳವಣಿಗೆಯನ್ನು ಅಭಿನಂದಿಸುವುದಕ್ಕೆ ಯಾವ ಪಕ್ಷ ದವರಾದರೇನು. ಪ್ರಜಾಪ್ರಭುತ್ವದ ನಿಜವಾದ ಗೆಲುವನ್ನು ವಿಜಯ್ ಅವರು ತೋರಿಸಿ ಕೊಟ್ಟಿದ್ದಾರೆ. ಎಲ್ಲಾ ಪಕ್ಷದವರು ಇದರಿಂದ ಕಲಿಯುವುದು ಬಹಳವಿದೆ. ನಿಜವಾಗಲೂ ಜನರ ದಿಕ್ಸೂಚಿ ಯಾವ ಕಡೆ ಬೇಕಾದರೂ ಬದಲಾಗಬಹುದು ಎಂಬುದಕ್ಕೆ ಇದೆ ಉದಾಹರಣೆ ಎಂದು ಉಲ್ಲೇಖಿಸಿದ್ದಾರೆ.


ಪ್ರದೀಪ್ ಎಂ.

ಬಿಜೆಪಿ ಉಪ ಮುಖ್ಯಮಂತ್ರಿ ಸ್ಥಾನ, ಮುಖ್ಯಮಂತ್ರಿ ಸ್ಥಾನ ಕೊಡುತ್ತೇವೆ ಎಂದರೂ ತಮ್ಮ ಸಿದ್ಧಾಂತ ಮತ್ತು ತಮ್ಮನ್ನು ನಂಬಿರುವ ಜನರ ನಂಬಿಕೆಯೇ ಮುಖ್ಯ ಎಂಬ ಗಟ್ಟಿತನ ಹೊಂದಿದ್ದ ವಿಜಯ್ ಅವರ ವೈಯಕ್ತಿಕ ವಿಚಾರಗಳ ಬಗ್ಗೆ ವಿರೋಧ ಪಕ್ಷಗಳು ಏನೆಲ್ಲಾ ಅಪಪ್ರಚಾರ ಮಾಡಿದರೂ ಅವರ ಜನಸೇವೆಯ ಸ್ಪಷ್ಟತೆಯ ಪರ ನಿಂತಂತಹ ತಮಿಳುನಾಡಿನ ಜನರ ನಡೆ ಸಹ ಶ್ಲಾಘನೀಯ. ಇಂತಹ ರಾಜಕೀಯ, ಸಮಾಜದ ದಿಕ್ಕನ್ನೇ ಬದಲಿಸುವಂತಹ ನಡೆಗಳು ಮತ್ತು ನಾಯಕರು ಎಲ್ಲಾ ಪಕ್ಷಗಳಲ್ಲಿ, ರಾಜ್ಯಗಳಲ್ಲಿ, ದೇಶದ ಭವಿಷ್ಯದಲ್ಲಿ ಬರಲಿ ಎಂದು ಆಶಿಸಿದ್ದಾರೆ.

ಪಂಚರಾಜ್ಯಗಳ ಫಲಿತಾಂಶ; ಬಿಜೆಪಿ ವಿರೋಧಿಗಳಿಗೆ ತಕ್ಕ ಪಾಠ

ಮೈಸೂರು, ಮೇ 4(ಎಂಕೆ)–ಪಂಚ ರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಿದ್ದು, ವಿರೋಧಿಗಳಿಗೆ ಜನರು ಕಲಿಸಿರುವ ತಕ್ಕ ಪಾಠ ಎಂದು ಬಿಜೆಪಿ ಮುಖಂಡ ಹಾಗೂ ಮಾಜಿ ಮೇಯರ್ ಸಂದೇಶ್ ಸ್ವಾಮಿ ಪ್ರತಿಕ್ರಿಯಿಸಿದ್ದಾರೆ.


ಸಂದೇಶ್‌ಸ್ವಾಮಿ

ಪಶ್ಚಿಮ ಬಂಗಾಳದಲ್ಲಿ ಟಿಎಂಸಿ ನಾಯಕಿ ಮಮತಾ ಬ್ಯಾನರ್ಜಿ 15 ವರ್ಷಗಳಿಂದ ಮುಖ್ಯಮಂತ್ರಿಯಾಗಿ ಆಡಳಿತ ನಡೆಸಿದ್ದರೂ ಈ ಬಾರಿ ಬಿಜೆಪಿ ಎದುರು ದಯನೀಯವಾಗಿ ಸೋಲು ಕಂಡಿದ್ದಾರೆ. ಈ ರಾಜ್ಯದಲ್ಲಿ ಕಾಂಗ್ರೆಸ್ ನೆಲಕಚ್ಚಿದೆ. ಅಸ್ಸಾಂ, ಪುದುಚೆರಿಯಲ್ಲೂ ಬಿಜೆಪಿ ಗೆಲುವು ಸಾಧಿಸಿದ್ದು, ಕಾಂಗ್ರೆಸ್ ಮುಕ್ತ ಭಾರತ ಗೋಚರಿಸುತ್ತಿದೆ ಎಂದಿದ್ದಾರೆ. ಕೇರಳದಲ್ಲಿ ಬಿಜೆಪಿ ಖಾತೆ ತೆರೆದಿರುವುದು ಆಶಾದಾಯಕ ಬೆಳವಣಿಗೆಯಾಗಿದ್ದು, ಇಂತಹ ಐತಿಹಾಸಿಕ ಗೆಲುವಿಗೆ ಕಾರಣವಾಗಿರುವ ಪ್ರಧಾನಿ ನರೇಂದ್ರ ಮೋದಿ, ಗೃಹಮಂತ್ರಿ ಅಮಿತ್ ಶಾ ಹಾಗೂ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಅವರಿಗೆ ಪತ್ರಿಕಾ ಪ್ರಕಟಣೆ ಮೂಲಕ ಅಭಿನಂದನೆ ಸಲ್ಲಿಸಿದ್ದಾರೆ.

ರೈತರ ಕೆರೆಗಳಿಗೆ ನೀರು ಹರಿಸಲು ಅಧಿಕಾರಿಗಳಿಗೆ ಚಂದನ್‌ಗೌಡ ಆಗ್ರಹ



ಬೊಮ್ಮನಹಳ್ಳಿ ಸಮೀಪ ನೀರು ವಿಭಜನೆಯಾಗುವ ಗೇಟ್ ಬಳಿ ರೈತರು ಸಭೆ ನಡೆಸಿದರು.

ಮೈಸೂರು, ಮೇ 4–ಗುಂಡ್ಲುಪೇಟೆ ತಾಲೂಕಿನ ಬೊಮ್ಮನಹಳ್ಳಿ ಸಮೀಪದ ನೀರು ವಿಭಜನೆಯಾಗುವ ಗೇಟ್ ಬಳಿ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ನೇತೃತ್ವದಲ್ಲಿ ರೈತರ ಕುಂದುಕೊರತೆ ಆಲಿಸುವ ಹಾಗೂ ಕೆರೆಗಳಿಗೆ ನೀರು ಹರಿಸುವ ಕುರಿತು ನಿರ್ಣಾಯಕ ಸಭೆ ನಡೆಸಲಾಯಿತು.

ಸುವರ್ಣ ನಗರ, ಬೊಮ್ಮನಹಳ್ಳಿ ಮತ್ತು ಅರಕಲವಾಡಿ ಭಾಗದ ಕೆರೆಗಳಿಗೆ ಸಮರ್ಪಕವಾಗಿ ನೀರು ಹರಿಯುತ್ತಿಲ್ಲ ಎಂಬ ರೈತರ ದೂರುಗಳ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಚಂದನ್‌ಗೌಡ, ನೀರಾವರಿ ಇಲಾಖೆ ಅಧಿಕಾರಿಗಳೊಂದಿಗೆ ಚರ್ಚೆ ನಡೆಸಿದರು. ನೀರಿನ ಹಂಚಿಕೆಯಲ್ಲಿ ಆಗುತ್ತಿರುವ ತಾಂತ್ರಿಕ ತೊಂದರೆಗಳನ್ನು ಸರಿಪಡಿಸಿ, ರೈತರ ಬೆಳೆಗೆ ಮತ್ತು ಅಂತರ್ಜಲ ವೃದ್ಧಿಗೆ ಈ ಭಾಗದ ಕೆರೆಗಳಿಗೆ ತಕ್ಷಣವೇ ನೀರು ಹರಿಸಬೇಕೆಂದು ಆಗ್ರಹಿಸಿದರು.

ರೈತರು ಪ್ರತಿ ವರ್ಷ ನೀರಿನ ಸಮಸ್ಯೆ ಎದುರಿಸುವುದು ಸರಿಯಲ್ಲ. ಅಧಿಕಾರಿಗಳು ಕೇವಲ ತಾತ್ಕಾಲಿಕ ಕ್ರಮ ಕೈಗೊಳ್ಳದೆ, ಬೊಮ್ಮನಹಳ್ಳಿ ಗೇಟ್ ಬಳಿ ಇರುವ ನೀರು ವಿಭಜನೆ ಸಮಸ್ಯೆಗೆ ಶಾಶ್ವತವಾದ ವೈಜ್ಞಾನಿಕ ಪರಿಹಾರ ಕಲ್ಪಿಸಬೇಕು ಎಂದು ಚಂದನ್‌ಗೌಡ, ಅಧಿಕಾರಿಗಳಿಗೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ರೈತ ಕಲ್ಯಾಣ ಸಂಘದ ರಾಜ್ಯ, ಜಿಲ್ಲಾ, ತಾಲೂಕು ಘಟಕದ ಎಲ್ಲ ಪದಾಧಿಕಾರಿಗಳು ಅರಕಲವಾಡಿ ಹಾಗೂ ಸುತ್ತಮುತ್ತಲ ಗ್ರಾಮಗಳ ನೂರಾರು ಗ್ರಾಮಸ್ಥರು ಭಾಗವಹಿಸಿ ರೈತರ ಹೋರಾಟಕ್ಕೆ ಬೆಂಬಲ ಸೂಚಿಸಿದರು.

ಅಭಿನಂದನೆ....



ಭಾರತೀಯ ಭಾಷಾ ಸಂಸ್ಥಾನದ ನೂತನ ನಿರ್ದೇಶಕರಾದ ಪ್ರೊ.ಬಸವರಾಜ ಕೋಡಗುಂಟೆ ಅವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಶೈಕ್ಷಣಿಕ ಡೀನ್ ಪ್ರೊ.ರಾಮನಾಥಂ ನಾಯ್ಡು, ಅಧ್ಯಯನ ಕೇಂದ್ರದ ಡೀನ್ ಡಾ.ಚಂದ್ರೇಗೌಡ, ಆಡಿಯೋ ವೀಡಿಯೊ ವಿಭಾಗದ ಮುಖ್ಯಸ್ಥ ಸಿದ್ದೇಗೌಡ ಜಿಬಿಎಸ್, ಸಂಪನ್ಮೂಲ ವ್ಯಕ್ತಿ ದಯಾನಂದ ಹಾಜರಿದ್ದರು. ಇದೇ ವೇಳೆ ಶೈಕ್ಷಣಿಕ ವಿಷಯಕ್ಕೆ ಸಂಬಂಧಪಟ್ಟಂತೆ ಅವರೊಂದಿಗೆ ಚರ್ಚಿಸಲಾಯಿತು.

ಪಾರ್ಕ್‌ನಲ್ಲಿ ಜಿಮ್ ಪರಿಕರ ಅಳವಡಿಕೆ ಯತ್ನ; ತಂತಿ ಬೇಲಿ ಕಿತ್ತು, ಮರಗಳ ಹನನ ನಡೆಸಿದವರ ವಿರುದ್ಧ ಕ್ರಮಕ್ಕೆ ಆಗ್ರಹ

ಮೈಸೂರು, ಮೇ 4(ಎಸ್‌ಪಿಎನ್)–ಮೈಸೂರಿನ ವಿಜಯನಗರ 1ನೇ ಹಂತದ ಬಸವ ಸಮಿತಿ ಪಕ್ಕ (8ನೇ ಮುಖ್ಯರಸ್ತೆ)ದಲ್ಲಿರುವ ಉದ್ಯಾನವನದಲ್ಲಿ ಜಿಮ್ ಪರಿಕರಗಳನ್ನು ಅಳವಡಿಸಲು ತಂತಿಬೇಲಿ ಕಾನೂನು ಬಾಹಿರವಾಗಿ ಕಿತ್ತು ಹಾಕಿ, 8 ಮರಗಳನ್ನು ಬೇರು ಸಮೇತ ಕಿತ್ತುಹಾಕಿರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮಕೈಗೊಳ್ಳುವಂತೆ ಒತ್ತಾಯಿಸಿ ವಲಯ ಕಚೇರಿ 5ರ ಆಯುಕ್ತರಿಗೆ, ಪರಿಸರ ಉಳಿಸಿ ಸಮಿತಿ ದೂರು ನೀಡಿದೆ.

ಮೈಸೂರು ಬಸವ ಸಮಿತಿ ಪಕ್ಕದ ಉದ್ಯಾನವನದಲ್ಲಿ ಸಾರ್ವಜನಿಕ ಸಹಾಯದಿಂದ ಕಳೆದೆರಡು ವರ್ಷಗಳ ಹಿಂದೆ ಸಸಿನೆಟ್ಟು ಹಸಿರೀಕರಣ ಮಾಡಲಾಗಿದೆ. ಇದೀಗ ಜಿಮ್ ಸಾಮಾಗ್ರಿಗಳ ಅಳವಡಿಕೆ ಹಾಗೂ ಕಾಂಕ್ರೀಟ್ ಕಟ್ಟಡದ ಕಾಮಗಾರಿಗಾಗಿ ಹತ್ತಾರು ಮರಗಳ ಹನನವಾಗಿರುವುದಕ್ಕೆ ಪರಿಸರ ಉಳಿಸಿ ಸಮಿತಿ ತೀವ್ರ ಬೇಸರ ವ್ಯಕ್ತಪಡಿಸಿದೆ.

ಉದ್ಯಾನವನ ಕಾಯ್ದೆ 1985ರ ಅನ್ವಯ ಸಾರ್ವಜನಿಕ ಉದ್ಯಾನವನಗಳಲ್ಲಿ ಯಾವುದೇ ದೊಡ್ಡಮಟ್ಟದ ಕಾಂಕ್ರೀಟ್ ಕಾಮಗಾರಿಗಳನ್ನು ನಡೆಸುವಂತಿಲ್ಲ. ಅದರಲ್ಲೂ 5 ಎಕರೆ ಒಳಗೆ ಇರುವಂತಹ ಪಾರ್ಕ್‌ಗಳಲ್ಲಿ ಯಾವುದೇ ಕಾಂಕ್ರೀಟ್ ಕಾಮಗಾರಿ ಮಾಡುವಂತಿಲ್ಲ ಎಂದು ಸುಪ್ರೀಂಕೋರ್ಟ್ ಆದೇಶವಿದೆ. ಅಲ್ಲದೆ, 5 ಎಕರೆ ಮೇಲ್ಪಟ್ಟ ಪಾರ್ಕ್‌ಗಳಲ್ಲಿ ಮಾತ್ರ 10X10 ಅಡಿ ಅಳತೆಯುಳ್ಳ ರೂಂ ನಿರ್ಮಿಸಲು ಅವಕಾಶವಿದೆ. ಅಲ್ಲದೆ, ಗಿಡಮರಗಳಿಗೆ ನೀರಿನ ಸೌಕರ್ಯ ಕಲ್ಪಿಸುವ ಕಾಮಗಾರಿಗೆ ಅವಕಾಶವಿದೆ. ಇಷ್ಟು ಬಿಟ್ಟು ಈ ಪಾರ್ಕ್‌ಗಳಲ್ಲಿ ಜಿಮ್ ಪರಿಕರಗಳ ಅಳವಡಿಕೆಗೆ ಅವಕಾಶ ನೀಡಲು ಮುಂದಾಗಿರುವ ಅಧಿಕಾರಿಗಳಿಗೆ ವಿರುದ್ಧ ಕಾನೂನು ಕ್ರಮಕೈಗೊಳ್ಳುವಂತೆ ಮನವಿ ಪತ್ರದಲ್ಲಿ ಆಗ್ರಹಿಸಲಾಗಿದೆ.



ಪಾರ್ಕ್‌ನ ತಂತಿಬೇಲಿಯನ್ನು ಕಿತ್ತು ಹಾಕಿ, 8 ಮರಗಳನ್ನು ಬೇರು ಸಮೇತ ಕಿತ್ತು ಹಾಕಿರುವ ದೃಶ್ಯ.

ಪಾರ್ಕ್‌ನ ಹಸಿರೀಕರಣಕ್ಕೆ ಧಕ್ಕೆ ತರಲು ಯತ್ನಿಸಿರುವ ಭ್ರಷ್ಟ ಅಧಿಕಾರಿಗಳ ವಿರುದ್ಧ ಸಾರ್ವಜನಿಕರಿಂದ ದೂರು ನೀಡಿದ್ದರೂ ಇಲ್ಲಿಯವರೆಗೂ ಕ್ರಮ ಆಗಿಲ್ಲ. ಮೈಸೂರಿನ ಪಾರ್ಕ್‌ಗಳು ಹಸರೀಕರಣದಿಂದ ಕಂಗೊಳಿಸಬೇಕಿದ್ದ ಜಾಗಗಳು. ಇಂದು ಕಾಂಕ್ರೀಟ್ ಕಾಡು ಮಾಡಲು ಹೊರಟಿರುವ ಅಧಿಕಾರಿಗಳಿಗೆ ಅಧಿಕಾರ ಕೊಟ್ಟವರ್ಯಾರು ಎಂದು ತೀವ್ರ ಆಕ್ರೋಶ ಹೊರಹಾಕಿದೆ.

ಮೈಸೂರು ನಗರ ಪಾಲಿಕೆಯ ವಲಯ ಕಚೇರಿ 5ರ ವ್ಯಾಪ್ತಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕೆಲ ಅಧಿಕಾರಿಗಳ ಕುಮ್ಮಕ್ಕಿನಿಂದ ವಿಜಯನಗರ ಒಂದನೇ ಹಂತದ ಹಲವು ಪಾರ್ಕ್‌ಗಳನ್ನು ಕಾಂಕ್ರೀಟ್ ಕಾಡು ಮಾಡಲು ಹೊರಟಿದೆ ಎಂದು ಆರೋಪಿಸಿರುವ ಪರಿಸರ ಉಳಿಸಿ ಸಮಿತಿ ಸದಸ್ಯ ಕಿರಣ್ ಮತ್ತು ಇತರೆ ಪದಾಧಿಕಾರಿಗಳು ಈ ಕಾಮಗಾರಿಗೆ ಆದಷ್ಟು ಬೇಗ ತಡೆ ಹಿಡಿಯುವಂತೆ ವಲಯ ಕಚೇರಿ 5ರ ಪಾಲಿಕೆ ವಲಯ ಆಯುಕ್ತರಲ್ಲಿ ಮನವಿ ಮಾಡಿದ್ದಾರೆ.

ಟೂಲ್ ರೂಂ ಮೆಷಿನಿಸ್ಟ್ ಕೋರ್ಸಿಗೆ ಅರ್ಜಿ ಆಹ್ವಾನ

ಮೈಸೂರು,ಮೇ 4–ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದ ವತಿಯಿಂದ ಮೈಸೂರು ಕೇಂದ್ರದಲ್ಲಿ ಎಸ್‌ಎಸ್‌ಎಲ್‌ಸಿ ಉತ್ತೀರ್ಣ, ಅನುತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ತಾಂತ್ರಿಕ ಕೌಶಲ್ಯ ನೀಡಿ ಉತ್ತಮ ಉದ್ಯೋಗಾವಕಾಶ ಕಲ್ಪಿಸುವ ಉದ್ದೇಶದಿಂದ ಬೆಳಗೊಳ ಕೈಗಾರಿಕಾ ಪ್ರದೇಶದಲ್ಲಿರುವ ತರಬೇತಿ ಕೇಂದ್ರವು 2025–26ನೇ ಸಾಲಿನ ಒಂದು ವರ್ಷದ ಟೂಲ್ ರೂಂ ಮೆಷಿನಿಸ್ಟ್ ಕೋರ್ಸ್‌ಗೆ ಅರ್ಜಿ ಆಹ್ವಾನಿಸಿದೆ.

ಈ ಕೋರ್ಸಿನಲ್ಲಿ ಕನ್ವೆನ್ಷನಲ್ ಹಾಗೂ ಅಡ್ವಾನ್ಸ್ ಸಿ.ಎನ್.ಸಿ ಮೆಷಿನಿಂಗ್ ಒಳಗೊಂಡಂತೆ ಟರ್ನಿಂಗ್, ಮಿಲ್ಲಿಂಗ್, ಗ್ರೈಂಡಿಂಗ್ ವಿಭಾಗದಲ್ಲಿ ಪರಿಣಿತರಿಂದ ಥಿಯರಿ ಹಾಗೂ ಪ್ರಾಕ್ಟಿಕಲ್ ತರಬೇತಿ ನೀಡಲಾಗುವುದು ಮತ್ತು ಆರ್ಥಿಕವಾಗಿ ಹಿಂದುಳಿದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಭ್ಯರ್ಥಿಗಳಿಗೆ AITT (SCP/TSP) ಯೋಜನೆ ಅಡಿಯಲ್ಲಿ ಉಚಿತವಾಗಿ ತರಬೇತಿ ನೀಡಲಾಗುವುದು. ಮೇ 15ರಂದು ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ #93–94 ಬೆಳಗೊಳ ಕೈಗಾರಿಕ ಪ್ರದೇಶ ಕೆ.ಆರ್.ಎಸ್ ರೋಡ್, ಮೈಸೂರು ಇಲ್ಲಿನ ದೂ.ಸಂ: 9945442654, 9019232390 08212–582097 ಸಂಪರ್ಕಿಸಬಹುದೆಂದು ಸಿ.ಓ.ಇ ಮುಖ್ಯಸ್ಥ ಶ್ರೀನಿವಾಸ್ ಎಸ್. ಭಟ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೇ 7, ಕಾಲಭೈರವೇಶ್ವರಸ್ವಾಮಿ ದೇವಾಲಯ ಲೋಕಾರ್ಪಣೆ



ಮಂಡ್ಯ, ಮೇ 4– ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ವತಿಯಿಂದ ನಗರದ ಬಂದೀಗೌಡ ಬಡಾವಣೆಯಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಕಾಲಭೈರವೇಶ್ವರಸ್ವಾಮಿ ದೇವಾಲಯದ ಕುಂಭಾಭಿಷೇಕ ಮತ್ತು ಲೋಕಾರ್ಪಣೆ ಸಮಾರಂಭ ಮೇ 7ರಂದು ನಡೆಯಲಿದೆ.

ದೇವಾಲಯವನ್ನು ದ್ರಾವಿಡ ಶೈಲಿಯಲ್ಲಿ ಭಕ್ತರ ಸಹಕಾರದಿಂದ 3 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿದೆ ಎಂದು ಕೊಮ್ಮೇರಹಳ್ಳಿ ಶಾಖಾ ಮಠದ ಶ್ರೀ ಪುರುಷೋತ್ತಮಾನಂದನಾಥ ಸ್ವಾಮೀಜಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮೇ 5ರಂದು ಸಂಜೆ 4 ಗಂಟೆಗೆ ಗಣಪತಿ ಹೋಮ, ವಾಸ್ತು ಹೋಮ, ದೇವಾಲಯ ಪ್ರವೇಶ ನಡೆಯಲಿದ್ದು, ಮೇ 6ರಂದು ಬೆಳಗ್ಗೆ ಯಾಗಶಾಲಾ ಪ್ರವೇಶ ಮತ್ತು ಹೋಮ ಪೂರ್ಣಾಹುತಿ ನಡೆಯಲಿದೆ ಸಂಜೆ 4 ಗಂಟೆಗೆ ಸತ್ಸಂಗ ಕಾರ್ಯಕ್ರಮ ಮತ್ತು ದಾನಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು.

7ರಂದು ಬೆಳಗ್ಗೆ 10 ಗಂಟೆಗೆ ದೇವಾಲಯದ ಕುಂಭಾಭಿಷೇಕ ಮತ್ತು ಲೋಕಾರ್ಪಣಾ ಸಮಾರಂಭವು ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ಡಾ. ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಡೆಯಲಿದ್ದು, ಬೆಂಗಳೂರು ಕೈಲಾಸಾಶ್ರಮದ ಶ್ರೀ ಜಯೇಂದ್ರಪುರಿ ಸ್ವಾಮೀಜಿ, ಕೆಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಶ್ರೀ ಡಾ.ನಿಶ್ಚಲಾನಂದನಾಥ ಸ್ವಾಮೀಜಿ, ದಾವಣಗೆರೆ ಐರಣಿ ಹೊಳೆಮಠ ಮಹಾಸಂಸ್ಥಾನ ಮಠದ ಶ್ರೀ ಬಸವರಾಜೇಂದ್ರ ಸ್ವಾಮೀಜಿ, ಕಾಗಿನೆಲೆ ಪೀಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ಬೆಂಗಳೂರು ಓಂಕಾರಾಶ್ರಮ ಶ್ರೀ ಮಧುಸೂಧನಾನಂದಪುರಿ ಸ್ವಾಮೀಜಿ, ಚಿತ್ರದುರ್ಗ ಕಬೀರಾನಂದ ಆಶ್ರಮದ ಶ್ರೀ ಶಿವಲಿಂಗಾನಂದ ಸ್ವಾಮೀಜಿ, ನೆಲಮಂಗಲ ಶನಿಮಹಾತ್ಮ ದೇವಸ್ಥಾನ ಹನುಮಂತಪ್ಪ ಸ್ವಾಮಿ, ಶ್ರೀ ಡಾ. ಪ್ರಕಾಶನಾಥ ಸ್ವಾಮೀಜಿ, ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಗುಣನಾಥ ಸ್ವಾಮೀಜಿ, ಮಂಗಳನಾಥ ಸ್ವಾಮೀಜಿ, ಅನ್ನದಾನೇಶ್ವರನಾಥ ಸ್ವಾಮೀಜಿ, ಶ್ರೀ ಸೌಮ್ಯನಾಥ ಸ್ವಾಮೀಜಿ, ಶಂಭುನಾಥ ಸ್ವಾಮೀಜಿ, ಡಾ. ಧರ್ಮಪಾಲನಾಥ ಸ್ವಾಮೀಜಿ, ಶ್ರೀ ಚಂದ್ರಶೇಖರನಾಥ ಸ್ವಾಮೀಜಿ ಸೇರಿದಂತೆ ಹಲವು ಮಠಾಧೀಶರು ಭಾಗವಹಿಸಲಿದ್ದಾರೆ ಎಂದು ವಿವರಿಸಿದರು.

ಸಮಾರಂಭದಲ್ಲಿ ಕೇಂದ್ರ ಬೃಹತ್ ಕೈಗಾರಿಕಾ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಪಿ. ರವಿಕುಮಾರ್ ಗೌಡ, ಕೆ.ಎಂ.ಉದಯ್, ದಿನೇಶ್ ಗೂಳಿಗೌಡ, ರಮೇಶ್ ಬಂಡಿಸಿದ್ದೇಗೌಡ, ಕೆ. ವಿವೇಕಾನಂದ, ದರ್ಶನ್ ಪುಟ್ಟಣ್ಣಯ್ಯ, ಎಚ್.ಟಿ.ಮಂಜು, ಮಧು ಜಿ. ಮಾದೇಗೌಡ, ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಒಕ್ಕಲಿಗರ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಎಸ್. ಆತ್ಮಾನಂದ, ಮಾಜಿ ಶಾಸಕರಾದ ಡಿ.ಸಿ. ತಮ್ಮಣ್ಣ, ಕೆ. ಅನ್ನದಾನಿ, ಎಂ. ಶ್ರೀನಿವಾಸ್, ರವೀಂದ್ರ ಶ್ರೀಕಂಠಯ್ಯ, ಸುರೇಶ್‌ಗೌಡ, ಕೆ.ಬಿ.ಚಂದ್ರಶೇಖರ್, ಕೆ.ಟಿ.ಶ್ರೀಕಂಠೇಗೌಡ, ಮರಿತಿಬ್ಬೇಗೌಡ, ಬಿಜೆಪಿ ಮುಖಂಡ ಇಂಡುವಾಳು ಸಚ್ಚಿದಾನಂದ, ಜಿಲ್ಲಾ ಬಿಜೆಪಿ ಅಧ್ಯಕ್ಷ ಡಾ.ಎನ್.ಎಸ್.ಇಂದ್ರೇಶ್, ಜಾ. ದಳ ಮುಖಂಡ ಬಿ.ಆರ್.ರಾಮಚಂದ್ರ, ರೆಡ್‌ಕ್ರಾಸ್ ಸಭಾಧ್ಯಕ್ಷೆ ಡಾ. ಮೀರಾಶಿವಲಿಂಗಯ್ಯ, ಅಮರಾವತಿ ಚಂದ್ರಶೇಖರ್ ಸೇರಿದಂತೆ ಇತರರು ಭಾಗವಹಿಸಲಿದ್ದಾರೆ ಎಂದರು.

ಅನ್ನದಾಸೋಹಕ್ಕೆ ವಿಜಯ್ ಆನಂದ್ ನೆರವು: ಮೂರು ದಿನಗಳ ಕಾಲ ನಡೆಯಲಿರುವ ಪೂಜಾ ಮಹೋತ್ಸವಕ್ಕೆ ಆಗಮಿಸುವ ಭಕ್ತರು ಮತ್ತು ಸಾರ್ವಜನಿಕರಿಗೆ ಅನ್ನದಾಸೋಹ ವ್ಯವಸ್ಥೆ ಮಾಡಲಾಗಿದ್ದು, ಇದರ ಸಂಪೂರ್ಣ ವೆಚ್ಚವನ್ನು ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯ್ ಆನಂದ್ ಅವರು ತಮ್ಮ ವೈಯಕ್ತಿಕ ಹಣದಿಂದ ಭರಿಸಲಿದ್ದಾರೆಂದು ಸ್ವಾಮೀಜಿ ಹೇಳಿದರು.

ದೇವಾಲಯದ ಪ್ರಾಂಗಣದಲ್ಲಿ ಗಣಪತಿ, ಸುಬ್ರಹ್ಮಣ್ಯಸ್ವಾಮಿ, ಚಂದ್ರಮೌಳೇಶ್ವರ ಸ್ವಾಮಿ, ಬ್ರಹ್ಮರಾಂಭಿಕಾ ದೇವಿ, ವೆಂಕಟೇಶ್ವರಸ್ವಾಮಿ ಹಾಗೂ ಸೀತಾದೇವಿ ಸಮೇತ ಶ್ರೀರಾಮ ಪರಿವಾರ ದೇವತೆಗಳನ್ನು ಪ್ರತಿಷ್ಠಾಪಿಸಲಾಗಿದೆ. ಬಿ.ಟಿ. ಜಯರಾಮು, ಎಲ್.ಕೃಷ್ಣ, ಪ್ರೊ.ಚಂದ್ರಶೇಖರ್, ಅಂಜನಾ ಶ್ರೀಕಾಂತ್, ತಿಮ್ಮೇ ಗೌಡ, ರವಿಶಂಕರ್ ಹಾಜರಿದ್ದರು.

ದುರ್ಬಲರನ್ನು ಮೇಲೆತ್ತುವ ಕೆಲಸಕ್ಕೆ ಆದ್ಯತೆ



ಅಧಿಕಾರ ಸ್ವೀಕರಿಸಿದ ಯೋಜನಾಧಿಕಾರಿ ಬಿ. ಶ್ರೀನಿವಾಸಗೌಡ.

ಕಿಕ್ಕೇರಿ: ಆರ್ಥಿಕವಾಗಿ ದುರ್ಬಲರಾದವರನ್ನು ಮೇಲೆತ್ತಿ ಮುಖ್ಯವಾಹಿನಿಗೆ ತರುವ ಕೆಲಸ ಸಂಸ್ಥೆಯ ಗುರಿಯಾಗಿದೆ ಎಂದು ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಯೋಜನೆ ತಾಲೂಕು ಯೋಜನಾಧಿಕಾರಿ ಬಿ. ಶ್ರೀನಿವಾಸಗೌಡ ತಿಳಿಸಿದರು.

ಇಲ್ಲಿನ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕು ಯೋಜನಾಧಿಕಾರಿಯಾಗಿ ನಿರ್ಗಮಿತ ಯೋಜನಾಧಿಕಾರಿಯಾದ ಪ್ರಸಾದ್ ಅವರಿಂದ ಅಧಿಕಾರ ಹಸ್ತಾಂತರ ಸ್ವೀಕರಿಸಿ ಮಾತನಾಡುತ್ತಾ, ಈ ಮೊದಲು ದಾವಣಗೆರೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದು, ಮಂಡ್ಯ ಜಿಲ್ಲೆಯಲ್ಲಿ ಸೇವೆ ಸಲ್ಲಿಸುವ ಅವಕಾಶ ಲಭಿಸಿದೆ. ಕಿಕ್ಕೇರಿ ಕ್ಷೇತ್ರದಲ್ಲಿ 2467 ಸ್ವಸಹಾಯ ಸಂಘಗಳಿವೆ. 25ಜ್ಞಾನವಿಕಾಸ ಕೇಂದ್ರಗಳಿವೆ. ಸಂಘದ ಸಹಾಯದಿಂದಲೇ ಸಮುದಾಯದ ಹಿಂದುಳಿದವರನ್ನು ಮೇಲೆತ್ತುವ ಕೆಲಸ ಮತ್ತಷ್ಟು ಮಾಡಲಾಗುವುದು ಎಂದರು.

ಮಹಿಳಾ ಸಬಲೀಕರಣಕ್ಕಾಗಿ ಆರ್ಥಿಕ ಸ್ವಾವಲಂಬನೆಗಾಗಿ ಗುಡಿ ಕೈಗಾರಿಕೆ, ಹೈನುಗಾರಿಕೆ ಅಭಿವೃದ್ಧಿ, ನೂತನ ಕೃಷಿ ವಿಧಾನ ಅಳವಡಿಕೆ, ದೇಗುಲ ಜೀರ್ಣೋದ್ಧಾರ, ಮದ್ಯವರ್ಜನ ಶಿಬಿರ, ಶ್ರದ್ಧಾ ಕೇಂದ್ರಗಳ ಶ್ರಮದಾನದಂತಹ ಹಲವು ಕಾರ್ಯಕ್ರಮಗಳ ಜತೆಗೆ ಕೆರೆಗಳ ಅಭಿವೃದ್ಧಿಗೆ ವಿಶೇಷ ಒತ್ತು ನೀಡಲಾಗುವುದು ಎಂದು ನುಡಿದರು.

ಹಣಕಾಸು ಪ್ರಬಂಧಕ ಚಾಮರಾಜ, ರಾಘವೇಂದ್ರ, ವಿಚಕ್ಷಣಾಧಿಕಾರಿ ಶಶಿಕುಮಾರ್, ನಂದಿನಿ, ಶರತ್, ಕಿರಣ್ ಇದ್ದರು.

ಮನ್‌ಮುಲ್ ಉಪ ವ್ಯವಸ್ಥಾಪಕರ ನೂತನ ಕಚೇರಿಗೆ ಭೂಮಿ ಪೂಜೆ



ಪಾಂಡವಪುರ ಪಟ್ಟಣದ ಬನ್ನಾರಿ ಮಾರಿಯಮ್ಮನ ದೇವಸ್ಥಾನದ ಮುಂಭಾಗದ ಜೆಪಿ ನಗರ ಬಡಾವಣೆಯಲ್ಲಿ ಮನ್‌ಮುಲ್ ಉಪವ್ಯವಸ್ಥಾಪಕರ ನೂತನ ಕಚೇರಿ ನಿರ್ಮಾಣಕ್ಕೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಭೂಮಿಪೂಜೆ ನೆರವೇರಿಸಿದರು.

ಪಾಂಡವಪುರ, ಮೇ 4– ಪಟ್ಟಣದ ಬನ್ನಾರಿ ಮಾರಿಯಮ್ಮನ ದೇವಸ್ಥಾನದ ಮುಂಭಾಗದ ಜೆಪಿ ನಗರ ಬಡಾವಣೆಯಲ್ಲಿ 4.40 ಕೋಟಿ ವೆಚ್ಚದಲ್ಲಿ ನಿರ್ಮಾಣ ಮಾಡುವ ಮನ್‌ಮುಲ್ ಉಪವ್ಯವ ಸ್ಥಾಪಕರ ನೂತನ ಕಚೇರಿಯ ಕಾಮಗಾರಿಗೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಅವರು ಭೂಮಿಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಮನ್‌ಮುಲ್ ಉಪವ್ಯವಸ್ಥಾಪಕರ ಕಚೇರಿಗೆ ಸ್ವಂತ ಕಟ್ಟಡ ಇಲ್ಲದ ಪರಿಣಾಮವಾಗಿ ಆರಂಭದಿಂದಲೂ ಬಾಡಿಗೆ ಕಟ್ಟಡದಲ್ಲಿ ಕಚೇರಿ ನಡೆಸಲಾಗುತ್ತಿತ್ತು, ಸ್ವಂತ ಕಚೇರಿ ನಿರ್ಮಾಣ ಮಾಡಲೆಂದು ಒಕ್ಕೂಟದಿಂದ ನಿವೇಶನ ಖರೀದಿಸಿ, ಸ್ವಂತ ಕಟ್ಟಡ ನಿರ್ಮಾಣ ಮಾಡಲು 4.40ಕೋಟಿ ವೆಚ್ಚದ ಅನುದಾನದಲ್ಲಿ ಭೂಮಿ ಪೂಜೆ ನೆರವೇರಿಸಲಾಗಿದೆ ಎಂದರು.

ಕಟ್ಟಡವು ಮೂರು ಅಂತಸ್ತಿನಿಂದ ಕೂಡಿದ್ದು ನೆಲ ಅಂತಸ್ತು ವಾಹನಗಳ ಪಾರ್ಕಿಂಗ್ ಹಾಗೂ ಗೋಡನ್ ನಿರ್ಮಾಣ ಮಾಡಲಾಗುವುದು. ಮೊದಲ ಅಂತಸ್ತಿನಲ್ಲಿ ಕಚೇರಿ ನಿರ್ವಹಣೆ ಹಾಗೂ ಎರಡನೇ ಅಂತಸ್ತಿನಲ್ಲಿ ಸಭಾಂಗಣ ಹಾಗೂ ನಿರ್ದೇಶಕರ ಕಚೇರಿ ನಿರ್ಮಾಣ ಮಾಡಲಾಗುವುದು, ಶೀಘ್ರವೇ ಕಟ್ಟಡ ನಿರ್ಮಾಣ ಮಾಡಿ ಉದ್ಘಾಟನೆಯನ್ನು ಮಾಡಲಾಗುವುದು ಎಂದರು.

ಎಂಡಿ ಡಾ.ಅಕ್ಲಪ್ಪರೆಡ್ಡಿ ಮಾತನಾಡಿದರು. ಸಂದರ್ಭದಲ್ಲಿ ಮನ್‌ಮುಲ್ ವ್ಯವಸ್ಥಾಪಕ ಶಿವಕುಮಾರ್, ಉಪವ್ಯವಸ್ಥಾಪಕ ಆರ್.ಪ್ರಸಾದ್, ಟಿಎಪಿಸಿಎಂಎಸ್ ಅಧ್ಯಕ್ಷ ಚಿಕ್ಕಾಡೆ ಗಿರೀಶ್, ಪುರಸಭೆ ಮಾಜಿ ಅಧ್ಯಕ್ಷರಾದ ಆರ್.ಸೋಮಶೇಖರ್, ಗಿರೀಶ್, ಡೇರಿ ಕಾರ್ಯದರ್ಶಿ ಸಂಘದ ಅಧ್ಯಕ್ಷ ಶಿವಪ್ಪ, ಚಿನಕುರಳಿ ಡೇರಿ ಮಾಜಿ ಅಧ್ಯಕ್ಷ ರಮೇಶ್, ಚಿಕ್ಕಬ್ಯಾಡರಹಳ್ಳಿ ಡೇರಿ ಮಾಜಿ ಅಧ್ಯಕ್ಷ ಸಿ.ಎನ್.ಚಂದನ್, ಮುಖಂಡ ಕಡಬ ಬಲರಾಮೇಗೌಡ, ಬೋರೇಗೌಡ ಸೇರಿದಂತೆ ಮಾರ್ಗ ವಿಸ್ತರ್ಣಾಧಿಕಾರಿಗಳು, ಡೇರಿ ಕಾರ್ಯದರ್ಶಿಗಳು, ಸಿಬ್ಬಂದಿಗಳು ಹಾಜರಿದ್ದರು.

ನಾಳೆ ನೇರ ಸಂದರ್ಶನ

ಮಂಡ್ಯ, ಮೇ 4– ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ. ಮಂಡ್ಯ ಹಾಗೂ ಮೆ॥ ವಲ್ಡ್ ಡಾಟಾ ಟ್ರಾಫಿಕ್‌ಟೆಕ್ ಪ್ರೈ.ಲಿ., ಮತ್ತು ಮೆ॥ ಎಲ್ ಆಂಡ್ ಟಿ ಫೈನಾನ್ಸ್ ಲಿ. ಮಂಡ್ಯ ಸಂಸ್ಥೆಯವರ ಸಹಯೋಗದಲ್ಲಿ ಮೇ 6 ರಂದು ಬೆಳಗ್ಗೆ 10 ಗಂಟೆಗೆ ನೇರಸಂದರ್ಶನವನ್ನು ಮಂಡ್ಯದ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯಲ್ಲಿ ಆಯೋಜಿಸಿದ್ದು, ಈ ನೇರ ಸಂದರ್ಶನದಲ್ಲಿ ಸದರಿ ಸಂಸ್ಥೆಯಲ್ಲಿ ಖಾಲಿ ಯಿರುವ ಡಾಟಾ ಅನಾಲಿಸ್ಟ್, ಎಫ್‌ಎಲ್‌ಓ, ಎಫ್‌ಎಸ್‌ಓ ಹಾಗೂ ಎಫ್‌ಸಿಓ ಹುದ್ದೆಗಳಿಗೆ ಭರ್ತಿ ಮಾಡಿಕೊಳ್ಳಲಿದ್ದಾರೆ.

ಸಂದರ್ಶನದಲ್ಲಿ ಮಂಡ್ಯ, ಮದ್ದೂರು, ಕೆ.ಆರ್ ಪೇಟೆ ಹಾಗೂ ಶ್ರೀರಂಗಪಟ್ಟಣ ಸ್ಥಳಗಳಲ್ಲಿ ಕೆಲಸ ಮಾಡಲು ಎಸ್‌ಎಸ್‌ಎಲ್‌ಸಿ, ಪಿಯುಸಿ, ಡಿಪ್ಲೊಮಾ, ಐ.ಟಿ.ಐ ಹಾಗೂ ಯಾವುದೇ ಪದವಿ ಉತ್ತೀರ್ಣರಾಗಿರುವ 18 ರಿಂದ 35 ವರ್ಷ ವಯೋಮಿತಿಯುಳ್ಳ ಅಭ್ಯರ್ಥಿಗಳು ತಮ್ಮ ರೆಸ್ಯೂಮ್/ ಬಯೋಡೇಟಾಗಳೊಂದಿಗೆ ನೇರ ಸಂದರ್ಶನದಲ್ಲಿ ಭಾಗವಹಿಸಬಹುದಾಗಿದೆ ಎಂದು ಮಂಡ್ಯ ಜಿಲ್ಲಾ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ದೂ. ಸಂ 9164642684, 9113500761, 9113875775 ಮತ್ತು 9741939716 ಅನ್ನು ಸಂಪರ್ಕಿಸಬಹುದಾಗಿದೆ.

ಮೂರು ರಾಜ್ಯಗಳಲ್ಲಿ ಬಿಜೆಪಿ ಜಯಭೇರಿ

ಕಾರ್ಯಕರ್ತರ ಸಂಭ್ರಮಾಚರಣೆ



ಶ್ರೀರಂಗಪಟ್ಟಣದಲ್ಲಿ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು.

ಮಂಡ್ಯ, ಮೇ 4– ಪಂಚರಾಜ್ಯಗಳ ಚುನಾವಣೆ ಪೈಕಿ ಪಶ್ಚಿಮ ಬಂಗಾಳ, ಅಸ್ಸಾಂ ಹಾಗೂ ಪುದುಚೇರಿಯಲ್ಲಿ ಬಿಜೆಪಿ ಗೆಲುವು ಸಾಧಿಸಿರುವ ಹಿನ್ನೆಲೆಯಲ್ಲಿ ಜಿಲ್ಲೆಯ ವಿವಿಧೆಡೆ ಬಿಜೆಪಿ ಮುಖಂಡರು ಸಂಭ್ರಮಾಚರಣೆ ಮಾಡಿದರು.

ಶ್ರೀರಂಗಪಟ್ಟಣ, ಮಂಡ್ಯ ಸೇರಿದಂತೆ ಜಿಲ್ಲೆಯ ವಿವಿಧೆಡೆ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು. ಶ್ರೀರಂಗಪಟ್ಟಣ ಸಂಭ್ರಮಾಚರಣೆ ವೇಳೆ ಮಾತನಾಡಿದ ಬಿಜೆಪಿ ಮುಖಂಡ ಸಚ್ಚಿದಾನಂದ ಇಂಡುವಾಳು, ಅಸ್ಸಾಂ, ಪಶ್ಚಿಮ ಬಂಗಾಳ ಮತ್ತು ಪುದುಚೇರಿ ಚುನಾವಣೆಯಲ್ಲಿ ಬಿಜೆಪಿಗೆ ಜನರು ಅಭೂತಪೂರ್ವ ಬೆಂಬಲ ನೀಡಿದ್ದಾರೆ. ಈ ಫಲಿತಾಂಶ ಕರ್ನಾಟಕದಲ್ಲಿಯೂ ಮರುಕಳಿಸಲಿದ್ದು, ಕಾಂಗ್ರೆಸ್‌ನ ದುರಾಡಳಿತದಿಂದ ಬೇಸತ್ತಿರುವ ರಾಜ್ಯದ ಜನರು ಬದಲಾವಣೆಯತ್ತ ನೋಡುತ್ತಿದ್ದಾರೆ ಎಂದು ಹೇಳಿದರು.

ಮತ ಕೊಟ್ಟು ಗೆಲ್ಲಿಸಿದ ಮತದಾರರನ್ನು ಮರೆತರೆ ಸರಿಯಾದ ಪಾಠ ಕಲಿಸುತ್ತಾರೆ ಎನ್ನುವುದಕ್ಕೆ ಈ ಫಲಿತಾಂಶ ಸಾಕ್ಷಿಯಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಾಯಕತ್ವ ಹಾಗೂ ಉತ್ತಮ ಆಡಳಿತಕ್ಕೆ ಜನರ ಬೆಂಬಲ ಸಿಕ್ಕಿದೆ. ಈ ಮೂಲಕ ಬಿಜೆಪಿ ಮೇಲೆ ಜನರು ವಿಶ್ವಾಸ ಹೊಂದಿರುವುದನ್ನು ತೋರಿಸಿ ದಂತಾಗಿದೆ ಎಂದರು.

ಕಳೆದ ಮೂರು ವರ್ಷದಲ್ಲಿ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಉತ್ತಮ ಆಡಳಿತ ಕೊಡುವಲ್ಲಿ ಸಂಪೂರ್ಣ ವಿಫಲವಾಗಿದೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಜಾರಿಗೆ ತಂದಿದ್ದ ಜನಪರ ಯೋಜನೆ ನಿಲ್ಲಿಸುವ ಮೂಲಕ ಜನ ವಿರೋಧಿ ನೀತಿ ತೋರಿದೆ. ಆದರೂ ತಾವು ಉತ್ತಮ ಆಡಳಿತ ಕೊಡುತ್ತಿದ್ದೇವೆಂದು ತಮ್ಮ ಬೆನ್ನನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ. ಇದಕ್ಕೆ ಮುಂದಿನ ದಿನದಲ್ಲಿ ರಾಜ್ಯದ ಜನರು ಪಾಠ ಕಲಿಸಲಿದ್ದಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಂಡ್ಯ ನಗರದಲ್ಲಿರುವ ಮೈಸೂರು–ಬೆಂಗಳೂರು ಹೆದ್ದಾರಿಯ ಜೆ.ಸಿ.ವೃತ್ತದಲ್ಲಿ ಬಿಜೆಪಿ ಕಾರ್ಯಕರ್ತರು ಜಮಾವಣೆಗೊಂಡು ಪಂಚರಾಜ್ಯ ಚುನಾವಣೆಯಲ್ಲಿ ಮೂರು ರಾಜ್ಯ ಬಿಜೆಪಿ ಗೆಲುವು ಮತ್ತು ರಾಜ್ಯದ ಉಪಚುನಾವಣೆಯಲ್ಲಿ ಒಂದು ಸ್ಥಾನ ಬಿಜೆಪಿ ಗೆಲುವು ಸಾಧಿಸಿರುವುದಕ್ಕೆ ಬಿಜೆಪಿ ಮೋದಿ ಸಂಭ್ರಮೋತ್ಸವ ಆಚರಿಸಿ, ಘೋಷಣೆಗಳನ್ನು ಕೂಗಿದರು.

ಈ ಸಂದರ್ಭದಲ್ಲಿ ಮುಖಂಡ ಅರವಿಂದ್ ಮಾತನಾಡಿದರು.

ಮೂರನೇ ಪುಟದಿಂದ

ಬಾಗಲಕೋಟೆ ಮತ್ತೆ 'ಕೈ'ವಶ

ಸಂಘಟಿತ ಹೋರಾಟ: ಬಾಗಲಕೋಟೆಯಲ್ಲಿ 2023ರ ಚುನಾವಣೆಯಲ್ಲೂ ಹೆಚ್.ವೈ.ಮೇಟಿ ವಿರುದ್ಧ ಪರಾಜಿತರಾಗಿದ್ದ ವೀರಣ್ಣ ಚರಂತಿಮಠ ಅವರನ್ನು ಮತ್ತೆ ಸೋಲಿಸುವಲ್ಲಿ ಕಾಂಗ್ರೆಸ್ ಯಶಸ್ವಿ ಯಾಗಿದೆ. ಮತ ಎಣಿಕೆಯಲ್ಲಿ ಕೈ ಅಭ್ಯರ್ಥಿ ಉಮೇಶ್ ಮೇಟಿ ಆರಂಭದಿಂದಲೂ ಮುನ್ನಡೆ ಕಾಯ್ದುಕೊಂಡು ಗೆಲುವು ಸಾಧಿಸಿದ್ದಾರೆ.

ಚುನಾವಣೆಗೆ ಮುನ್ನ ಮೇಟಿ ಕುಟುಂಬದಲ್ಲಿ ಟಿಕೆಟ್ ಹಂಚಿಕೆ ವಿಚಾರವಾಗಿ ಉಂಟಾಗಿದ್ದ ಭಿನ್ನಮತವನ್ನು ತಕ್ಷಣ ಪರಿಹರಿಸಿದ್ದು, ಮುಸ್ಲಿಂ ಮತಗಳು ಬೇಡ ಎಂಬ ವೀರಣ್ಣ ಅವರ ಹೇಳಿಕೆಯನ್ನು ಅಸ್ತ್ರವಾಗಿ ಬಳಸಿಕೊಂಡಿದ್ದು, ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳ ಪ್ರಚಾರದೊಂದಿಗೆ ಮಹಿಳಾ ಮತಗಳನ್ನು ಕ್ರೋಢೀಕರಿಸಿದ್ದು, ದಿವಂಗತ ಹೆಚ್.ವೈ.ಮೇಟಿ ಅವರ ಪುತ್ರನೆಂಬ ಅನುಕಂಪ ಗಿಟ್ಟಿಸಿದ್ದರ ಜೊತೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅವಿರತ ಪ್ರಚಾರ ಹಾಗೂ ಸಚಿವ ಸತೀಶ್ ಜಾರಕಿಹೊಳಿ ಅವರ ರಾಜಕೀಯ ತಂತ್ರಗಾರಿಕೆ ಸೇರಿದಂತೆ ಹಲವು ಅಂಶಗಳು ಕಾಂಗ್ರೆಸ್ ಗೆಲುವಿಗೆ ಕಾರಣವಾಗಿವೆ.

ಭಾರೀ ಪೈಪೋಟಿ: ಅನೇಕ ಕಾರಣಗಳಿಂದ ದಾವಣಗೆರೆ ದಕ್ಷಿಣ ಕ್ಷೇತ್ರದಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿ ನಡುವೆ ಭಾರೀ ಪೈಪೋಟಿಯೇ ಸೃಷ್ಟಿಯಾಗಿತ್ತು. ಅಂತಿಮವಾಗಿ ಕಡಿಮೆ ಅಂತರದಲ್ಲಿ ಶಾಮನೂರು ಕುಟುಂಬದ ಸಮರ್ಥ್ ಗೆಲುವು ಪಡೆದರು. ತಾತ ಶಾಮನೂರು ಶಿವಶಂಕರಪ್ಪನವರ ನಾಮಬಲ, ತಂದೆ ಸಚಿವ, ತಾಯಿ ಸಂಸದರಾಗಿದ್ದರೂ ಸಮರ್ಥ್‌ಗೆ ಕಠಿಣ ಸವಾಲು ಎದುರಾಗಿತ್ತು. ಶಾಮನೂರು ಶಿವಶಂಕರಪ್ಪನವರ ನಿಧನದಿಂದ ತೆರವಾಗಿದ್ದ ಸ್ಥಾನಕ್ಕೆ ಅವರ ಮೊಮ್ಮಗ ಸಮರ್ಥ್ ಶಾಮನೂರು ಅವರಿಗೆ ಟಿಕೆಟ್ ನೀಡಿದ್ದಕ್ಕೆ ಪಕ್ಷದೊಳಗೆ ಅಸಮಾಧಾನ ವ್ಯಕ್ತವಾಗಿ, ಸಾದಿಕ್ ಪೈಲ್ವಾನ್ ಬಂಡಾಯ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ನಾಯಕರ ಮನವೊಲಿಕೆ ಪರಿಣಾಮ ಅವರು ಕಣದಿಂದ ಹಿಂದೆ ಸರಿದರಾದರೂ ಅಲ್ಪಸಂಖ್ಯಾತರಿಗೆ ಟಿಕೆಟ್ ನೀಡಲಿಲ್ಲ ಎಂಬ ಅಸಮಾಧಾನ ತಣ್ಣಗಾಗಲಿಲ್ಲ. ಇದೇ ವಿಚಾರಕ್ಕೆ ಸಚಿವ ಜಮೀರ್ ಅಹಮದ್ ಅಹ್ಮದ್ ಆರಂಭದಲ್ಲಿ ಪ್ರಚಾರದಿಂದ ಅಂತರ ಕಾಯ್ದುಕೊಂಡಿದ್ದರು. ಕೆಲ ಅಲ್ಪಸಂಖ್ಯಾತ ನಾಯಕರು ಎಸ್‌ಡಿಪಿಐ ಅಭ್ಯರ್ಥಿಗೆ ಬೆಂಬಲ ನೀಡುತ್ತಿದ್ದಾರೆ ಎಂಬ ಆರೋಪಗಳೂ ಕೇಳಿಬಂದಿದ್ದವು. ಕ್ಷೇತ್ರ ಕೈತಪ್ಪುವ ವಾತಾವರಣ ನಿರ್ಮಾಣವಾದ ಹಿನ್ನೆಲೆಯಲ್ಲಿ ಸಿಎಂ, ಡಿಸಿಎಂ, ಸಚಿವರು, ಶಾಸಕರು ಸೇರಿದಂತೆ ಇಡೀ ಸರ್ಕಾರವೇ ಠಿಕಾಣಿ ಹೂಡಿ, ವ್ಯಾಪಕ ಪ್ರಚಾರ ನಡೆಸಿತ್ತು.

ಜನರ ನಂಬಿಕೆಯ ಫಲವಿದು

ಆಳವಾದ ಹೊಂದಾಣಿಕೆಯನ್ನು ಪ್ರತಿಬಿಂಬಿಸುತ್ತದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಪ್ರತಿಕ್ರಿಯಿಸಿದ್ದಾರೆ. ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಎನ್‌ಡಿಎ ಮೈತ್ರಿಕೂಟದ ಅಭೂತಪೂರ್ವ ಗೆಲುವು ಪ್ರಧಾನಿ ಮೋದಿ ಅವರ ನಾಯಕತ್ವ, ದೂರದೃಷ್ಟಿ ಮತ್ತು ವಿಕಸಿತ ಭಾರತ ಕಾರ್ಯ ಸೂಚಿಯಲ್ಲಿ ಜನರ ನಂಬಿಕೆಯ ಫಲವಾಗಿದೆ. ಎನ್‌ಡಿಎ ಮೈತ್ರಿಕೂಟದ ವಿಶ್ವಾಸಾರ್ಹತೆ, ಕಾರ್ಯಕ್ಷಮತೆ ಹಾಗೂ ಅಂತರ್ಗತ ಆಡಳಿತದ ವೇದಿಕೆಯನ್ನು ಬಲಪಡಿಸುತ್ತದೆ. ದೇಶಾದ್ಯಂತ ಮೈತ್ರಿಕೂಟದ ವ್ಯಾಪ್ತಿ ಮತ್ತು ಸಾಂಸ್ಥಿಕ ಆಳವನ್ನು ಮತ್ತಷ್ಟು ವಿಸ್ತಾರಗೊಳಿಸಲಿದೆ. ಕೇಂದ್ರ ಗೃಹ ಸಚಿವ ಅಮಿತ್ ಷಾ ಕಾರ್ಯತಂತ್ರದ ನಾಯಕತ್ವ ಮತ್ತು ರಾಷ್ಟ್ರೀಯ ಏಕತೆಗೆ ಅವರ ಅಚಲ ಬದ್ಧತೆ ಈ ಫಲಿತಾಂಶ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದೆ. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬೀನ್ ಸಂಘಟನೆಯನ್ನು ಚೈತನ್ಯಗೊಳಿಸುವ ಮತ್ತು ಕಾರ್ಯಕರ್ತರೊಂದಿಗೆ ಸಂಪರ್ಕ ಸಾಧಿಸುವ ಪರಿಣಾಮಕಾರಿ ಪ್ರಯತ್ನಗಳು ಮಹತ್ವದ ಜನಾದೇಶಕ್ಕೆ ಕಾರಣವಾಗಿವೆ. ಈ ಐತಿಹಾಸಿಕ ಜನಾದೇಶಕ್ಕಾಗಿ ಎನ್‌ಡಿಎ ವಿಜೇತರು, ಕಾರ್ಯಕರ್ತರು ಮತ್ತು ಜನತೆಗೆ ನನ್ನ ಹೃದಯಪೂರ್ವಕ ಅಭಿನಂದನೆ ಸಲ್ಲಿಸುತ್ತೇನೆ ಎಂದಿದ್ದಾರೆ.

ಉಪಚುನಾವಣೆಯಲ್ಲಿ ಬಿಜೆಪಿ ಮೇಲುಗೈ

ಉಮ್ರೆತ್ ಕ್ಷೇತ್ರದಲ್ಲಿ ಬಿಜೆಪಿಯ ಹರ್ಷಭಾಯಿ ಗೋವಿಂದಭಾಯಿ ಪರ್ಮಾರ್ 30,743 ಮತಗಳ ಅಂತರದಲ್ಲಿ, ಮಹಾರಾಷ್ಟ್ರದ ರಾಹುರಿ ಕ್ಷೇತ್ರದಲ್ಲಿ ಬಿಜೆಪಿಯ ಅಕ್ಷಯ್ ಶಿವಾಜಿರಾವ್ ಕಾರ್ಡಿಲೆ 1,12,587 ಮತಗಳ ಭಾರೀ ಅಂತರದಲ್ಲಿ, ತ್ರಿಪುರದ ಧರ್ಮ ನಗರ್‌ನಲ್ಲಿ ಬಿಜೆಪಿಯ ಜಹಾರ್ ಚಕ್ರವರ್ತಿ 18,290 ಮತ ಹಾಗೂ ನಾಗಾಲ್ಯಾಂಡ್‌ನ ಕೊರಿದಂಗ್ ಕ್ಷೇತ್ರದಲ್ಲಿ ಡಾಬಿಯರ್ ಐ ಇಮ್ಚೆನ್ 3123 ಮತಗಳ ಅಂತರದಲ್ಲಿ ಪ್ರತಿಸ್ಪರ್ಧಿಗಳ ವಿರುದ್ಧ ಗೆಲುವು ದಾಖಲಿಸಿದ್ದಾರೆ. ಮಹಾರಾಷ್ಟ್ರದ ಬಾರಾಮತಿ ವಿಧಾನ ಸಭಾ ಕ್ಷೇತ್ರದ ಉಪಚುನಾವಣೆಯಲ್ಲಿ ಸ್ಪರ್ಧಿಸಿದ್ದ ದಿವಂಗತ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಅಜಿತ್ ಪವಾರ್ ಶೇ.97.81ರಷ್ಟು ಮತ(2,18,969) ಮತಗಳೊಂದಿಗೆ ಅಭೂತಪೂರ್ವ ಗೆಲುವು ದಾಖಲಿಸಿದ್ದಾರೆ. ಇವರನ್ನು ಮಹಾರಾಷ್ಟ್ರದ ರಾಜಕೀಯ ಸಂಪ್ರದಾಯದಂತೆ ಸದಸ್ಯರ ನಿಧನದ ನಂತರ ನಡೆಯುವ ಉಪಚುನಾವಣೆಯನ್ನು ಅವಿರೋಧವಾಗಿ ನಡೆಸಲು ಸಹಕರಿಸಬೇಕೆಂಬ ಹಲವು ನಾಯಕರ ಮನವಿ ಹಿನ್ನೆಲೆಯಲ್ಲಿ ಕಾಂಗ್ರೆಸ್ ಸ್ಪರ್ಧೆಯಿಂದ ಹಿಂದೆ ಸರಿದಿತ್ತು.

ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಜಯಭೇರಿ

ಪ.ಬಂಗಾಳ	
ಬಿಜೆಪಿ	206
ಟಿಎಂಸಿ	79
ಕಾಂಗ್ರೆಸ್	2

ಹಿಂದಿ ಭಾಷಿಕ ರಾಜ್ಯಗಳು ಸೇರಿ ಪಶ್ಚಿಮ ಮತ್ತು ಈಶಾನ್ಯ ಭಾಗದ ರಾಜ್ಯಗಳಲ್ಲಿ ಈಗಾಗಲೇ ತನ್ನ ಬಾಹು ವಿಸ್ತರಿಸಿರುವ ಬಿಜೆಪಿ, ಕಷ್ಟಸಾಧ್ಯವಾಗಿದ್ದ ಪಶ್ಚಿಮ ಬಂಗಾಳವನ್ನೂ ಗೆದ್ದು ಬೀಗಿದೆ. ಕಮ್ಯುನಿಸ್ಟ್ ನೇತೃತ್ವದ ಎಡರಂಗವು 34 ವರ್ಷಗಳ ಕಾಲ ಆಳ್ವಿಕೆ ನಡೆಸಿದ್ದು, ನಂತರದ 15 ವರ್ಷಗಳ ಕಾಲ ಮಮತಾ ಬ್ಯಾನರ್ಜಿ ನೇತೃತ್ವದ ತೃಣಮೂಲ ಕಾಂಗ್ರೆಸ್(ಟಿಎಂಸಿ) ಇಲ್ಲಿ ಪ್ರಾಬಲ್ಯ ಸಾಧಿಸಿತ್ತು ಆದರೆ ಈ ಚುನಾವಣೆಯಲ್ಲಿ ಮಹತ್ವದ ಫಲಿತಾಂಶ ಹೊರಬಿದ್ದಿದ್ದು, 10 ಕೋಟಿಗೂ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ರಾಜ್ಯ ಗೆಲ್ಲುವ ಮೂಲಕ ಬಿಜೆಪಿ ತನ್ನ ಸಾಮರ್ಥ್ಯ ಮೆರೆದಿದೆ. ಸಾರ್ವಜನಿಕ ಕಲ್ಯಾಣ ಯೋಜನೆಗಳು, ಬಾಂಗ್ಲಾ ದೇಶಿಗರ ಒಳನುಸುಳುವಿಕೆ ವಿರೋಧಿ ನಿಲುವು ಮತ್ತು ಬಲವಾದ ಬೂತ್ ನಿರ್ವಹಣೆ ಮೂಲಕ ಬಿಜೆಪಿ ನಿರ್ಣಾಯಕ ಗೆಲುವು ಸಾಧಿಸಿದೆ.

ಈ ಬಾರಿ ಪಶ್ಚಿಮ ಬಂಗಾಳದ ಚುನಾವಣೆಯಲ್ಲಿ ಬಿಜೆಪಿ ಕಮಲ ಅರಳಿಸಲೇಬೇಕೆಂಬ ಪ್ರತಿಜ್ಞೆಯೊಂದಿಗೆ ಪ್ರಧಾನಿ ಮೋದಿ ಮತ್ತು ಅಮಿತ್ ಶಾ ಖುದ್ದು ಅಖಾಡಕ್ಕೆ ಇಳಿದಿದ್ದರು. ಪ್ರಧಾನಿ ಮೋದಿ ಕಳೆದ 2 ತಿಂಗಳಲ್ಲಿ ಅನೇಕ ಬಾರಿ ಬಂಗಾಳಕ್ಕೆ ಆಗಮಿಸಿ ಚುನಾವಣಾ ಪ್ರಚಾರ ನಡೆಸಿದ್ದರು. ಅಮಿತ್ ಶಾ ಬಂಗಾಳದಲ್ಲೇ ಬೀಡುಬಿಟ್ಟು ರಾಜ್ಯದ ಬಿಜೆಪಿ ನಾಯಕರಿಗೆ ನಿರಂತರವಾಗಿ ಸಲಹೆ–ಸೂಚನೆಗಳನ್ನು ನೀಡುತ್ತಾ ಬಂಗಾಳದಲ್ಲಿ ಬಿಜೆಪಿ ಪರ ಅಲೆ ಮೂಡಲು ಸಾಕಷ್ಟು ಶ್ರಮಿಸಿದ್ದಾರೆ.

ಸೇರಿಗೆ ಸವಾಸೇರು: ಚುನಾವಣೆ ವೇಳೆ ಟಿಎಂಸಿ ಘೋಷಣೆಗಳಿಗೆ ಪ್ರತಿಯಾಗಿ ಬಿಜೆಪಿಯೂ ಸಾಕಷ್ಟು ಕಾರ್ಯಕ್ರಮಗಳನ್ನು ಘೋಷಿಸಿತ್ತು. ಟಿಎಂಸಿ 1,500 ರೂ. ನಿರುದ್ಯೋಗ ಭತ್ಯೆ ನೀಡಿದರೆ, ಬಿಜೆಪಿ ಅದನ್ನು ದ್ವಿಗುಣಗೊಳಿಸುವುದಾಗಿ ಭರವಸೆ ನೀಡಿತು. ಮಮತಾ ಬ್ಯಾನರ್ಜಿಯವರ ಲಕ್ಷ್ಮಿ ಭಂಡಾರ್ 1,500 ರೂ.ಗೆ ಪ್ರತಿಯಾಗಿ ಬಿಜೆಪಿ ಪ್ರತಿ ಮಹಿಳೆಗೆ ತಿಂಗಳಿಗೆ 3,000 ರೂ. ನೀಡುವುದಾಗಿ ಭರವಸೆ ನೀಡಿತು. ಅಧಿಕಾರಕ್ಕೆ ಬಂದ 45 ದಿನಗಳಲ್ಲಿ 7ನೇ ವೇತನ ಆಯೋಗವನ್ನು ಜಾರಿಗೆ ತರುವುದಾಗಿ ಭರವಸೆ ನೀಡಿತು. ಉದ್ಯೋಗದಲ್ಲಿ ಮಹಿಳೆಯರಿಗೆ ಹೆಚ್ಚಿನ ಆದ್ಯತೆ ಭರವಸೆ ನೀಡಿತು. ಏಕರೂಪ ನಾಗರಿಕ ಸಂಹಿತೆ(ಯುಸಿಸಿ), ನುಸುಳುವವರನ್ನು ಹೊರಹಾಕಲಾಗುವುದಾಗಿ ಘೋಷಿಸಿತು. ಪರಿಣಾಮ ಈ ಬಾರಿ ಚುನಾವಣೆಯಲ್ಲಿ ಅತೀ ಹೆಚ್ಚು ಮತದಾನ ನಡೆದಿತ್ತು. ಅಂತಿಮವಾಗಿ ಚುನಾವಣೆಯಲ್ಲಿ ಬಿಜೆಪಿ ಪಾರುಪತ್ಯ ಮೆರೆದಿದೆ.

ಕೇರಳದಲ್ಲಿ ಯುಡಿಎಫ್ 10 ವರ್ಷಗಳ ಬಳಿಕ ಅಧಿಕಾರಕ್ಕೆ

ಕೇರಳ	
ಕಾಂಗ್ರೆಸ್	63
ಸಿಪಿಐ(ಎಂ)	26
ಐಯುಎಂಎಲ್	22

ಇದೀಗ ವಿರೋಧ ಪಕ್ಷದ ನಾಯಕರಾಗಿದ್ದ ವಿ.ಡಿ.ಸತೀಶನ್ ನೇತೃತ್ವದಲ್ಲಿ ಕಾಂಗ್ರೆಸ್ 100 ಸ್ಥಾನಗಳ ಗುರಿಯೊಂದಿಗೆ ಹೋರಾಟ ನಡೆಸಿತ್ತು. ಪರಿಣಾಮ ಎಲ್‌ಡಿಎಫ್‌ನ ಪರಂಪರೆಯ ಬಲಿಷ್ಠ ಕ್ಷೇತ್ರಗಳಲ್ಲೂ ಗೆದ್ದು ಬೀಗಿದೆ. ಪಶ್ಚಿಮ ಬಂಗಾಳ, ಕೇರಳ ಮತ್ತು ತ್ರಿಪುರಾ ರಾಜ್ಯಗಳಲ್ಲಿ ಆಡಳಿತ ನಡೆಸಿದ್ದ ಕಮ್ಯುನಿಷ್ಟ್ ಪಕ್ಷಗಳು ಭಾರತದಲ್ಲಿ ನಾಮಾವಶೇಷದ ಅಂಚಿಗೆ ಬಂದಿವೆ. ಪಿಣರಾಯಿ ವಿಜಯನ್ ನೇತೃತ್ವದ ಎಲ್‌ಡಿಎಫ್ ಕೇರಳದಲ್ಲಿ ಅಧಿಕಾರ ಕಳೆದುಕೊಳ್ಳುತ್ತಿರುವುದರಿಂದ, 1970ರ ನಂತರ ಮೊದಲ ಬಾರಿಗೆ ದೇಶದ ಯಾವುದೇ ರಾಜ್ಯದಲ್ಲೂ ಕಮ್ಯುನಿಸ್ಟ್ ಸರ್ಕಾರ ಇಲ್ಲ ಎಂಬ ಇತಿಹಾಸ ನಿರ್ಮಾಣವಾಗಲಿದೆ.

ಉತ್ತರ ಭಾರತದ ಚುನಾವಣೆಗಳಲ್ಲಿ ವೈಫಲ್ಯ ಕಾಣುತ್ತಿರುವ ಕಾಂಗ್ರೆಸ್‌ಗೆ ದಕ್ಷಿಣದ ಕೇರಳದ ಗೆಲುವು ಕೊಂಚ ಸಮಾಧಾನ ತಂದಿದೆ. ಹತ್ತು ವರ್ಷಗಳ ಬಳಿಕ ಮತ್ತೆ ಕೇರಳದ ಅಧಿಕಾರ ಧಕ್ಕಿರುವುದು ಸಹಜವಾಗಿ ಕಾಂಗ್ರೆಸ್ ಪಾಳಯದಲ್ಲಿ ಉತ್ಸಾಹ ಹೆಚ್ಚಿಸಿದೆ. ಎಲ್ಲೆಡೆ ಕಾರ್ಯಕರ್ತರು ಸಂಭ್ರಮಾಚರಿಸುತ್ತಿದ್ದಾರೆ.

ಸಿಎಂ ಆಯ್ಕೆ ಕಗ್ಗಂಟು: ಕೇರಳ ಗೆದ್ದಿರುವ ಕಾಂಗ್ರೆಸ್‌ಗೆ ಮುಂದಿನ ಮುಖ್ಯಮಂತ್ರಿ ಆಯ್ಕೆ ಕಗ್ಗಂಟಾಗಿ ಪರಿಣಮಿಸುವ ಸಾಧ್ಯತೆ ಇದೆ. ಸಿಎಂ ರೇಸ್‌ನಲ್ಲಿ ಹಲವು ನಾಯಕರಿದ್ದು, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಹೆಸರು ಮುಂಚೂಣಿಯಲ್ಲಿದೆ. ಗೆಲುವಲ್ಲಿ ಮಹತ್ವದ ಪಾತ್ರ ವಹಿಸಿರುವ ವಿಪಕ್ಷ ನಾಯಕರಾಗಿದ್ದ ವಿ.ಡಿ.ಸತೀಶನ್, ಹಿರಿಯ ನಾಯಕರಾದ ರಮೇಶ್ ಚೆನ್ನಿತ್ತಲ, ಶಶಿ ತರೂರ್, ಸನ್ನಿ ಜೋಸೆಫ್ ಹಾಗೂ ಕೇರಳ ಕೆಪಿಸಿಸಿ ಅಧ್ಯಕ್ಷ ಕೆ.ಸುಧಾಕರನ್ ಹೆಸರುಗಳು ಚಾಲ್ತಿಯ ಲ್ಲಿವೆ. ಮತ ಎಣಿಕೆಗೂ ಮುನ್ನವೇ ಯುಡಿಎಫ್ ಮಿತ್ರಪಕ್ಷಗಳು ಮುಖ್ಯಮಂತ್ರಿ ಅಭ್ಯರ್ಥಿ ಆಯ್ಕೆಯನ್ನು ಸಂಪೂರ್ಣವಾಗಿ ಕಾಂಗ್ರೆಸ್‌ಗೆ ವಹಿಸಿರುವ ಹಿನ್ನೆಲೆಯಲ್ಲಿ ಈ ಸಂಬಂಧ ಕೈ ಹೈಕಮಾಂಡ್ ತೀರ್ಮಾನಿಸಲಿದೆ.

ಕೇರಳ ಸಿಎಂ ಪಿಣರಾಯ್ ವಿಜಯನ್ ರಾಜೀನಾಮೆ



ತಿರುವನಂತಪುರಂ: ಕೇರಳ ವಿಧಾನಸಭಾ ಚುನಾವಣೆಯಲ್ಲಿ ಎಲ್‌ಡಿಎಫ್ ಸರ್ಕಾರ ಸೋಲುಂಡ ಬೆನ್ನಲ್ಲೇ ಕೇರಳ ಸಿಎಂ ಪಿಣರಾಯ್ ವಿಜಯನ್ ರಾಜೀನಾಮೆ ಸಲ್ಲಿಸಿದ್ದಾರೆ. ಕೇರಳ ವಿಧಾನಸಭಾ ಚುನಾವಣೆ ಫಲಿತಾಂಶ ಹೊರಬಿದ್ದಿದ್ದು, ಕಾಂಗ್ರೆಸ್ ನೇತೃತ್ವದ ಯುನೈಟೆಡ್ ಡೆಮಾಕ್ರಟಿಕ್ ಫ್ರಂಟ್ (ಯುಡಿಎಫ್) ಭರ್ಜರಿ ಜಯ ದಾಖಲಿಸಿದೆ. ಪಿಣರಾಯ್ ವಿಜಯನ್ ನೇತೃತ್ವದ ಎಲ್‌ಡಿಎಫ್ ಆಡಳಿತಕ್ಕೆ ಅಂತ್ಯ ಹಾಡಿರುವ ಯುಡಿಎಫ್ 10 ವರ್ಷದ ಬಳಿಕ ಮತ್ತೆ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿದೆ. ಈ ಹಿನ್ನೆಲೆ ಸಿಎಂ ಪಿಣರಾಯ್ ವಿಜಯನ್ ತಮ್ಮ ರಾಜೀನಾಮೆ ಪತ್ರವನ್ನು ಲೋಕಭವನಕ್ಕೆ ರವಾನಿಸಿದ್ದರು.

ಪಿಣರಾಯಿ ವಿಜಯನ್ ಅವರ ರಾಜೀನಾಮೆಯನ್ನು ರಾಜ್ಯಪಾಲ ರಾಜೇಂದ್ರ ಆರ್ಲೇಕರ್ ಅಂಗೀಕರಿಸಿದ್ದಾರೆ. ಸಿಎಂ ಜೊತೆ ದೂರವಾಣಿ ಮಾತುಕತೆ ನಡೆಸಿದ ರಾಜ್ಯಪಾಲರು, ಮುಂದಿನ ಸರ್ಕಾರ ಪ್ರಮಾಣವಚನ ಸ್ವೀಕರಿಸಿ ಅಧಿಕಾರ ಸ್ವೀಕರಿಸುವವರೆಗೆ ಸಿಎಂ ಆಗಿ ಮುಂದುವರಿಯಲು ಪಿಣರಾಯ್ ವಿಜಯನ್‌ಗೆ ಸೂಚನೆ ನೀಡಿದೆ. ಒಟ್ಟು 140 ವಿಧಾನಸಭಾ ಕ್ಷೇತ್ರಗಳ ಪೈಕಿ ಯುಡಿಎಫ್ ಸುಮಾರು 104 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿ, ಸ್ಪಷ್ಟ ಬಹುಮತ ಪಡೆದಿದೆ. 10 ವರ್ಷಗಳ ಎಲ್‌ಡಿಎಫ್ ಆಡಳಿತದ ನಂತರ ಕೇರಳದ ಜನರು ಈ ಬಾರಿ ಬದಲಾವಣೆಗೆ ಮತ ನೀಡಿದ್ದಾರೆ.

ಮಾಜಿ ಮುಖ್ಯಮಂತ್ರಿ ದಿವಂಗತ ಉಮ್ಮನ್ ಚಾಂಡಿ ಅವರ ಪುತ್ರ ಚಾಂಡಿ ಉಮ್ಮನ್ ಅವರು ಪುತುಪಳ್ಳಿಯಲ್ಲಿ ಸುಮಾರು 52,907 ಮತಗಳ ಬೃಹತ್ ಅಂತರದಿಂದ ಜಯಗಳಿಸಿದ್ದಾರೆ. ಹರಿಪಾಡ್ ಕ್ಷೇತ್ರದಲ್ಲಿ ರಮೇಶ್ ಚೆನ್ನಿತ್ತಲ 23,000ಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ. ಮುಸ್ಲಿಂ ಲೀಗ್ ತಾನು ಸ್ಪರ್ಧಿಸಿದ್ದ 27 ಸ್ಥಾನಗಳಲ್ಲಿ 23ರಲ್ಲಿ ಮುನ್ನಡೆ ಸಾಧಿಸಿ ಯುಡಿಫ್ ಗೆಲುವಿಗೆ ಬಲ ತುಂಬಿದೆ. ಮುಖ್ಯಮಂತ್ರಿ ಪಿಣರಾಯ್ ವಿಜಯನ್ ಅವರ ನೇತೃತ್ವದ ಎಡರಂಗ ಮೈತ್ರಿಕೂಟಕ್ಕೆ ಆಡಳಿತ ವಿರೋಧಿ ಅಲೆ ತೀವ್ರವಾಗಿ ತಟ್ಟಿದೆ. ಪ್ರಮುಖವಾಗಿ ಯುವಜನರಿಗೆ ಉದ್ಯೋಗಾವಕಾಶಗಳ ಕೊರತೆ ಮತ್ತು ಕೇರಳ ಕಾಂಗ್ರೆಸ್ ನಾಯಕ ಜೋಸ್ ಕೆ. ಮಾಣಿ ಅವರಂತಹ ಹಿರಿಯ ನಾಯಕರ ಸೋಲು ಎಲ್‌ಡಿಎಫ್‌ಗೆ ಭಾರೀ ಆಘಾತ ನೀಡಿದೆ.

ತಮಿಳ್ನಾಡಲ್ಲಿ ವಿಜಯ್ ಜನ ನಾಯಗನ್

ತಮಿಳುನಾಡು	
ಟಿವಿಕೆ	108
ಡಿಎಂಕೆ	59
ಎಐಡಿಎಂಕೆ	47

ಪುದುಚೇರಿ	
ಎಐಎನ್‌ಆರ್‌ಸಿ	12
ಡಿಎಂಕೆ	5
ಬಿಜೆಪಿ	4

ಈ ನಡುವೆ ಡಿಎಂಕೆ ಜೊತೆ ಗಿದ್ದ ಕಾಂಗ್ರೆಸ್, ವಿಜಯ್ ಅವರ ಟಿವಿಕೆ ಜೊತೆ ಮೈತ್ರಿಗೆ ಮುಂದಾಗಿದೆ. ಈ ಸಂಬಂಧ ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ, ಟಿವಿಕೆ ನಾಯಕ ವಿಜಯ್ ಜೊತೆ ಹಲವು ಬಾರಿ ದೂರವಾಣಿಯಲ್ಲಿ ಮಾತುಕತೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ. ಆದರೆ, ಅಂತಿಮ ಹಂತದವರೆಗೂ ಏನು ಬೇಕಾದರೂ ರಾಜಕೀಯ ಬೆಳವಣಿಗೆ ಸಾಧ್ಯತೆ ಇರುವುದರಿಂದ ಕುತೂಹಲ ಕೆರಳಿಸಿದೆ.

ಕಾಂಗ್ರೆಸ್ ಬೆಂಬಲ ಕಾತುರ: ಈ ಬಗ್ಗೆ ಪ್ರತಿಕ್ರಿಯಿಸಿದ ಹಿರಿಯ ಕಾಂಗ್ರೆಸ್ ನಾಯಕ ಕೆ.ಸಿ.ವೇಣುಗೋಪಾಲ್, ತಮಿಳುನಾಡಿನ ಫಲಿತಾಂಶ ಆಶ್ಚರ್ಯಕರವಾಗಿದೆ. ನಾವು ತಡಮಾಡದೆ ತಮಿಳುನಾಡಿನ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ ಮತ್ತು ನಾವು ಅದನ್ನು ಮಾಡುತ್ತೇವೆ. ನಾವು ವಿಜಯ್ ಅವರನ್ನು ಪ್ರಶಂಸಿಸಬೇಕು ಎನ್ನುವ ಮೂಲಕ ಟಿವಿಕೆ ಬೆಂಬಲಿಸುವ ಸೂಚನೆ ನೀಡಿದ್ದಾರೆ.

ಮೊದಲ ಸಾರ್ವತ್ರಿಕ ಚುನಾವಣೆಯಲ್ಲೇ ವಿಜಯ್ ನೇತೃತ್ವದ ಟಿವಿಕೆ ಅಭೂತಪೂರ್ವ ಗೆಲುವು ದಾಖಲಿಸಿರುವುದು ತಮಿಳುನಾಡು ರಾಜಕೀಯದಲ್ಲಿ ಸಂಚಲನ ಸೃಷ್ಟಿಸಿದೆ. ರಾಜ್ಯದೆಲ್ಲೆಡೆ ಸಂಭ್ರಮ ಮುಗಿಲು ಮುಟ್ಟಿದೆ. ಪಕ್ಷದ ಕಾರ್ಯಕರ್ತರು, ಮುಖ್ಯವಾಗಿ ಅವರ ಅಭಿಮಾನಿಗಳಿಂದ ಪಕ್ಷದ ಚಿಹ್ನೆ ಸೀಟಿಯ ಸದ್ದು ಜೋರಾಗಿದೆ. ಅಚ್ಚರಿಯ ರೀತಿಯಲ್ಲಿ ದಳಪತಿ ವಿಜಯ್ ರಾಜಕೀಯ ರಂಗದಲ್ಲಿ ಹೊಸ ಅಲೆ ಸೃಷ್ಟಿಸಿರುವ ಹಿನ್ನೆಲೆಯಲ್ಲಿ ಖ್ಯಾತ ನಟ ವಿಜಯ್ ದೇವರಕೊಂಡ, ನಾನಿ, ರವಿತೇಜ, ಚಿಯಾನ್ ವಿಕ್ರಮ್, ಕಾಜಲ್ ಅಗರ್ವಾಲ್ ಸೇರಿದಂತೆ ಸಿನಿ ತಾರೆಯರು ಶುಭಾಶಯ ತಿಳಿಸಿದ್ದಾರೆ.

ತಮಿಳುನಾಡು ಚುನಾವಣೆ ಫಲಿತಾಂಶ ಕುರಿತ ಹೆಚ್ಚಿನ ಸಮೀಕ್ಷೆಗಳು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ನೇತೃತ್ವದ ಡಿಎಂಕೆ ಮೈತ್ರಿಕೂಟವು ಅಧಿಕಾರ ಉಳಿಸಿಕೊಳ್ಳಲಿದೆ ಎಂದು ಅಂದಾಜಿಸಿದ್ದವು. ಆದರೆ ನಟ ವಿಜಯ್ ಟಿವಿಕೆ ಸುನಾಮಿಗೆ ಎಲ್ಲವೂ ಬುಡಮೇಲಾಗಿದೆ. ದಶಕಗಳಿಂದ ರಾಜ್ಯವನ್ನು ಆಳುತ್ತಿದ್ದ ಡಿಎಂಕೆ ಮತ್ತು ಎಐಎಡಿಎಂಕೆ ಪಕ್ಷಗಳನ್ನು ಧೂಳೀಪಟ ಮಾಡಿ ಅತಿದೊಡ್ಡ ಶಕ್ತಿಯಾಗಿ ಹೊರಹೊಮ್ಮಿದೆ. ಒಟ್ಟಾರೆ ಅಸಮಾನ್ಯವಾದದ್ದನ್ನು ಸಾಧಿಸಿರುವ ವಿಜಯ್, ತಮಿಳುನಾಡಿನ ನೂತನ ದಳಪತಿಯಾಗಲಿದ್ದಾರೆ. ಇದಕ್ಕೆ ಯಾರ ಬೆಂಬಲದಿಂದ ಆಗಲಿದೆ ಎಂಬುದನ್ನು ಕಾದು ನೋಡಬೇಕಿದೆ.

ಅಸ್ಸಾಂನಲ್ಲಿ ಬಿಜೆಪಿ ಹ್ಯಾಟ್ರಿಕ್ ಗೆಲುವು

ಅಸ್ಸಾಂ	
ಬಿಜೆಪಿ	82
ಕಾಂಗ್ರೆಸ್	19
ಬಿಪಿಎಫ್	10

ಅಸ್ಸಾಂನಲ್ಲಿ ಈ ಬಾರಿ ಐತಿಹಾಸಿಕ ಶೇ.85.96ರಷ್ಟು ಮತದಾನ ನಡೆದಿತ್ತು. ಬಿಜೆಪಿ ನೇತೃತ್ವದ ಮೈತ್ರಿಕೂಟಕ್ಕೆ ಅನುಕೂಲಕರವಾದ ವಾತಾವರಣವಿದೆ ಎಂದು ಸಮೀಕ್ಷೆಗಳು ಹೇಳಿದ್ದವು. ಇಂಡಿಯಾ ಟುಡೇ–ಆಕ್ಸಿಸ್ ಮೈ ಇಂಡಿಯಾ ಸಮೀಕ್ಷೆಯು 88 ರಿಂದ 100 ಸ್ಥಾನಗಳನ್ನು ಗೆಲ್ಲುತ್ತದೆ, ಕಾಂಗ್ರೆಸ್ 24 ರಿಂದ 36 ಸ್ಥಾನಗಳನ್ನು ಗಳಿಸಲಿದೆ ಎಂದು ತಿಳಿಸಿತ್ತು. ಸಮೀಕ್ಷೆಗೆ ಹತ್ತಿರವೆಂಬಂತೆ ಬಿಜೆಪಿ ಅತೀ ಹೆಚ್ಚು ಸ್ಥಾನಗಳನ್ನು ಗೆದ್ದು ಅಧಿಕಾರ ಉಳಿಸಿಕೊಂಡಿದೆ. ಹಿಂದಿನ 2021ರ ವಿಧಾನಸಭಾ ಚುನಾವಣೆಯಲ್ಲಿ, ಬಿಜೆಪಿ 60 ಸೇರಿದಂತೆ ಎನ್‌ಡಿಎ ಮೈತ್ರಿಕೂಟ 75 ಸ್ಥಾನಗಳನ್ನು ಗೆದ್ದಿತ್ತು. ಅಸ್ಸಾಂ ರಾಜ್ಯದಲ್ಲಿ ಕಾಂಗ್ರೆಸ್ಸೇತರ ಮೈತ್ರಿಕೂಟವು ಸತತವಾಗಿ ಮೂರು ಬಾರಿ ಗೆಲುವು ದಾಖಲಿಸಿರುವುದು ಇದೇ ಮೊದಲು.

ಮಮತಾ ಆಡಳಿತಕ್ಕೆ ಅಂತ್ಯ ಹಾಡಲು ಆರ್‌ಎಸ್‌ಎಸ್ ಸೈಲೆಂಟ್ ಆಪರೇಷನ್ ಯಶಸ್ವಿ

ಕೋಲ್ಕತ್ತಾ: ಪಶ್ಚಿಮ ಬಂಗಾಳದ ರಾಜಕೀಯ ಇತಿಹಾಸದಲ್ಲಿ ಈ ಬಾರಿಯ ಬದಲಾವಣೆಯ ಹಿಂದೆ ಕೇವಲ ರಾಜಕೀಯ ರಣತಂತ್ರಗಳಷ್ಟೇ ಅಲ್ಲ, ರಾಷ್ಟ್ರೀಯ ಸ್ವಯಂಸೇವಕ ಸಂಘದ ವ್ಯವಸ್ಥಿತ 'ಗ್ರೌಂಡ್ ವರ್ಕ್' ಪ್ರಮುಖ ಪಾತ್ರ ವಹಿಸಿದೆ. ಕಳೆದ ಒಂದು ವರ್ಷದಿಂದ ಸಂಘವು ನಡೆಸಿದ 'ಮೈಕ್ರೋ ಲೆವೆಲ್' ಕಾರ್ಯಾಚರಣೆ ಈಗ ಬಿಜೆಪಿಯ ಅಭೂತಪೂರ್ವ ಗೆಲುವಿಗೆ ದಾರಿಯಾಗಿದೆ. ರಾಜ್ಯದ 294 ಕ್ಷೇತ್ರಗಳ ಪೈಕಿ 250 ಕ್ಷೇತ್ರ ಗಳಲ್ಲಿ ಆರ್‌ಎಸ್‌ಎಸ್ ಅಕ್ಷರಶಃ ಮತದಾರರ ಜಾಗೃತಿ ಅಭಿಯಾನದ ಸುನಾಮಿ ಯನ್ನೇ ಎಬ್ಬಿಸಿತ್ತು. ಕಳೆದ ಒಂದು ವರ್ಷದಿಂದ ಪ್ರತಿ ಕ್ಷೇತ್ರದಲ್ಲೂ ಸರಾಸರಿ 700ರಂತೆ, ಒಟ್ಟು 1.75 ಲಕ್ಷಕ್ಕೂ ಹೆಚ್ಚು ಲೋಕಮತ್ ಪರಿಷ್ಕಾರ ಸಭೆಯನ್ನು ಆಯೋಜಿಸಲಾಗಿತ್ತು. ಬಂಗ್ಲಾದೇಶಲ್ಲಿ ಹಿಂದೂಗಳ ಮೇಲೆ ನಡೆದ ಹಿಂಸಾಚಾರವನ್ನು ಮುಂದಿಟ್ಟುಕೊಂಡು ಈ ಚುನಾವಣೆಯನ್ನು ಬಂಗಾಳಿ ಹಿಂದೂಗಳ ಅಳಿವು–ಉಳಿವಿನ ಪ್ರಶ್ನೆ ಎಂದು ಬಿಂಬಿಸುವಲ್ಲಿ ಸಂಘ ಯಶಸ್ವಿಯಾಯಿತು. ಈ ಮೂಲಕ ಚದುರಿ ಹೋಗುತ್ತಿದ್ದ ಹಿಂದೂ ಮತಗಳನ್ನು ಒಂದೇ ಕಡೆ ತರುವಲ್ಲಿ ಈ ಸಭೆಗಳು ಯಶಸ್ವಿಯಾದವು.

ಎಸ್‌ಎಸ್‌ಎಲ್‌ಸಿ ಟಾಪರ್‌ಗೆ ಪ್ರತಿಭಾ ಪುರಸ್ಕಾರ


ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಮೈಸೂರು, ಮೇ 4(ಎಂಕೆ)- ಮೈಸೂರಿನ ರಾಮಾನುಜ ರಸ್ತೆಯಲ್ಲಿರುವ ಶ್ರೀ ಶಿರಡಿ ಸಾಯಿಬಾಬ ಮಂದಿರದಲ್ಲಿ ಹಿರಣ್ಮಯಿ ಪ್ರತಿಷ್ಠಾನ ಮತ್ತು ಕಾವೇರಿ ಬಳಗದ ವತಿಯಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ, ಅಭಿನಂದಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸಿದ ಮಂಡ್ಯ ಡಯಟ್ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಪುರುಷೋತ್ತಮ್ ಮಾತನಾಡಿ, ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುವ ಮೂಲಕ ದೇಶದ ಸರ್ವತೋಮುಖ ಅಭಿವೃದ್ಧಿಗೆ ಕೊಡುಗೆ ನೀಡಬೇಕು. ಎಸ್‌ಎಸ್‌ಎಲ್‌ಸಿ ನಂತರ ಕೌಶಲ್ಯಾಧಾರಿತ ಹಲವು ಕೋರ್ಸ್‌ಗಳಿದ್ದು, ಆಸಕ್ತಿಗೆ ಅನುಗುಣವಾಗಿ ಆಯ್ಕೆ ಮಾಡಿಕೊಳ್ಳುವಂತೆ ಸಲಹೆ ನೀಡಿದರು.

ವಿದ್ಯಾರ್ಥಿಗಳು ಶೈಕ್ಷಣಿಕ ಸಾಧನೆಗಷ್ಟೇ ಸೀಮಿತವಾಗದೆ ಕೌಶಲ್ಯತೆಗಳನ್ನು ಕಲಿಯಬೇಕು. ನಿಖರ ಗುರಿಯತ್ತ ಮನಸ್ಸನ್ನು ಕೇಂದ್ರೀಕರಿಸಿಕೊಂಡು ಪರಿಶ್ರಮ ಪಟ್ಟರೆ, ಫಲ ದೊರೆಯುತ್ತದೆ. ಪಾಠ ಕೇಳುವ ಶ್ರದ್ಧೆ ಬೆಳೆಸಿಕೊಳ್ಳಬೇಕು. ಅಂಕ ಎಷ್ಟೇ ಪಡೆದರೂ ಸಂಸ್ಕಾರ ಇಲ್ಲದಿದ್ದರೆ ಅಡ್ಡದಾರಿ ಹಿಡಿಯುವ ಸಾಧ್ಯತೆಯಿದೆ. ತಂದೆ-ತಾಯಿ, ಗುರು ಹಿರಿಯರನ್ನು ಗೌರವಿಸಬೇಕು. ರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಅಬ್ದುಲ್ ಕಲಾಂ ಅವರ ಕುರಿತಾದ ಪುಸ್ತಕಗಳನ್ನು ಓದಿ ಪ್ರೇರಿತರಾಗುವಂತೆ ಕಿವಿಮಾತು ಹೇಳಿದರು. ಪತ್ರಕರ್ತ ದೊಡ್ಡನಹುಂಡಿ ರಾಜಣ್ಣ, ಶಿರಡಿ ಸಾಯಿಬಾಬಾ ಉಪಾಸಕ ಗೋಪಾಲಸ್ವಾಮಿ, ಸಂಘಟಕರಾದ ಎ.ಸಂಗಪ್ಪ ಎನ್.ಕೆ.ಕಾವೇರಿಯಮ್ಮ, ಮನೋಹರ್, ವಿ.ನಾರಾಯಣರಾವ್, ಮುರುಳಿಧರ, ಶ್ರೀಕಂಠಮೂರ್ತಿ ಮತ್ತಿತರರಿದ್ದರು.

ನಿತ್ಯ ದೇವರೊಂದಿಗೆ ಡಾ.ಅಂಬೇಡ್ಕರ್‌ರನ್ನು ಸ್ಮರಿಸಬೇಕು

ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಅಭಿಮತ


ಮೈಸೂರಿನ ರಾಜರಾಜೇಶ್ವರಿ ನಗರದಲ್ಲಿರುವ ಡಾ.ಬಿ.ಆರ್. ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯದಲ್ಲಿ 'ಭೀಮ ನಮನ ಮತ್ತು ನಿಲಯದ ವಾರ್ಷಿಕೋತ್ಸವ' ಸಮಾರಂಭ ನಡೆಯಿತು.

ಮೈಸೂರು, ಮೇ 4(ಎಂಕೆ)- ದೇಶಕ್ಕೆ ಅತ್ಯುನ್ನತ ಸಂವಿಧಾನ ನೀಡಿದ ಡಾ.ಬಿ.ಆರ್.ಅಂಬೇಡ್ಕರ್ ಅವರು ವಿಶ್ವಜ್ಞಾನಿಯಾಗಿದ್ದು, ನಾವುಗಳು ಪ್ರತಿನಿತ್ಯ ದೇವರ ಜೊತೆಗೆ ಅಂಬೇಡ್ಕರ್ ಅವರನ್ನು ಸ್ಮರಿಸಬೇಕು ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕ ಬಿ.ರಂಗೇಗೌಡ ತಿಳಿಸಿದರು.

ಮೈಸೂರಿನ ರಾಜರಾಜೇಶ್ವರಿನಗರದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿ ನಿಲಯದಲ್ಲಿ ಆಯೋಜಿಸಿದ್ದ 'ಭೀಮ ನಮನ ಮತ್ತು ನಿಲಯದ ವಾರ್ಷಿಕೋತ್ಸವ' ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ರವರು ಅತ್ಯಂತ ಅಪರೂಪದ ವ್ಯಕ್ತಿತ್ವ ಅವರ ಜೀವನ ಪ್ರತಿನಿತ್ಯ ಹೋರಾಟದ ದಿನಗಳಾಗಿದ್ದವು. ಹೆಜ್ಜೆ-ಹೆಜ್ಜೆಗೂ ವಿರೋಧಿಗಳಿದ್ದರು ಎಂದು ತಿಳಿಸಿದರು.

ಅಂಬೇಡ್ಕರ್ ಅವರು ತಮ್ಮ ಇಡೀ ಜೀವನವನ್ನು ಭಾರತದ ಜನತೆಗಾಗಿ ಮುಡಿಪಾಗಿಟ್ಟಿದ್ದರು. ಸಮಾಜದಲ್ಲಿ ತುಳಿತಕ್ಕೆ ಒಳಗಾದವರಿಗೆ ನ್ಯಾಯ ಸಿಗಬೇಕೆಂದು ಹೋರಾಡಿದವರು. ಇಂತಹ ಮಹಾನ್ ನಾಯಕರನ್ನು ಒಂದು ಜಾತಿಗೆ ಸೀಮಿತ ಗೊಳಿಸುವ ಹುನ್ನಾರ ನಡೆಯುತ್ತಲೇ ಇದೆ. ಹಾಗೆಯೇ ವಿದ್ಯಾರ್ಥಿನಿಯರು ಮಹನೀಯರುಗಳ ಜೀವನಚರಿತ್ರೆ ಹಾಗೂ ಪತ್ರಿಕೆಗಳನ್ನು ಓದಬೇಕು. ಸಮಾಜದ ಬಗ್ಗೆ ತಿಳಿದುಕೊಳ್ಳಬೇಕು. ಆಳವಾಗಿ ಅಧ್ಯಯನ ಮಾಡಿ ಗುರಿ ಸಾಧಿಸಬೇಕು ಎಂದು ಕಿವಿಮಾತು ಹೇಳಿದರು.

ಅಂಬೇಡ್ಕರ್ ಸಂಶೋಧನಾ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕ ಚಂದ್ರಗುಪ್ತ ಮಾತನಾಡಿ, ಜ್ಯೋತಿ ಬಾಪುಲೆ ಭಾರತದಲ್ಲಿಯೇ ಪ್ರಥಮವಾಗಿ ಮಹಿಳೆಯರಿಗೆ ಶಿಕ್ಷಣ ನೀಡಲು ಶ್ರಮಿಸಿದರು. ಅಂಬೇಡ್ಕರ್ ಮಹಿಳೆಯರಿಗೆ ಸಮಾನ ಅವಕಾಶ ಕೊಡಬೇಕೆಂದು ಹೋರಾಡಿದರು. ಅಂಬೇಡ್ಕರ್‌ರವರು ಈ ದೇಶಕ್ಕೆ ಕೊಟ್ಟ ಸಂವಿಧಾನದಿಂದಾಗಿ ಪ್ರತಿಯೊಬ್ಬರು ನೆಮ್ಮದಿಯಿಂದ ಇದ್ದೇವೆ ಎಂದರು.

ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಾದ ಎಂ.ಎನ್.ಜನಾರ್ಧನ್, ಶಿವಶಂಕರ್, ನಿಲಯ ಪಾಲಕಿಯರಾದ ಕಮಲಾಕ್ಷಿ, ಗಾಯಿತ್ರಿ, ವಿದ್ಯಾರ್ಥಿನಿಯರಾದ ಜ್ಞಾನವಿ, ಜಯಲಕ್ಷ್ಮಿ, ಉಷಾ, ತೇಜಸ್ವಿನಿ, ವಿನುತ ಮತ್ತಿತರರಿದ್ದರು.

ದಾವಣಗೆರೆ, ಬಾಗಲಕೋಟೆ ಗೆಲುವು ಕಾಂಗ್ರೆಸ್ ಒಗ್ಗಟ್ಟಿನ ಮಂತ್ರದ ಫಲ


ಸೋಮಶೇಖರ್

ಮೈಸೂರು,ಮೇ4(ಎಂಕೆ)- ದಾವಣಗೆರೆ ಮತ್ತು ಬಾಗಲಕೋಟೆ ವಿಧಾನ ಸಭಾ ಕ್ಷೇತ್ರಕ್ಕೆ ನಡೆದ ಉಪಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಜಯಭೇರಿ ಬಾರಿಸಿರುವುದು ಸಿಎಂ ಸಿದ್ದ ರಾಮಯ್ಯ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರದ ಯಶಸ್ವಿ ಆಡಳಿತಕ್ಕೆ ಹಿಡಿದ ಕೈಗನ್ನಡಿಯಾಗಿದೆ ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಪಕ್ಷ ಚುನಾವಣಾ ಪೂರ್ವದಲ್ಲಿ ನೀಡಿದ ಭರವಸೆಗಳನ್ನು ಈಡೇರಿಸುವ ಮೂಲಕ ಜನರ ವಿಶ್ವಾಸವನ್ನು ಗಳಿಸಿದೆ. ಜನಪರ ಯೋಜನೆಗಳನ್ನು ಅಣಕಿಸಿ, ಜಾರಿ ಮಾಡಲು ಸಾಧ್ಯವಿಲ್ಲ ಎಂದ ಬಿಜೆಪಿ ರಾಷ್ಟ್ರೀಯ ನಾಯಕರೂ ದೇಶದ ವಿವಿಧ ರಾಜ್ಯಗಳಲ್ಲಿ ಜರುಗಿದ ಸಾರ್ವತ್ರಿಕ ಚುನಾವಣೆಯಲ್ಲಿ ಕರ್ನಾಟಕದ ಗ್ಯಾರಂಟಿ ಯೋಜನೆಗಳನ್ನು ನಕಲು ಮಾಡಿ ಘೋಷಣೆ ಮಾಡುತ್ತಿರುವುದು ಕರ್ನಾಟಕ ರಾಜ್ಯ ಸರ್ಕಾರದ ಆಡಳಿತ ವೈಖರಿಗೆ ಸಿಕ್ಕ ಮನ್ನಣೆ ಎಂದಿದ್ದಾರೆ.

ಬಿಜೆಪಿ ದಾವಣಗೆರೆಯಲ್ಲಿ ಏನೇ ಕುತಂತ್ರ ಮಾಡಿದರೂ ಅದು ಫಲಪ್ರದವಾಗಲಿಲ್ಲ. ಸರ್ವ ಜನರ ಸಹಕಾರದಿಂದಲೇ ಎರಡೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆಲ್ಲಲು ಕಾರಣವಾಗಿದೆ. ಇದು ಕಾಂಗ್ರೆಸ್ ಒಗ್ಗಟ್ಟಿಗೆ ದೊರೆತ ಜಯವಾಗಿದೆ. ಈ ಮೂಲಕ ಕಾಂಗ್ರೆಸ್ ಪಕ್ಷದ ರಾಷ್ಟ್ರೀಯ ನಾಯಕರಾದ ಮಲ್ಲಿಕಾರ್ಜುನ ಖರ್ಗೆ, ಉಸ್ತುವಾರಿ ರಣದೀಪ್‌ಸಿಂಗ್ ಸುರ್ಜೆವಾಲ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಸಚಿವ ಸಂಪುಟದ ಸದಸ್ಯರಿಗೆ, ಶಾಸಕರು, ಮಾಜಿ ಶಾಸಕರು, ಕಾರ್ಯಕರ್ತರಿಗೆ ಪತ್ರಿಕಾ ಪ್ರಕಟಣೆ ಮೂಲಕ ಎಂ.ಕೆ.ಸೋಮಶೇಖರ್ ಅಭಿನಂದನೆ ತಿಳಿಸಿದ್ದಾರೆ.


ಸನ್ಮಾನ...
ಶ್ರೀ ಮಲೆಮಾದೇಶ್ವರ ಸ್ವಾಮಿ ಸಾಂಸ್ಕೃತಿಕ-ಶೈಕ್ಷಣಿಕ ಟ್ರಸ್ಟ್ ನಿಂದ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಈ ವೇಳೆ ಎಚ್.ಕೆ. ಮಹಾನಂದ, ಡಾ.ವಿವೇಕ್, ಡಾ.ಶಾಂಪ್ರಸಾದ್, ನ್ಯಾಯಾಧೀಶ ವರುಣ್‌ರಾಜ್, ಪ್ರವೀಣ್, ಮಹದೇವ್, ಸಿದ್ಧಪ್ಪ ಇನ್ನಿತರರು ಉಪಸ್ಥಿತರಿದ್ದರು.

ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಕಡೇ ಕಾಲ!


ಶಿವಕುಮಾರ್

ಮೈಸೂರು,ಮೇ4(ಎಂಕೆ)-ಪಂಚ ರಾಜ್ಯಗಳ ಚುನಾವಣೆಯಲ್ಲಿ ಸೋಲು ಕಂಡು ಅವನತಿಯತ್ತ ಸಾಗುತ್ತಿರುವ ಕಾಂಗ್ರೆಸ್, ಕರ್ನಾಟಕದಲ್ಲೂ ಅಂತ್ಯವಾಗಲಿದೆ ಎಂದು ಮಾಜಿ ಮೇಯರ್ ಶಿವಕುಮಾರ್ ಪ್ರತಿಕ್ರಿಯಿಸಿದ್ದಾರೆ.

ಪಶ್ಚಿಮ ಬಂಗಾಳ, ತಮಿಳುನಾಡು, ಅಸ್ಸಾಂ ರಾಜ್ಯಗಳಲ್ಲಿ ಕಾಂಗ್ರೆಸ್ ಎರಡಂಕಿ ಸ್ಥಾನಗಳನ್ನು ದಾಟದಿರುವುದು ಕಾಂಗ್ರೆಸ್ ಪಕ್ಷದ ಅಸ್ತಿತ್ವವನ್ನೇ ಪ್ರಶ್ನಿಸುವಂತಾಗಿದೆ. ಅಸ್ಸಾಂನಲ್ಲಿ ಕಾಂಗ್ರೆಸ್ ಗೆಲ್ಲಿಸುತ್ತೇನೆಂದು ಹೇಳುತ್ತಿದ್ದ ಉಸ್ತುವಾರಿ ಹೊತ್ತಿದ್ದ ಬಿ.ಕೆ.ಹರಿಪ್ರಸಾದ್, ಡಿ.ಕೆ.ಶಿವಕುಮಾರ್ ಅವರಿಗೆ ಭಾರೀ ಮುಖಭಂಗವಾಗಿದೆ ಎಂದಿದ್ದಾರೆ.

ದಕ್ಷಿಣ ಭಾರತದ ರಾಜ್ಯಗಳಲ್ಲಿ ಬಿಜೆಪಿಗೆ ನೆಲೆಯೂರಲು ಅವಕಾಶವಿಲ್ಲವೆಂದು ಹಾಗೂ ಬಿಜೆಪಿ ವಿರುದ್ಧ ಅಪಪ್ರಚಾರದಲ್ಲಿ ತೊಡಗಿದ್ದ ಎಂ.ಕೆ.ಸ್ಟಾಲಿನ್ ನೇತೃತ್ವದ ಡಿಎಂಕೆಗೆ ತಮಿಳುನಾಡು ಜನತೆ ದೊಡ್ಡ ಪಾಠ ಕಲಿಸಿದ್ದಾರೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ನಾಯಕತ್ವಕ್ಕೆ ಮತದಾರರು ಮನ್ನಣೆ ನೀಡಿರುವುದು ಸಾಬೀತಾಗಿದೆ. ಕರ್ನಾಟಕದಲ್ಲಿ ಮೂರು ವರ್ಷಗಳಿಂದ ಆಡಳಿತ ನಡೆಸುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಎಲ್ಲಾ ರಂಗಗಳಲ್ಲೂ ವಿಫಲವಾಗಿದೆ. 2028ರ ಚುನಾವಣೆಯಲ್ಲಿ ಕಾಂಗ್ರೆಸ್ ಅಂತ್ಯವಾಗುವುದು ನಿಶ್ಚಿತ ಎಂದು ಪ್ರತಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿದ್ಯಾರ್ಥಿಗಳಿಗೆ ಉತ್ತೇಜನ ನೀಡುವ ಪ್ರಾಧ್ಯಾಪಕರು ಅವಶ್ಯ

ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕಿ ಡಿ.ಎಸ್.ಪ್ರತಿಮಾ ಅಭಿಮತ


ಮೈಸೂರಿನ ವಿಜಯ ನಗರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥೆ ಪ್ರೊ.ಸಿ. ಹೇಮಾವತಿ ರಚಿಸಿರುವ 'ಸಸ್ಯ ಸಂರಕ್ಷಣೆ' ಪುಸ್ತಕ ಬಿಡುಗಡೆಗೊಳಿಸಲಾಯಿತು.

ಮೈಸೂರು, ಮೇ 4- ವಿದ್ಯಾರ್ಥಿಗಳಲ್ಲಿ ಒಳ್ಳೆಯ ಗುಣ, ಕೌಶಲ್ಯ ಮತ್ತು ಸಮಾಜಕ್ಕೆ ಕೊಡುಗೆ ನೀಡುವಂತೆ ಪ್ರಾಧ್ಯಾಪಕರು ಉತ್ತೇಜನ ನೀಡಬೇಕು ಎಂದು ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕಿ ಡಿ. ಎಸ್. ಪ್ರತಿಮಾ ಅಭಿಪ್ರಾಯಪಟ್ಟರು.

ಮೈಸೂರಿನ ವಿಜಯನಗರದ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಸಿ ಹೇಮಾವತಿ ರಚಿಸಿರುವ 'ಸಸ್ಯ ಸಂರಕ್ಷಣೆ' ಪುಸ್ತಕ ಬಿಡುಗಡೆ ಮತ್ತು ಅವರ ನಿವೃತ್ತಿ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿಗಳ ಉತ್ತಮ ಭವಿಷ್ಯ ರೂಪಿಸುವಲ್ಲಿ ತಮ್ಮ ಜೀವನವನ್ನೇ ಮುಡಿಪಾಗಿಟ್ಟು, ಪ್ರಾಧ್ಯಾಪಕ ಕಾಯಕವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಇಲಾಖೆಗೆ ಪ್ರೊ. ಸಿ.ಹೇಮಾವತಿ ಅವರು ಒಳ್ಳೆಯ ಹೆಸರು ತಂದುಕೊಟ್ಟಿದ್ದಾರೆ ಎಂದು ತಿಳಿಸಿದರು.

ವಿದ್ಯಾರ್ಥಿಗಳಿಗೆ ಶಿಕ್ಷಣದಲ್ಲಿ ಪ್ರೋತ್ಸಾಹ ನೀಡಲು ಪ್ರೊ.ಸಿ.ಹೇಮಾವತಿ ದತ್ತಿ ಇಟ್ಟು ಇತರರಿಗೂ ಸ್ಫೂರ್ತಿಯಾಗಿದ್ದಾರೆ. ಸಮಾಜ ಮತ್ತು ಶೈಕ್ಷಣಿಕ ವಲಯದಲ್ಲಿ ಅವರ ಸೇವೆ ಮುಂದುವರೆಯಲಿ ಮತ್ತು ಇವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಹಾರೈಸಿದರು.

ಮುಖ್ಯ ಅತಿಥಿಯಾಗಿದ್ದ ನಿವೃತ್ತ ಪ್ರಾಂಶುಪಾಲ ಪ್ರೊ.ಮಲ್ಲಿಕಾರ್ಜುನ ಸ್ವಾಮಿ ಮಾತನಾಡಿ, ಪ್ರೊ. ಹೇಮಾವತಿ, ನ್ಯಾಯಸಮ್ಮತ ಮತ್ತು ಪ್ರಾಮಾಣಿಕತೆಯಿಂದ ವೃತ್ತಿ ನಿರ್ವಹಿಸಿದ್ದಾರೆ. ಪ್ರಸ್ತುತದಲ್ಲಿ ಗುಣಮಟ್ಟ ಮತ್ತು ಅನುಭವಿ ಪ್ರಾಧ್ಯಾಪಕರು ಕಡಿಮೆ ಯಾಗುತ್ತಿದ್ದಾರೆ. ಪ್ರವೃತ್ತಿಯಿಂದ ನಿವೃತ್ತಿಯಾಗಲ್ಲ. ಪ್ರೊ.ಹೇಮಾವತಿ ಅವರ ಸೇವೆ ಮುಂದುವರೆಯಲಿ ಎಂದರು.

ಲೋಕಾರ್ಪಣೆಗೊಂಡ 'ಸಸ್ಯ ಸಂರಕ್ಷಣೆ' ಪುಸ್ತಕ ಕುರಿತು ಮಾತನಾಡಿದ ನಿವೃತ್ತ ಪ್ರಾಧ್ಯಾಪಕ ಡಾ. ವಿಜಯ್, ಅಳಿವಿನಂಚಿನ ಸಸ್ಯಗಳನ್ನು ಹೇಗೆ ಮತ್ತು ಏಕೆ ಸಂರಕ್ಷಣೆ ಮಾಡಬೇಕು ಎಂದು ತಮ್ಮ ಪ್ರಾಯೋಗಿಕ ಅನುಭವದಿಂದ ಪುಸ್ತಕದಲ್ಲಿ ಸುದೀರ್ಘ ವಾಗಿ ಪ್ರೊ. ಹೇಮಾವತಿ ಅವರು ದಾಖಲಿಸಿದ್ದಾರೆ ಎಂದು ತಿಳಿಸಿದರು.

ಪ್ರೊ.ಹೇಮಾವತಿ ಮಾತನಾಡಿ, 34 ವರ್ಷಗಳ ಸೇವೆ ಸಂತೋಷ ಹಾಗೂ ತೃಪ್ತಿ ಕೊಟ್ಟಿದೆ. ವಿದ್ಯಾರ್ಥಿಗಳು ಎಲ್ಲೇ ಸಿಕ್ಕರೂ ಪ್ರೀತಿಗೌರವದಿಂದ ಕಾಣುತ್ತಾರೆ. ನನ್ನ ಸೇವಾವಧಿಯಲ್ಲಿ ಎಲ್ಲಾ ಸಹೋದ್ಯೋಗಿಗಳು ಮತ್ತು ವಿದ್ಯಾರ್ಥಿಗಳು ನೀಡಿರುವ ಪ್ರೀತಿ ಮತ್ತು ವಿಶ್ವಾಸವನ್ನು ಸಿಹಿಯಾಗಿ ನೆನೆಯುತ್ತೇನೆ ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲ ಕೆ.ಸಿ.ಭದ್ರಗಿರಿಯಯ್ಯ ಅಧ್ಯಕ್ಷತೆ ವಹಿಸಿದ್ದರು. ಜಂಟಿ ನಿರ್ದೇಶಕರ ಕಚೇ ರಿಯ ನಾಗೇಂದ್ರಪ್ರಸಾದ್, ಡಾ.ಮೋಹನ್ ಕುಮಾರ್, ಡಾ. ಮಲ್ಲಮ್ಮ, ಪ್ರೊ.ರಶ್ಮಿ ಚೆನ್ನಯ್ಯ, ಪ್ರೊ. ವೀಣಾ, ಪ್ರೊ. ಗೀತಾ, ಪ್ರೊ. ಸುಮಂಗಲ, ರಾಘವೇಂದ್ರ, ರಶ್ಮಿ, ಡಾ.ರಾಜೇಂದ್ರ, ಡಾ.ನಟರಾಜ್, ಆರೀಫ ಸುಲ್ತಾನ, ರಘು, ಡಾ.ವೀಣಾ, ಡಾ.ಸ್ವರೂಪ ರಾಣಿ, ಡಾ. ದೇವಿಕಾ, ಡಾ.ಶೋಭಾ ಜಗನ್ನಾಥ್, ಡಾ. ಮಾಧವಿ, ಡಾ.ಮಲ್ಲಿಕಾರ್ಜುನ ಸ್ವಾಮಿ, ಡಾ. ರಾಘವೇಂದ್ರ, ಡಾ. ದಿಲೀಪ್ ನರಸಯ್ಯ, ಡಾ.ಗೌತಮ್ ದೇವನೂರು, ಡಾ. ಸಂಜಯ್ ಇನ್ನಿತರರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ಕೈಮಗ್ಗ ಉತ್ಪನ್ನಗಳ ಪ್ರದರ್ಶನ, ಮಾರಾಟ

ಮೈಸೂರು, ಮೇ4(ಎಂಕೆ)- ಮೈಸೂರಿನ ವಿಜಯನಗರದಲ್ಲಿರುವ ಜಗನ್ನಾಥ್ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ ಸಂಸ್ಥೆ ಸಭಾಂಗಣದಲ್ಲಿ ಚರಕ ಮಹಿಳಾ ವಿವಿಧೋದ್ದೇಶ ಕೈಗಾರಿಕಾ ಸಹಕಾರ ಸಂಘದ ವತಿಯಿಂದ ಮೇ 8ರಿಂದ 10ರವರೆಗೆ 'ನೈಸರ್ಗಿಕ ಬಣ್ಣದ ಅಪ್ಪಟ ಹತ್ತಿ ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳ'ದ ಜೊತೆಗೆ 'ಕೊಡು-ಕೊಳ್ಳುವವರ' ಸಮಾವೇಶ ಆಯೋಜಿಸಲಾಗಿದೆ.

ಬೆಳಿಗ್ಗೆ 10.30ರಿಂದ ರಾತ್ರಿ 7.30ರವರೆಗೆ ನಡೆಯುವ 3 ದಿನಗಳ ಮೇಳಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಚಾಲನೆ ನೀಡಲಿದ್ದು, ಮೈಸೂರು ಬುಕ್ ಕ್ಲಬ್ ಚಾರಿಟೇಬಲ್ ಟ್ರಸ್ಟ್ ಸಂಸ್ಥಾಪಕಿ ಶುಭಾ ಸಂಜಯ್ ಅರಸ್, ಚರಕದ ಸಂಸ್ಥಾಪಕ, ರಂಗಕರ್ಮಿ ಪ್ರಸನ್ನ ಭಾಗವಹಿಸಲಿದ್ದಾರೆ. ಮಠಾಧೀಶರು ತೊಡುವ ಕಷಾಯ ವಸ್ತ್ರ ಬಿಡುಗಡೆ, ಬೇವು ಮತ್ತು ಅರಿಸಿನ ಬಣ್ಣದಲ್ಲಿನ ಸಿದ್ಧ ಉಡುಪುಗಳು ಅನಾವರಣಗೊಳ್ಳಲಿದ್ದು, ನೈಸರ್ಗಿಕ ಬಣ್ಣದ ಕೈಮಗ್ಗದ ಬಟ್ಟೆಗಳು, ಸಿದ್ಧ ಉಡುಪುಗಳು, ಉತ್ತರ ಕರ್ನಾಟಕದ ಕೈಮಗ್ಗದ ಸೀರೆಗಳು, ನೈಸರ್ಗಿಕ ಬಣ್ಣದ ಬೆಡ್ ಸ್ಪ್ರೆಡ್, ಜಮ್ದಾನಿ ಸೀರೆ, ಕುರ್ತಾ, ಶರ್ಟ್ ಹಾಗೂ ಗೃಹಾಲಂಕಾರ ಉಡುಪುಗಳು ಲಭ್ಯವಾಗಲಿವೆ. ಮಾಹಿತಿಗೆ ಮೊ.63638 85215/74111 20862 ಸಂಪರ್ಕಿಸಬಹುದಾಗಿದೆ.

ಆದಿ ದ್ರಾವಿಡ ತಂಡಕ್ಕೆ ಚಾಂಪಿಯನ್ ಪಟ್ಟ...


ಮೈಸೂರಿನ ಜೆ.ಪಿ.ನಗರ, ನವೋದಯ ಬಡಾವಣೆ, ವಿದ್ಯಾರಣ್ಯಪುರಂನ ಜೈ ಭೀಮ್ ಲೆಜೆಂಡ್ಸ್ ಮತ್ತು ಜೈ ಭೀಮ್ ಫ್ರೆಂಡ್ಸ್ ವತಿಯಿಂದ ಜೆ.ಪಿ.ನಗರದ ಪುಟ್ಟರಾಜ ಗವಾಯಿ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ ಮೈಸೂರು ಪ್ರೀಮಿಯರ್ ಲೀಗ್-2026 ಟೆನ್ನಿಸ್ ಬಾಲ್ ಕ್ರಿಕೆಟ್ ಟೂರ್ನಿಯಲ್ಲಿ ಆದಿ ದ್ರಾವಿಡ ತಂಡ ಚಾಂಪಿಯನ್ ಪಟ್ಟ ಗಳಿಸಿತು. ಎರಡನೇ ಸ್ಥಾನ ಸಿಲ್ಕ್ ಫ್ಯಾಕ್ಟರಿ ಬಾಯ್ಸ್ ಹಾಗೂ ಮೂರನೇ ಸ್ಥಾನವನ್ನು ಡ್ರ್ಯಾಗನ್ ಬಾಯ್ಸ್ ತಂಡವು ಪಡೆದುಕೊಂಡಿತು. ಈ ವೇಳೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ವಿಜೇತ ತಂಡಗಳಿಗೆ ಟ್ರೋಫಿಯನ್ನು ವಿತರಿಸಿದರು. ಮಾಜಿ ಮೇಯರ್ ಬಿ.ಎಲ್.ಭೈರಪ್ಪ, ಮುಖಂಡರಾದ ವೆಂಕಟೇಶ್, ಜಯರಾಂ ನಾರಾಯಣ್, ಕುಮಾರಸ್ವಾಮಿ, ವಿನಯ್, ರಘು, ಹರ್ಷಿತ್, ವರುಣ್, ಶಶಿ, ಸುರೇಶ್, ಮನೋಜ್ ಉಪಸ್ಥಿತರಿದ್ದರು.

ಬೌರಿಂಗ್ ಅವಘಡ: ಮೈಸೂರು ಜಿಲ್ಲಾಡಳಿತಕ್ಕೆ ಎಚ್ಚರಿಕೆ ಗಂಟೆ

ಜಾಗ್ರತೆ ವಹಿಸಲು ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಆಗ್ರಹ


ಕೆ.ವಿ.ಮಲ್ಲೇಶ್

ಮೈಸೂರು: ಇತ್ತೀಚೆಗೆ ಸುರಿದ ಭಾರೀ ಮಳೆಯಿಂದಾಗಿ ಬೆಂಗಳೂರಿನ ಬೌರಿಂಗ್ ಕಾಂಪೌಂಡ್ ಕಟ್ಟಡ ಕುಸಿದು ಏಳು ಮಂದಿ ದುರ್ಮರಣಕ್ಕೀಡಾಗಿರುವ ಘಟನೆ ಮೈಸೂರು ಜಿಲ್ಲಾಡಳಿತಕ್ಕೆ ಎಚ್ಚರಿಕೆಯ ಗಂಟೆಯಾಗಿದ್ದು, ಜನಪ್ರತಿನಿಧಿಗಳು, ಸಂಬಂಧಪಟ್ಟ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕಿದೆ ಎಂದು ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ಪಾರಂಪರಿಕ ನಗರ. ನಗರದ ಯಾವುದೇ ಮೂಲೆಯಲ್ಲಿ ನಿಂತು ಒಂದು ಕಲ್ಲೆಸೆದರೂ ಅದು ಒಂದು ಪಾರಂಪರಿಕ ಕಟ್ಟಡದ ಮೇಲೆ ಬೀಳುತ್ತದೆ ಎಂಬ ಮಾತಿದೆ. ಅಷ್ಟರ ಮಟ್ಟಿಗೆ ಗತ ಸಾರುವ ನೂರಾರು ಕಟ್ಟಡಗಳು, ಮಹಲುಗಳು ನಗರದಲ್ಲಿವೆ. ಆದರೆ, ಅವುಗಳ ನಿರ್ವಹಣೆಯ ಕೊರತೆ ಇದೀಗ ಭಯ ಉಂಟು ಮಾಡುತ್ತಿದೆ. ಬೆಂಗಳೂರಿನ ಬೌರಿಂಗ್ ಆಸ್ಪತ್ರೆ ದುರ್ಘಟನೆ, 2012ರಲ್ಲಿ ಸಂಭವಿಸಿದ ನಗರದ ಲ್ಯಾನ್ಸ್‌ಡೌನ್ ಕಟ್ಟಡದ ದುರಂತವನ್ನು ನೆನಪಿಸುತ್ತಿದೆ. ಈ ಕಟ್ಟಡ ಕುಸಿದು 4 ಜನ ದುರ್ಮರಣಕ್ಕೀಡಾಗಿದ್ದರು.

ಅತ್ಯಂತ ಹಳೆಯ ಈ ಕಟ್ಟಡ ನಿರ್ವಹಣೆಯ ಕೊರತೆಯಿಂದ ತೀವ್ರ ಸೊರಗಿತ್ತು. ದುರ್ಘಟನೆಯ ನಂತರವೂ ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳು ಎಚ್ಚೆತ್ತುಕೊಂಡಿಲ್ಲ. ಹಳೆಯ ಡಿಸಿ ಕಚೇರಿ ಕಟ್ಟಡ, ಕೃಷ್ಣರಾಜೇಂದ್ರ ಮಾರುಕಟ್ಟೆ, ವಾಣಿ ವಿಲಾಸ ಮಾರುಕಟ್ಟೆ, ಜಗನ್ಮೋಹನ ಪ್ಯಾಲೇಸ್, ಕಾಡಾ ಕಚೇರಿ ಸೇರಿದಂತೆ ಹತ್ತಾರು ಪಾರಂಪರಿಕ ಕಟ್ಟಡಗಳು ನಿರ್ವಹಣೆ ಕೊರತೆ ಎದುರಿಸುತ್ತಿದ್ದು, ಅಪಾಯಕ್ಕೆ ಆಹ್ವಾನ ನೀಡುತ್ತಿವೆ.

ಈ ಕಟ್ಟಡಗಳ ಮೇಲೆ ಗಿಡ, ಮರಗಳು ಬೆಳೆಯುತ್ತಿದ್ದು, ಮಳೆ ನೀರು ಸೋರಿ ಕಟ್ಟಡಗಳನ್ನು ದುಸ್ಥಿತಿಗೆ ತಳ್ಳುತ್ತಿವೆ. ಇನ್ನಾದರೂ ಅಧಿಕಾರಸ್ಥರು ಎಚ್ಚೆತ್ತು ಕಟ್ಟಡಗಳ ನಿರ್ವಹಣೆಗೆ ಕ್ರಮ ಕೈಗೊಳ್ಳಬೇಕು.

ಒಳ ಚರಂಡಿ ದುರಸ್ಥಿಗೊಳಿಸಿ: ನಗರದ ಬಹುತೇಕ ರಸ್ತೆಗಳಲ್ಲಿನ ಒಳಚರಂಡಿ, ಮಳೆ ನೀರು ಚರಂಡಿ ಮತ್ತು ರಾಜಕಾಲುವೆಗಳಲ್ಲಿ ಕಸ, ಕಡ್ಡಿ, ಮಣ್ಣು ತುಂಬಿದ್ದು, ಮಳೆ ನೀರು ಸರಾಗವಾಗಿ ಹರಿಯಲು ಸಾಧ್ಯವಾಗದಂತಿದೆ. ಬೇಸಿಗೆಯಲ್ಲಿ ಅವುಗಳ ನಿರ್ವಹಣೆ ಮಾಡಿ, ಮಳೆಗಾಲಕ್ಕೆ ಸಜ್ಜಾಗಬೇಕಾದ ನಗರಪಾಲಿಕೆ ಮೈ ಮರೆತು ಕುಳಿತಿದೆ. ಜೋರು ಮಳೆಯಾದರೆ ರಸ್ತೆಗಳೆಲ್ಲ ನದಿಗಳಂತೆ ಉಕ್ಕುವುದು, ತಗ್ಗು ಪ್ರದೇಶದ ಮನೆ, ಬಡಾವಣೆಗಳಿಗೆ ನೀರು ನುಗ್ಗುವುದು, ನಿವಾಸಿಗಳು, ವಾಹನ ಸವಾರರು, ಪಾದಚಾರಿಗಳು ಸಂಚಾರಕ್ಕೆ ಪರದಾಡುವುದು ಪ್ರತಿ ವರ್ಷದ ಗೋಳಾಟ. ಅಲ್ಲದೆ, ಕೆಲವು ಕಡೆ ಪಾದಚಾರಿ ಮಾರ್ಗದ ಸ್ಲಾಬ್‌ಗಳು ಒಡೆದಿದ್ದು, ಅನಾಹುತಕ್ಕೆ ಆಹ್ವಾನ ನೀಡುವಂತಿವೆ ಎಂದು ಎಚ್ಚರಿಸಿದ್ದಾರೆ.

ಒಣಗಿರುವ ಮರಗಳ ತೆರವುಗೊಳಿಸಿ: ನಗರದ ರಸ್ತೆಗಳಲ್ಲಿ ಸಾಕಷ್ಟು ಸಾಲು ಮರಗಳಿದ್ದು, ಮೈಸೂರಿನ ಮೆರುಗನ್ನು ಹೆಚ್ಚಿಸಿವೆ. ಆದರೆ, ಹಲವು ರಸ್ತೆಗಳಲ್ಲಿ ಸಾಕಷ್ಟು ಒಣಗಿದ ಮರಗಳಿದ್ದು, ಗಾಳಿ, ಮಳೆಗೆ ಬೀಳುವ ಅಪಾಯವಿದೆ. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ ಒಣಗಿದ ಮರಗಳು ಹಾಗೂ ರಸ್ತೆಗೆ ಬಾಗಿದ ಮರದ ಕೊಂಬೆಗಳನ್ನು ತೆರವುಗೊಳಿಸಿ ಅದೇ ಜಾಗದಲ್ಲಿ ಹೊಸ ಗಿಡಗಳನ್ನು ನೆಡಬೇಕು ಎಂದು ಕೆ.ವಿ.ಮಲ್ಲೇಶ್ ಒತ್ತಾಯಿಸಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು, ಮೇ 4- ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕು ಶಿವಪುರದಲ್ಲಿರುವ ಶ್ರೀ ಬಸವೇಶ್ವರ ಅನಾಥಾಲಯಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ. 5ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಇಲ್ಲಿ ಪ್ರವೇಶಾವಕಾಶವಿರುತ್ತದೆ. ಅರ್ಜಿಯನ್ನು ನೇರವಾಗಿ ಕಚೇರಿಯಿಂದ ಪಡೆಯಬಹುದು ಅಥವಾ ಮೊಬೈಲ್‌ನಲ್ಲಿ ಸಂಪರ್ಕಿಸಿದರೆ ವಾಟ್ಸಪ್ ಮೂಲಕ ಕಳುಹಿಸಿಕೊಡಲಾಗುವುದು. ಪ್ರವೇಶಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಗೆ ದೂ. 0821-2548212, ಮೊ. 6360674566 ಸಂಪರ್ಕಿಸಬಹುದು.

ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ

ಮೈಸೂರು, ಮೇ 4- ಲಕ್ಷ್ಮೀಪುರಂನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಮೇ 7ರಂದು ಬೆಳಗ್ಗೆ 10 ರಿಂದ ರಾತ್ರಿ 8 ಗಂಟೆಯವರೆಗೆ ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821-4259259 ಸಂಪರ್ಕಿಸಬಹುದು.

ದೇಶ - ವಿದೇಶ

ಬಂಗಾಳದಲ್ಲಿ ಐತಿಹಾಸಿಕ ಜಯ: ಬಿಜೆಪಿ ಕಚೇರಿಯಲ್ಲಿ ಮೀನೂಟ



ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಅಭೂತಪೂರ್ವ ಗೆಲುವು ದಾಖಲಿಸಿದ ಹಿನ್ನೆಲೆ ಬಿಜೆಪಿ ಕಚೇರಿಯಲ್ಲಿ ಸಂಭ್ರಮ ಮನೆ ಮಾಡಿದೆ.

ಬಿಜೆಪಿ ಕಾರ್ಯಕರ್ತರು ಮೀನೂಟ ಬಡಿಸಿ ಖುಷಿ ಹಂಚಿಕೊಂಡಿದ್ದಾರೆ.

ಬಿಜೆಪಿ ಅಧಿಕಾರಕ್ಕೆ ಬಂದರೆ ಮಾಂಸಾಹಾರ ನಿಷೇಧಿಸುತ್ತದೆ ಎಂದು ಟಿಎಂಸಿ ಪ್ರಚಾರ ಮಾಡಿತ್ತು. ಮೊಟ್ಟೆ, ಮೀನು, ಮಾಂಸ ತಿನ್ನಲು ಬಿಡಲ್ಲ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಪ್ರಚಾರ ಮಾಡಿದ್ದರು. ಟಿಎಂಸಿಗೆ ಕೌಂಟರ್ ಕೊಡಲು ಬಿಜೆಪಿ ಕಚೇರಿಯಲ್ಲಿ ಮೀನೂಟ ಬಡಿಸಿ ಕಾರ್ಯಕರ್ತರು ಸಂಭ್ರಮಿಸಿದ್ದಾರೆ. ಮಾಚ್ ಅಂದ್ರೆ ಮೀನು, ಭಾತ್ ಅಂದ್ರೆ ಅನ್ನ. ಬಿಜೆಪಿ ಮಾಂಸಾಹಾರ ನಿಷೇಧಿಸುತ್ತದೆ ಅನ್ನೋದೆಲ್ಲ ಸುಳ್ಳು. ಇದು ಅಪಪ್ರಚಾರ ಎಂದು ಟಿಎಂಸಿಗೆ ಠಕ್ಕರ್ ಕೊಟ್ಟಿದ್ದಾರೆ. ದೇಶದ ರಾಜಕೀಯದಲ್ಲಿ ಕುತೂಹಲ ಮೂಡಿಸಿದ್ದ ಪಶ್ಚಿಮ ಬಂಗಾಳ ಚುನಾವಣಾ ಫಲಿತಾಂಶ ಹೊರಬಿದ್ದಿದ್ದು, ಬಿಜೆಪಿ ಐತಿಹಾಸಿಕ ಜಯ ಗಳಿಸಿದೆ. ಮಮತಾ ಬ್ಯಾನರ್ಜಿ ಹಿಡಿತದಲ್ಲಿದ್ದ ರಾಜ್ಯವನ್ನು ಬಿಜೆಪಿ ಈಗ ತನ್ನ ತೆಕ್ಕೆಗೆ ತೆಗೆದುಕೊಂಡಿದೆ.

ಹೊರ್ಮುಜ್‌ನಲ್ಲಿ ಸಿಲುಕಿರುವ ಹಡಗುಗಳ ಹೊರತರಲು ಪ್ರಾಜೆಕ್ಟ್ ಫ್ರೀಡಂ



ವಾಷಿಂಗ್ಟನ್: ಹೊರ್ಮುಜ್ ಜಲಸಂಧಿಯಲ್ಲಿ ಸಿಲುಕಿಕೊಂಡಿರುವ ವಿದೇಶಿ ಹಡಗುಗಳನ್ನು ಸೋಮವಾರದಿಂದ ಸುರಕ್ಷಿತವಾಗಿ ಹೊರತರಲು ನಮ್ಮ ನೌಕಾಪಡೆ ಸಹಾಯ ಮಾಡಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ತಿಳಿಸಿದ್ದಾರೆ. ಈ ಪ್ರಕ್ರಿಯೆಯಲ್ಲಿ ಯಾವುದೇ ಹಸ್ತಕ್ಷೇಪ ನಡೆದರೆ ಅದನ್ನು ಬಲವಾಗಿ ಎದುರಿಸುತ್ತೇವೆ ಎಂದೂ ಟ್ರಂಪ್ ಇರಾನ್‌ಗೆ ಎಚ್ಚರಿಕೆ ನೀಡಿದ್ದಾರೆ.


ಪಶ್ಚಿಮ ಏಷ್ಯಾ ಸಂಘರ್ಷದಲ್ಲಿ ಭಾಗಿಯಾಗದೆ ಹೊರ್ಮುಜ್ ಜಲಸಂಧಿಯಲ್ಲಿ ಸಿಲುಕಿರುವ ವಿದೇಶಿ ಹಡಗುಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಪ್ರಾಜೆಕ್ಟ್ ಫ್ರೀಡಂ ಕಾರ್ಯಾಚರಣೆ ಆರಂಭಿಸಿದ್ದೇವೆ. ಹೊರ್ಮುಜ್‌ನಲ್ಲಿ ಸಿಲುಕಿಕೊಂಡಿರುವ ಹಡಗುಗಳಲ್ಲಿ ಆಹಾರ, ಕುಡಿಯುವ ನೀರು ಮತ್ತು ಸಿಬ್ಬಂದಿಯ ಆರೋಗ್ಯ ಕಾಪಾಡಲು ಅಗತ್ಯವಿರುವ ವಸ್ತುಗಳ ಕೊರತೆ ಉಂಟಾಗಿದೆ ಎಂದು ಟ್ರಂಪ್ ತಮ್ಮ ಒಡೆತನದ ಸಾಮಾಜಿಕ ಮಾಧ್ಯಮ ಟ್ರೂತ್ ಸೋಷಿಯಲ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ಪ್ರಾಜೆಕ್ಟ್ ಫ್ರೀಡಂಗಾಗಿ ಅಮೆರಿಕವು ಕ್ಷಿಪಣಿ ವಿಧ್ವಂಸಕ ನೌಕೆಗಳು, 100ಕ್ಕೂ ಹೆಚ್ಚು ವಿಮಾನಗಳು, ಮಾನವರಹಿತ ಡ್ರೋನ್ ಪ್ಲಾಟ್‌ಫಾರ್ಮ್‌ಗಳು ಮತ್ತು 15,000 ಸೈನಿಕರನ್ನು ನಿಯೋಜಿಸಲಿದೆ. ಈ ಎಲ್ಲಾ ಬೆಳವಣಿಗೆಗಳ ನಡುವೆ ಇರಾನ್ ಜೊತೆ ನಮ್ಮ ಪ್ರತಿನಿಧಿಗಳು ಸಕಾರಾತ್ಮಕ ಚರ್ಚೆ ನಡೆಸುತ್ತಿದ್ದು, ಎಲ್ಲರಿಗೂ ಒಳ್ಳೆಯ ಸಂದೇಶ ಸಿಗಲಿದೆ ಎಂದು ಟ್ರಂಪ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ಮೊಬೈಲ್ ಟಾರ್ಚ್ ಬೆಳಕಲ್ಲಿ ಹೆರಿಗೆ: ತಾಯಿ-ನವಜಾತ ಶಿಶು ಸಾವು



ಸರೈಕಲಾ: ಆಸ್ಪತ್ರೆಯಲ್ಲಿ ವಿದ್ಯುತ್ ಪೂರೈಕೆ ಇಲ್ಲದ ಕಾರಣ, ಮೊಬೈಲ್ ಫೋನ್ ಬೆಳಕಿನಲ್ಲಿಯೇ ಗರ್ಭಿಣಿ ಮಹಿಳೆಗೆ ಹೆರಿಗೆ ಮಾಡಿಸಿರುವ ಘಟನೆ ಸರೈಕಲಾ-ಖರ್ಸಾವನ್ ಜಿಲ್ಲೆಯ ರಾಜನಗರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ನಡೆದಿದ್ದು, ತಾಯಿ ಮತ್ತು ನವಜಾತ ಶಿಶು ಇಬ್ಬರೂ ಮೃತಪಟ್ಟಿದ್ದಾರೆ. ಹತಿಶೀರಿಂಗ್ ಪ್ರದೇಶದ ಸಮುದಾಯ ಆರೋಗ್ಯ ಕಾರ್ಯಕರ್ತೆ ಬಿನಿತಾ ಬನ್ರಾ ಅವರನ್ನು ಹೆರಿಗೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಬಿನಿತಾ ಅವರಿಗೆ ಹೆರಿಗೆ ನೋವು ಕಾಣಿಸಿಕೊಂಡಾಗ, ಆಸ್ಪತ್ರೆಯಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿದೆ. ಆಸ್ಪತ್ರೆಯಲ್ಲಿ ಜನರೇಟರ್ ಅಥವಾ ಇನ್ವರ್ಟರ್ ವ್ಯವಸ್ಥೆ ಇಲ್ಲದೆ ಇದ್ದುದರಿಂದ, ವೈದ್ಯರು ಹಾಗೂ ದಾದಿಯರು ಮೊಬೈಲ್ ಫೋನ್ ಟಾರ್ಚ್ ಬೆಳಕು ಹಿಡಿದು ಹೆರಿಗೆ ಮಾಡಿಸಿದ್ದಾರೆ. ಅವರ ನಿರ್ಲಕ್ಷ್ಯದಿಂದಾಗಿ ನನ್ನ ಪತ್ನಿ ಮತ್ತು ಗಂಡು ಮಗು ಮೃತಪಟ್ಟಿದ್ದಾರೆ ಎಂದು ಬಿನಿತಾ ಪತಿ ದುರ್ಗಾ ಚರಣ್ ಆರೋಪಿಸಿದ್ದಾರೆ. ಈ ಕುರಿತು ಸ್ಪಷ್ಟೀಕರಣ ನೀಡಿರುವ ಆಸ್ಪತ್ರೆಯ ಉಸ್ತುವಾರಿ ವೈದ್ಯ ಡಾ. ಶ್ಯಾಮ್ ಸೊರೇನ್, ಆ ಸಮಯದಲ್ಲಿ ಗುಡುಗು ಸಹಿತ ಮಳೆಯಾಗುತ್ತಿತ್ತು. ಹೀಗಾಗಿ, ಸರಕಾರಿ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ದುರದೃಷ್ಟವಶಾತ್ ಸೌರ ವ್ಯವಸ್ಥೆ, ಇನ್ವರ್ಟರ್ ಮತ್ತು ಜನರೇಟರ್ ಕೆಟ್ಟು ಹೋಗಿದ್ದವು. ಹೆರಿಗೆ ಬಳಿಕ, ಅತಿಯಾದ ರಕ್ತಸ್ರಾವದಿಂದ ಮಹಿಳೆ ಮೃತಪಟ್ಟಿದ್ದಾರೆ.

ಲಿಪು ಲೇಕ್ ಮೂಲಕ ಮಾನಸ ಸರೋವರ ಯಾತ್ರೆಗೆ ನೇಪಾಳ ಆಕ್ಷೇಪ



ಕಠ್ಮಂಡು: ಲಿಪುಲೇಕ್ ಪಾಸ್ ಮೂಲಕ ಕೈಲಾಸ ಮಾನಸ ಸರೋವರ ಯಾತ್ರೆಯನ್ನು ಕೈಗೊಳ್ಳಲು ಭಾರತ ಹಾಗೂ ಚೀನಾ ಯೋಜನೆ ರೂಪಿಸಿರುವ ಬಗ್ಗೆ ನೇಪಾಳದಲ್ಲಿ ಒಂದು ತಿಂಗಳ ಹಿಂದೆಯಷ್ಟೇ ರಚನೆಯಾದ ಬಲೇನ್ ಶಾ ನೇತೃತ್ವದ ಸರ್ಕಾರ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ಆದರೆ ಭಾರತ ಈ ಆಕ್ಷೇಪವನ್ನು ತಳ್ಳಿಹಾಕಿದ್ದು, ಇದು ಸಮರ್ಥನೀಯವೂ ಅಲ್ಲ ಅಥವಾ ಐತಿಹಾಸಿಕ ಅಂಕಿ ಅಂಶ- ಪುರಾವೆ ಆಧಾರದಲ್ಲಿ ಕೈಗೊಂಡ ನಿರ್ಧಾರವೂ ಅಲ್ಲ ಎಂದು ಸ್ಪಷ್ಟಪಡಿಸಿದೆ.

ಲಿಪು ಲೇಕ್ ಪಾಸ್ ವಿವಾದಾತ್ಮಕ ಪ್ರದೇಶವಾಗಿದ್ದು, ಭಾರತ ಹಾಗೂ ಚೀನಾ ಯಾತ್ರಾರ್ಥಿಗಳಿಗೆ ಈ ಮಾರ್ಗ ದುದ್ದಕ್ಕೂ ವ್ಯಾಪಾರ- ವಹಿವಾಟು ನಡೆಸುತ್ತಿರುವುದನ್ನು ನೇಪಾಳ ಆಕ್ಷೇಪಿಸುತ್ತಲೇ ಬಂದಿದೆ. ಕೈಲಾಸ ಮಾನಸ ಸರೋವರ ಯಾತ್ರೆಗೆ ಸಂಬಂಧಿಸಿದಂತೆ ಮಾಧ್ಯಮಗಳು ಕೇಳಿದ ಪ್ರಶ್ನೆ ಮತ್ತು ಆತಂಕಗಳ ಬಗ್ಗೆ ಗಮನ ಸೆಳೆದಿದೆ. ಇದನ್ನು ಭಾರತ ಹಾಗೂ ಚೀನಾ ನೇಪಾಳದ ಪ್ರದೇಶವಾದ ಲಿಪುಲೇಕ್ ಮೂಲಕ ಕೈಗೊಳ್ಳುತ್ತಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ರವಿವಾರ ಹೇಳಿಕೆ ನೀಡಿದೆ. ಈ ಬಗ್ಗೆ ನೇಪಾಳ ಸರ್ಕಾರದ ನಿರ್ಧಾರ ಸ್ಪಷ್ಟ, ಲಿಂಪಿಯಾಧುರ ಮತ್ತು ಮಹಾಕಾಳಿ ನದಿಯ ಪೂರ್ವದ ಕಾಲಾಪಾನಿ 1816ರಿಂದಲೇ ಸುಗಾಲಿ ಒಪ್ಪಂದದ ಅನ್ವಯ ನೇಪಾಳದ ಅವಿಭಾಜ್ಯ ಅಂಗ ಎಂದು ಸ್ಪಷ್ಟಪಡಿಸಿದೆ.

ಎಣಿಕೆ ಕೇಂದ್ರದಲ್ಲಿ ಗಲಾಟೆ; ಬಿಜೆಪಿ-ಟಿಎಂಸಿ ಕಾರ್ಯಕರ್ತರ ಹೊಡೆದಾಟ

ಕೋಲ್ಕತ್ತಾ: ಮತ ಎಣಿಕೆ ಕೇಂದ್ರದಲ್ಲಿ ಗಲಾಟೆಯಾಗಿದ್ದು, ಕೂಚ್ ಬೆಹಾರ್‌ನಲ್ಲಿ ಬಿಜೆಪಿ ಮತ್ತು ಟಿಎಂಸಿ ಕಾರ್ಯಕರ್ತರು ಪರಸ್ಪರ ಹೊಡೆದಾಡಿಕೊಂಡಿದ್ದಾರೆ.



ಅಸನ್ಸೋಲ್ ಎಂಜಿನಿಯರಿಂಗ್ ಕಾಲೇಜಿನ ಎಣಿಕೆ ಕೇಂದ್ರದ ಬಳಿ ನಡೆದ ಘರ್ಷಣೆಯಲ್ಲಿ ಕುರ್ಚಿಗಳು ಮತ್ತು ವಾಹನಗಳನ್ನು ಧ್ವಂಸಗೊಳಿಸಲಾಗಿದೆ. ಪರಿಸ್ಥಿತಿಯನ್ನು ನಿಯಂತ್ರಿಸಲು ಸ್ಥಳದಲ್ಲಿ ಭದ್ರತಾ ಸಿಬ್ಬಂದಿ ನಿಯೋಜಿಸಲಾಗಿದೆ.

ಘರ್ಷಣೆಯಲ್ಲಿ ತೊಡಗಿದ್ದ ಜನರನ್ನು ಚದುರಿಸಲು ಭದ್ರತಾ ಸಿಬ್ಬಂದಿ ಲಾಠಿ ಪ್ರಹಾರ ನಡೆಸಿದರು. ಪಶ್ಚಿಮ ಬಂಗಾಳದ ರಾಷ್ಟ್ರಗುರು ಸುರೇಂದ್ರನಾಥ ಮತ ಎಣಿಕೆ ಕೇಂದ್ರದ ಉತ್ತರ 24 ಪರಗಣದ ಬರಾಕ್‌ಪೋರ್‌ನಲ್ಲಿ ಮತ್ತೊಂದು ಗಲಾಟೆ ನಡೆದಿದೆ. ಯಾವುದೇ ಅಹಿತಕರ ಘಟನೆ ನಡೆಯಬಾರದೆಂದು ಪಶ್ಚಿಮ ಬಂಗಾಳದಲ್ಲಿ ಸಂಭ್ರಮಾಚರಣೆ ಬ್ಯಾನ್ ಮಾಡಲಾಗಿದೆ. ಪಶ್ಚಿಮ ಬಂಗಾಳದ 294 ವಿಧಾನಸಭೆಗಳಿಗೆ ಏ.23 ಮತ್ತು 29ರಂದು ಎರಡು ಹಂತಗಳಲ್ಲಿ ಚುನಾವಣೆ ನಡೆಯಿತು. ಒಟ್ಟು 2,926 ಅಭ್ಯರ್ಥಿಗಳು ಚುನಾವಣೆಯಲ್ಲಿ ಸ್ಪರ್ಧಿಸಿದ್ದರು. ಮೊದಲ ಹಂತದ ಚುನಾವಣೆಗೆ 152 ಸ್ಥಾನಗಳಲ್ಲಿ 1,487 ಹಾಗೂ ಎರಡನೇ ಹಂತದ ಚುನಾವಣೆಗೆ 142 ಕ್ಷೇತ್ರಗಳಲ್ಲಿ ಒಟ್ಟು 1,448 ಅಭ್ಯರ್ಥಿಗಳು ಸ್ಪರ್ಧಿಸಿದ್ದರು. ಮೊದಲ ಹಂತದಲ್ಲಿ 93.19% ಹಾಗೂ ಎರಡನೇ ಹಂತದಲ್ಲಿ 92.47% ಮತದಾನ ನಡೆಯಿತು.

ಸ್ನಾನ ಮಾಡಲು ಹೋಗಿ ನೀರಿನಲ್ಲಿ ಮುಳುಗಿ ಸಾವು



ಗ್ರಾಮಸ್ಥರ ನೆರವಿನೊಂದಿಗೆ ಶವವನ್ನು ಹೊರ ತೆಗೆಯಲಾಯಿತು.

ಮಡಿಕೇರಿ, ಮೇ4–ಸ್ನಾನ ಮಾಡಲೆಂದು ಹೋಗಿ ನೀರಿನ ಸುಳಿವಿಗೆ ಸಿಲುಕಿ ಅಸು ನೀಗಿರುವ ಘಟನೆ ಸಿದ್ದಾಪುರ ಸಮೀಪ ನಡೆದಿದೆ.

ವಿರಾಜಪೇಟೆ ಸುಂಕದಕಟ್ಟೆ ನಿವಾಸಿ ನಾಗರಾಜು(41) ಮೃತ ದುರ್ದೈವಿಯಾಗಿದ್ದಾರೆ. ಸಿದ್ದಾಪುರ ಸಮೀಪದ ಗುಹ್ಯ ಗ್ರಾಮದ ಕಾವೇರಿ ನದಿಯಲ್ಲಿ ಸ್ನಾನ ಮಾಡಲು ತೆರಳಿದ್ದ ವೇಳೆ ನೀರಿನ ಸುಳಿವಿನಲ್ಲಿ ಸಿಲುಕಿ ಮೇಲೆ ಬರಲಾಗದೆ ನಾಗರಾಜು ಮೃತಪಟ್ಟಿದ್ದಾರೆ. ಸ್ಥಳೀಯರು ಮಾಹಿತಿ ನೀಡಿದ ಮೇರೆಗೆ ಸ್ಥಳಕ್ಕಾಗಮಿಸಿದ ಪೊಲೀಸರು, ಗ್ರಾಮಸ್ಥರ ನೆರವಿನೊಂದಿಗೆ ಮೃತ ದೇಹವನ್ನು ಹೊರ ತೆಗೆದು ಮಹಜರು ನಡೆಸಿದರು. ನಂತರ ಮೃತ ದೇಹವನ್ನು ಸಿದ್ದಾಪುರ ಸಮುದಾಯ ಆರೋಗ್ಯ ಕೇಂದ್ರದ ಶವಾಗಾರಕ್ಕೆ ಸ್ಥಳಾಂತರಿಸಿದರು.

ಸಿದ್ದಾಪುರ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ

ನಾಳೆಯಿಂದ ಶ್ರೀ ಭಗವತಿ ದೇವಾಲಯದ ವಾರ್ಷಿಕ ಉತ್ಸವ



ನಾಪೋಕ್ಲು: ಬಲ್ಲಮಾವಟಿ ಗ್ರಾಮದ ಶ್ರೀ ಭಗವತಿ ದೇವಾಲಯದ ಗರ್ಭಗುಡಿ ಹಾಗೂ ಮುಖ ಮಂಟಪ ಕಾಮಗಾರಿ ಸಂಪೂರ್ಣಗೊಂಡಿದ್ದು ಅಷ್ಟಬಂಧ ಬ್ರಹ್ಮಕಲಶೋತ್ಸವ, ದೇವಿಯ ಪುನರ್ ಪ್ರತಿಷ್ಠಾಪನೆ ಹಾಗೂ ವಾರ್ಷಿಕ ಉತ್ಸವ ಮೇ 6 ರಿಂದ 10ರ ವರೆಗೆ ನಡೆಯಲಿದೆ.

ತಂತ್ರಿಗಳಾದ ದಿವಾಕರ ಭಟ್ಟ ನೇತೃತ್ವದಲ್ಲಿ ಮೇ 6ರ ಸಂಜೆ 5.20ಕ್ಕೆ ಕಾರ್ಯಕ್ರಮ ಆರಂಭ. ಮೇ7ರಂದು 101 ತೆಂಗಿನಕಾಯಿ ಗಣಪತಿ ಹೋಮ, ಅಷ್ಟ ದಿಕ್ಪಾಲಕ ಹೋಮ, ಚಂಡಿಕಾ ಹೋಮ ನಡೆಯಲಿದೆ. ಮೇ 8ರ ಬೆಳಿಗ್ಗೆ 6 ಗಂಟೆಗೆ ಗಣಪತಿ ಹೋಮ ಪ್ರತಿಷ್ಠಾ ಹೋಮ, ದೇವಿಯ ಪ್ರತಿಷ್ಠೆ, ಬ್ರಹ್ಮ ಕಳಸ ಅಭಿಷೇಕ ಮಹಾಪೂಜೆ ನಡೆಯಲಿದೆ. ಮೇ 9ರಂದು ಶನಿವಾರ ದೇವಿಯ ಅಮೃತ ಸ್ನಾನ, ನೃತ್ಯ ಬಲಿ ಹಾಗೂ ಮಹಾಪೂಜೆ, ರಾತ್ರಿ ಅನ್ನದಾನ. ಮೇ10 ರಂದು ದೇವಿಯ ಶುದ್ಧ ಕಳಶ ನಡೆಯಲಿದೆ.

ಬಿಜೆಪಿ ಜಯಭೇರಿ: ಕಾರ್ಯಕರ್ತರ ಸಂಭ್ರಮಾಚರಣೆ





ಪಶ್ಚಿಮ ಬಂಗಾಳ, ಪುದುಚೇರಿ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಬಿಜೆಪಿ ಭರ್ಜರಿ ಗೆಲುವು ದಾಖಲಿಸಿದ ಹಿನ್ನೆಲೆಯಲ್ಲಿ ಮಡಿಕೇರಿ, ಗೋಣಿಕೊಪ್ಪದಲ್ಲಿ ಬಿಜೆಪಿ ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು.

ಮಡಿಕೇರಿ,ಮೇ4–ಪಂಚರಾಜ್ಯ ಚುನಾವಣೆಯಲ್ಲಿ ಪಶ್ಚಿಮ ಬಂಗಾಳ, ಪುದುಚೇರಿ ಮತ್ತು ಅಸ್ಸಾಂ ರಾಜ್ಯಗಳಲ್ಲಿ ಬಿಜೆಪಿ ಭರ್ಜರಿ ಗೆಲುವು ದಾಖಲಿಸಿದ ಹಿನ್ನೆಲೆಯಲ್ಲಿ ಜಿಲ್ಲಾ ಬಿಜೆಪಿ ಜಿಲ್ಲೆಯ ವಿವಿಧೆಡೆ ಸಂಭ್ರಮಾಚರಣೆ ನಡೆಸಿತು.

ನಗರದ ಇಂದಿರಾಗಾಂಧಿ ವೃತ್ತದಲ್ಲಿ ಸೇರಿದ ಕಾರ್ಯಕರ್ತರು ಪ್ರಧಾನಿ ಮೋದಿ, ಅಮಿತ್ ಶಾ, ಯೋಗಿ ಆದಿತ್ಯನಾಥ್ ಹಾಗೂ ಬಿಜೆಪಿ ಪರ ಘೋಷಣೆ ಮೊಳಗಿಸಿ, ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಾಚರಣೆ ಮಾಡಿದರು. ಮಾಜಿ ವಿಧಾನ ಪರಿಷತ್ ಸದಸ್ಯ ಸುನೀಲ್ ಸುಬ್ರಮಣಿ, ಪಕ್ಷ ಪ್ರಮುಖರಾದ ಮನು ಮುತ್ತಪ್ಪ, ತಳೂರು ಕಿಶೋರ್ ಕುಮಾರ್, ನಗರ ಸಭಾ ಅಧ್ಯಕ್ಷೆ ಕಲಾವತಿ, ಉಪಾಧ್ಯಕ್ಷ ಮಹೇಶ್ ಜೈನಿ ಸೇರಿದಂತೆ ಸದಸ್ಯರು ಮತ್ತು ಪಕ್ಷದ ಕಾರ್ಯಕರ್ತರು ಹಾಜರಿದ್ದರು.

ಗೋಣಿಕೊಪ್ಪಲು : ಬಿಜೆಪಿ ಶಕ್ತಿ ಕೇಂದ್ರ ವತಿಯಿಂದ ಸಂಭ್ರಮಾಚರಣೆ ನಡೆಯಿತು. ಶಕ್ತಿ ಕೇಂದ್ರದ ಪ್ರಮುಖ್ ಸುರೇಶ್‌ರೈ ನೇತೃತ್ವದಲ್ಲಿ ಪಕ್ಷದ ಪ್ರಮುಖರು ಮತ್ತು ಕಾರ್ಯಕರ್ತರು ಬಸ್ ನಿಲ್ದಾಣದಲ್ಲಿ ಪಟಾಕಿ ಸಿಡಿಸಿ ಸಿಹಿ ಹಂಚುವ ಮೂಲಕ ಸಂಭ್ರಮಾಚರಿಸಿದರು.

ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಗುಮ್ಮಟ್ಟಿರ ಕಿಲನ್ ಗಣಪತಿ ಮಾತನಾಡಿ, ಇದೊಂದು ಐತಿಹಾಸಿಕ ದಾಖಲೆಯಾಗಿದೆ. 15 ವರ್ಷಗಳ ಮಮತಾ ಬ್ಯಾನರ್ಜಿ ಸಾಮ್ರಾಜ್ಯ ಪತನವಾಗಿ ಆ ನೆಲದಲ್ಲಿ ಹಿಂದುತ್ವ ಧ್ವಜ ಹಾರಾಡುತ್ತಿದೆ. ಇದು ದಶಕಗಳ ಕನಸಾಗಿತ್ತು ಎಂದು ಹೇಳಿದರು. ಪ್ರಮುಖರಾದ ಸುಬ್ರಮಣಿ, ಕೋಣಿಯಂಡ ಬೋಜಮ್ಮ, ಚೈತ್ರ, ಚೇತನ್, ಪ್ರಭಾಕರ್ ನೆಲ್ಲಿತ್ತಾಯ, ದೀಪಕ್, ನೂರೇರ ರಂಜಿ, ಸುಬ್ರಮಣಿ, ಸುನೀಲ್‌ರೈ, ಧನಲಕ್ಷ್ಮಿ, ವಿವೇಕ್, ರಾಜೇಶ್.ಕೆ, ಅಖಿಲ್, ಸಾಜಿ ಮತ್ತಿತರರು ಹಾಜರಿದ್ದರು.

ಕುಶಾಲನಗರ : ಬಿಜೆಪಿ ಕಾರ್ಯಕರ್ತರು ಸೋಮವಾರ ಪಟ್ಟಣದಲ್ಲಿ ಸಿಹಿ ಹಂಚಿ ಸಂಭ್ರಮಾ ಚರಣೆ ಮಾಡಿದರು.

ನಗರ ಬಿಜೆಪಿ ಘಟಕದ ಅಧ್ಯಕ್ಷ ಎಂ.ಎಂ.ಚರಣ್ ಹಾಗೂ ಕಾರ್ಯದರ್ಶಿ ಎಚ್.ಎಂ. ಮಧುಸೂದನ್ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರಧಾನಿ ನರೇಂದ್ರ ಮೋದಿ, ಅಮಿತ್ ಷಾ ಪರ ಹಾಗೂ ಪಕ್ಷದ ಪರವಾಗಿ ಜಯಘೋಷ ಮೊಳಗಿಸಿದರು. ಇದೇ ಸಂದರ್ಭ ಎಲ್ಲರಿಗೂ ಸಿಹಿ ವಿತರಣೆ ಮಾಡಿ ಕಾರ್ಯಕರ್ತರು ಸಂಭ್ರಮಿಸಿದರು.

ಈ ಸಂದರ್ಭ ಪಕ್ಷದ ಮುಖಂಡರಾದ ಡಿ.ಕೆ.ತಿಮ್ಮಪ್ಪ, ಎಂ.ಡಿ.ಕೃಷ್ಣಪ್ಪ, ಮನು ನಂಜುಂಡ, ಶಿವಶಂಕರ್,ಶಿವರಾಜ್, ರಾಮಚಂದ್ರ, ಹೇರೂರು ಚಂದ್ರುಭಾಸ್ಕರ್ ನಾಯಕ್, ಅನಿಲ್ ಮತ್ತಿತರರು ಪಾಲ್ಗೊಂಡಿದ್ದರು.

ಸಿಪಿಐಎಂ ಅಧ್ಯಯನ ಕಾರ್ಯಾಗಾರ 2ನೇ ದಿನಕ್ಕೆ

ವಿರಾಜಪೇಟೆ, ಮೇ 4– ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಪಟ್ಟಣದಲ್ಲಿ ಅಂಬೇಡ್ಕರ್ ಭವನದಲ್ಲಿ ಹಮ್ಮಿಕೊಂಡಿರುವ ರಾಜ್ಯ ಮಟ್ಟದ ಅಧ್ಯಯನ ಶಿಬಿರದ ಎರಡನೇ ದಿನದ ಕಾರ್ಯಾಗಾರದಲ್ಲಿ ಆಧುನಿಕ ಕ್ರಾಂತಿಗಳ ಸಂಸ್ಕೃತಿಯ ಇತಿಹಾಸದ ಬಗ್ಗೆ ಯಾದವಶೆಟ್ಟಿ ಹಾಗೂ ವಿದೇಶಾಂಗ ಧೋರಣೆ ವರ್ಗದೃಷ್ಟಿಕೋನದಿಂದ ವಿಶ್ಲೇಷಣೆ ಎಂಬ ವಿಷಯದ ಬಗ್ಗೆ ಕೇಂದ್ರಸಮಿತಿ ಸದಸ್ಯ ಬಿ.ಬಿ.ರಾಘವಲು 5 ಗಂಟೆಗಳ ಕಾಲ ನಡೆಸಿದ ಇಂಗ್ಲೀಷ್‌ನಲ್ಲಿ ನಡೆದ ಉಪನ್ಯಾಸವನ್ನು ಕೃಷ್ಣೆಗೌಡ ಕನ್ನಡಕ್ಕೆ ಅನುವಾದ ಮಾಡಿದರು, ಜಿ.ಎಲ್. ನಾಗರಾಜ್ ಪಕ್ಷದ ಕಾರ್ಯಗಳ ಬಗ್ಗೆ ಮಾಹಿತಿ ನೀಡಿದರು. ವರಲಕ್ಷ್ಮಿ ಅಧ್ಯಯನ ಶಿಬಿರದ ಪ್ರಾಂಶುಪಾಲರಾಗಿ ಭಾಗವಹಿಸಿದ್ದರು.



ಸಿಪಿಐಎಂನ ರಾಜ್ಯ ಮಟ್ಟದ ಅಧ್ಯಯನ ಕಾರ್ಯಾಗಾರದಲ್ಲಿ ಭಾಗವಹಿಸಿರುವ ಶಿಬಿರಾರ್ಥಿಗಳು.

ಉಪ ಚುನಾವಣೆ ಕಾಂಗ್ರೆಸ್ ಜಯಭೇರಿ : ಜಿಲ್ಲೆಯಲ್ಲಿ ಕಾರ್ಯಕರ್ತರ ಸಂಭ್ರಮಾಚರಣೆ







ದಾವಣಗೆರೆ ಮತ್ತು ಬಾಗಲಕೋಟೆ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸಿದ ಹಿನ್ನೆಲೆಯಲ್ಲಿ ಮಡಿಕೇರಿ, ಗೋಣಿಕೊಪ್ಪ, ಕುಶಾಲನಗರದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಂಭ್ರಮಾಚರಣೆ ಆಚರಿಸಿದರು.

ಮಡಿಕೇರಿ,ಮೇ 4–ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಜಯಗಳಿಸಿದ ಹಿನ್ನೆಲೆಯಲ್ಲಿ ಕೊಡಗು ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರು ಜಿಲ್ಲೆಯಲ್ಲಿ ವಿಜಯೋತ್ಸವ ಆಚರಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ತೀತಿರ ಧರ್ಮಜ ಉತ್ತಪ್ಪ ನೇತೃದಲ್ಲಿ ನಗರದ ಇಂದಿರಾ ಗಾಂಧಿ ವೃತ್ತದಲ್ಲಿ ವೃತ್ತದಲ್ಲಿ ಜಮಾಯಿಸಿದ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು.

ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ನೇತೃತ್ವದ ರಾಜ್ಯದ ಕಾಂಗ್ರೆಸ್ ಸರ್ಕಾರದ ಆಡಳಿತವನ್ನು ಜನತೆ ಒಪ್ಪಿದ್ದು ಇದಕ್ಕೆ ಪೂರಕವಾಗಿ ಎರಡೂ ಕ್ಷೇತ್ರದಲ್ಲಿ ಜನತೆ ಕಾಂಗ್ರೆಸ್ ಪಕ್ಷಕ್ಕೆ ಆಶೀರ್ವಾದ ಮಾಡಿದೆ ಎಂದು ಧರ್ಮಜ ಉತ್ತಪ್ಪ ತಿಳಿಸಿದರು.

ಈ ಸಂದರ್ಭ ಪಕ್ಷದ ಮುಖಂಡರಾದ ಟಿ.ಪಿ.ರಮೇಶ್, ತೆನ್ನಿರ ಮೈನಾ,ನಗರ ಸಭಾ ಸದಸ್ಯರುಗಳಾದ ಮಂಡಿರ ಸದಾ ಮುದ್ದಪ್ಪ,ಜಿ.ಸಿ.ಜಗದೀಶ್, ಯಾಕುಬ್ ಪ್ರಮುಖರಾದ ದಿನೇಶ್ ಶೆಟ್ಟಿ, ಲೀಲಾ ಶೇಷಮ್ಮ,ಕವನ್ ಕೊತ್ತೋಳಿ ಮತ್ತಿತರರು ವಿಜಯೋತ್ಸವದಲ್ಲಿ ಭಾಗಿಯಾಗಿದ್ದರು.

ಗೋಣಿಕೊಪ್ಪ : ಬಾಗಲಕೋಟೆ ವಿಧಾನ ಸಭಾ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ನ ಉಮೇಶ್ ಮೇಟಿ, ದಾವಣಗೆರೆ ದಕ್ಷಿಣದಲ್ಲಿ ನಡೆದ ಉಪಚುನಾವಣೆಯಲ್ಲಿ ಸಮರ್ಥ ಶ್ಯಾಮನೂರು ಗೆಲುವು ದಾಖಲಿಸಿರುವುದಕ್ಕೆ ನಗರ ಕಾಂಗ್ರೆಸ್ ಸಂಭ್ರಮಾಚರಣೆ ಆಚರಿಸಿತು. ಕೊಳ್ಳಿಮಾಡ ಅಜಿತ್ ಅಯ್ಯಪ್ಪ, ಮಂಜುಳ.ಎಂ, ಖಾಲೀದ್, ಅಂಕಿತ್, ರಾಜಶೇಖರ್, ನಾರಾಯಣಸ್ವಾಮಿ ನಾಯ್ಡು, ಧನಲಕ್ಷ್ಮಿ ಉಪಸ್ಥಿತರಿದ್ದರು.

ಕುಶಾಲನಗರ: ಪಂಚರಾಜ್ಯಗಳಲ್ಲಿ ನಡೆದ ಚುನಾವಣೆ ಪೈಕಿ ಕೇರಳ ರಾಜ್ಯ ಹಾಗೂ ಕರ್ನಾಟಕದ ಎರಡು ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಪಕ್ಷ ಜಯಗಳಿಸಿದ ಹಿನ್ನೆಲೆಯಲ್ಲಿ ಸೋಮವಾರ ಬ್ಲಾಕ್ ಕಾಂಗ್ರೆಸ್‌ನಿಂದ ಪಟ್ಟಣದಲ್ಲಿ ವಿಜಯೋತ್ಸವ ಆಚರಿಸಲಾಯಿತು. ವಿ.ಪಿ.ಶಶಿಧರ್, ವಿ.ಎಸ್.ಆನಂದಕುಮಾರ್, ವಿ.ಜೆ ನವೀನ್, ಅಜೀಜ್, ದಾಮೋದರ್, ಇರ್ಫಾನ್, ಶಶಿ ಭೀಮಯ್ಯ, ಚಂದ್ರುಮಹದೇವ, ಚಿರಂಜೀವಿ, ಗಯಾಜ್ ಪಾಲ್ಗೊಂಡಿದ್ದರು.

ಸಿಕ್ಕಿದ ಹಣ ಮರಳಿಸಿದ ಕೂಲಿ ಕಾರ್ಮಿಕ



ಮಡಿಕೇರಿ, ಮೇ 4–ಹುಂಡಿಗೆ ಕಾಣಿಕೆ ಹಾಕಲೆಂದು ಹೋಗುತ್ತಿದ್ದ ಭಕ್ತರೊಬ್ಬರು ಕಳೆದುಕೊಂಡಿದ್ದ ಹಣವನ್ನು ಮರಳಿ ಪಡೆದ ದೃಷ್ಟಾಂತವೊಂದು ಪಾಲಿಬೆಟ್ಟದಲ್ಲಿ ನಡೆದಿದೆ.

ಪಾಲಿಬೆಟ್ಟ ದರ್ಗಾದ ಹುಂಡಿಗೆ ಕಾಣಿಕೆ ಹಾಕಲು ಹೋಗಿದ್ದ ವ್ಯಕ್ತಿಯೊಬ್ಬರು ಕಳೆದುಕೊಂಡಿದ್ದ ಹಣವನ್ನು ಮರಳಿ ಪಡೆದುಕೊಂಡ ಘಟನೆಗೆ ಕುಶಾಲನಗರ ಪಟ್ಟಣ ಪೊಲೀಸ್ ಠಾಣೆ ಸಾಕ್ಷಿಯಾಗಿದೆ.

ಪಾಲಿಬೆಟ್ಟದ ಹುಂಡಿ ಗ್ರಾಮದ ಕಾಫಿ ಕ್ಯೂರಿಂಗ್ ವರ್ಕ್ಸ್ ಬಳಿಯ ನಿವಾಸಿ ಸಿ.ಎಂ.ನಿಯಾಸ್(46) ಎಂಬವರು ಪಾಲಿಬೆಟ್ಟ ದರ್ಗಾದ ಹುಂಡಿಗೆ 500 ರೂ. ಮುಖ ಬೆಲೆಯ ಒಂದು ಬಂಡಲ್ ಹಣವನ್ನು ಹಾಕಲು ತೆರಳಿದ್ದರು. ಆದರೆ ಮಾರ್ಗದ ಮಧ್ಯೆ ಹಣದ ಬಂಡಲ್‌ನ್ನು ಕಳೆದುಕೊಂಡಿದ್ದರು.

ಕುಶಾಲನಗರದಲ್ಲಿ ಕೂಲಿ ಕೆಲಸ ಮಾಡಿಕೊಂಡಿರುವ ಎಂ.ಸಂಶುದ್ದೀನ್‌ಗೆ ಈ ಹಣದ ಬಂಡಲ್ ಸಿಕ್ಕಿತ್ತು. ಕೂಡಲೇ ಈ ವಿಚಾರವನ್ನು ತಮ್ಮ ಸ್ನೇಹಿತ ಸಿದ್ದಾಪುರ ಆಟೋ ಚಾಲಕರ ಸಂಘದ ಕಾರ್ಯದರ್ಶಿ ಗಿರೀಶ್‌ಗೆ ತಿಳಿಸಿ ಸಾಮಾಜಿಕ ಜಾಲತಾಣದ ಮೂಲಕ ಪಾಲಿಬೆಟ್ಟ ವ್ಯಾಪ್ತಿಯಲ್ಲಿ ಪ್ರಚಾರ ಮಾಡುವಂತೆ ಮನವಿ ಮಾಡಿದ್ದರು. ಗಿರೀಶ್ ಅವರಿಗೆ ಪಾಲಿಬೆಟ್ಟ ವ್ಯಾಪ್ತಿಯ ಆಟೋ ಚಾಲಕರು ಪರಿಚಯವಿಲ್ಲದ್ದರಿಂದ ಅವರು ಇದನ್ನು ಕೊಡಗು ಜಿಲ್ಲಾ ಆಟೋ ಚಾಲಕ ಮತ್ತು ಮಾಲೀಕರ ಸಂಘದ ವ್ಯಾಟ್ಸ್ ಅಪ್ ಗ್ರೂಪ್‌ಗೆ ಹಾಕಿ ದ್ದರು.

ಈ ಸಂಗತಿ ಸಾಮಾಜಿಕ ಜಾಲತಾಣದ ಮೂಲಕ ಹಣ ಕಳೆದುಕೊಂಡ ಸಿ.ಎಂ. ನಿಯಾಸ್ ಗಮನಕ್ಕೂ ಬಂದಿತು. ಕೂಡಲೇ ಕುಶಾಲನಗರ ಪಟ್ಟಣ ಠಾಣೆಗೆ ತೆರಳಿ ಅಲ್ಲಿನ ವೃತ್ತ ನಿರೀಕ್ಷಕ ಪ್ರದೀಪ್, ಎಎಸ್‌ಐ ನಂದ ಮತ್ತು ಸಿಬ್ಬಂದಿ ಮುಂದೆ ನಡೆದ ವಿಚಾರವನ್ನು ತಿಳಿಸಿದ್ದಾರೆ.

ತದನಂತರ ರಸ್ತೆ ಮಧ್ಯೆ ಸಿಕ್ಕಿದ ಹಣವನ್ನು ಎಂ.ಸಂಶು ದ್ದೀನ್ ಪೊಲೀಸ್ ಅಧಿಕಾರಿಗಳ ಸಮ್ಮುಖದಲ್ಲಿ ಮೂಲ ಮಾಲೀಕರಿಗೆ ಹಸ್ತಾಂತರಿಸುವ ಮೂಲಕ ಮಾನವೀಯತೆ ಮೆರೆದಿದ್ದಾರೆ. ಸಂಶುದ್ದೀನ್ ಪ್ರಾಮಾಣಿಕತೆಗೆ ಪೊಲೀಸ್ ಅಧಿಕಾರಿ, ಸಿಬ್ಬಂದಿಗಳು ಪ್ರಶಂಸೆ ವ್ಯಕ್ತಪಡಿಸಿದರು.

ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಗೆಲುವು

ಚಾ.ನಗರದಲ್ಲಿ ಬಿಜೆಪಿ ವಿಜಯೋತ್ಸವ



ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ಚಾಮರಾಜನಗರದಲ್ಲಿ ಬಿಜೆಪಿ ವತಿಯಿಂದ ವಿಜಯೋತ್ಸವ ಆಚರಿಸಲಾಯಿತು.

ಚಾಮರಾಜನಗರ: ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಬಿಜೆಪಿ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ನಗರದಲ್ಲಿ ಬಿಜೆಪಿ ವತಿಯಿಂದ ವಿಜಯೋತ್ಸವ ಆಚರಣೆ ಮಾಡಲಾಯಿತು.

ನಗರದ ಶ್ರೀಚಾಮರಾಜೇಶ್ವರ ಉದ್ಯಾನವನ ಮುಂಭಾಗದಲ್ಲಿ ಜಮಾಯಿಸಿದ ಬಿಜೆಪಿ ಕಾರ್ಯಕರ್ತರು, ಮುಖಂಡರು ಅಲ್ಲಿಂದ ಮೆರವಣಿಗೆಯಲ್ಲಿ ಭುವನೇಶ್ವರಿ ವೃತ್ತಕ್ಕೆ ತೆರಳಿ ಪಟಾಕಿ ಸಿಡಿಸಿ, ಸಿಹಿ ಹಂಚಿ ಬಿಜೆಪಿ, ನರೇಂದ್ರಮೋದಿ ಪರ ಜೈಕಾರ ಕೂಗಿ ಸಂಭ್ರಮಿಸಿದರು.

ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ವೃಷಬೇಂದ್ರಪ್ಪ ಮಾತನಾಡಿ, ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸುವ ಮೂಲಕ ಅಧಿಕಾರ ಹಿಡಿರುವುದು ತುಂಬಾ ಸಂತಸವಾಗಿದೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಜನಪರ ಆಡಳಿತ ಒಪ್ಪಿ ಜನತೆ ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿ ರಾಜ್ಯಗಳಲ್ಲಿ ಚುನಾವಣೆಯಲ್ಲಿ ಬಿಜೆಪಿಗೆ ಮತ ಹಾಕುವ ಮೂಲಕ ಅಧಿಕಾರಕ್ಕೆ ತಂದಿದ್ದಾರೆ. ಈ ಮೂರು ರಾಜ್ಯ ಫಲಿತಾಂಶ ಕರ್ನಾಟಕ ರಾಜ್ಯದ ಮುಂದಿನ ಚುನಾವಣೆಯ ದಿಕ್ಸೂಚಿಯಾಗಿದೆ ಎಂದರು.

ಯುವ ಮೋರ್ಚಾದ ಅಧ್ಯಕ್ಷ ಸೂರ್ಯಕುಮಾರ್ ಮಾತನಾಡಿ, ದೇಶದ ಜನ ಹಿಂದುತ್ವ ಕಡೆ ಸಾಗುತ್ತಿದ್ದಾರೆ ಎನ್ನುವುದಕ್ಕೆ ಪಂಚರಾಜ್ಯಗಳ ಚುನಾವಣಾ ಫಲಿತಾಂಶ ಒಂದು ಸಾಕ್ಷಿಯಾಗಿದೆ. ಪಶ್ಚಿಮ ಬಂಗಾಳದಲ್ಲಿ ಮಮತ ಬ್ಯಾನರ್ಜಿ ವಿರುದ್ದ ಬಿಜೆಪಿಗೆ ದೊಡ್ಡ ಗೆಲುವು ಆಗಿದೆ ಅದೇ ಅಸ್ಸಾಂ, ಪುದುಚೇರಿಯಲ್ಲಿ ಬಿಜೆಪಿ ಅಧಿಕಾರ ಹಿಡಿದಿದೆ. ತಮಿಳುನಾಡಿನಲ್ಲಿ ಹಿಂದುತ್ವದ ವಿರುದ್ದ ಡಿಎಂಕೆ ಸೋಲಿನ ರುಚಿ ತೋರಿಸಿದ್ದಾರೆ. ದೇಶದ ಜನರು ಸುಭದ್ರ ಆಡಳಿತ, ರಕ್ಷಣೆಗೆ ಹೆಚ್ಚು ಒತ್ತು ನೀಡಿದ್ದಾರೆ ಎಂದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ನಗರ ಮಂಡಲ ಅಧ್ಯಕ್ಷ ಶಿವರಾಜ್, ಗ್ರಾಮಾಂತರ ಮಂಡಲ ಅಧ್ಯಕ್ಷ ಕಾಡಹಳ್ಳಿ ಕುಮಾರ್, ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಎ.ಬಾಬು, ರಾಷ್ಟ್ರೀಯ ಓಬಿಸಿ ಮೋರ್ಚಾದ ಕಾರ್ಯಕಾರಿಣಿ ಸದಸ್ಯ ನೂರೊಂದುಶೆಟ್ಟಿ, ಚೂಡಾ ಮಾಜಿ ಅಧ್ಯಕ್ಷ ಬಾಲಸುಬ್ರಹ್ಮಣ್ಯಂ, ಉಪಾಧ್ಯಕ್ಷ ಶಿವುವಿರಾಟ್, ಸಾಹಿತಿ ಮಂಜುಕೋಡಿಉಗನೆ,

ಎಪಿಎಂಸಿ ಮಾಜಿ ಅಧ್ಯಕ್ಷ ಮನೋಜ್ ಪಟೇಲ್, ಯುವಮೋರ್ಚಾದ ಪ್ರಧಾನ ಕಾರ್ಯದರ್ಶಿ ಆನಂದ್ ಭಗೀರಥ, ಬಂಗಾರನಾಯಕ, ಶಿವಣ್ಣ, ಮಂಜು, ಕೂಸಣ್ಣ, ಮಹೇಶ್, ಕೇಬಲ್ ರಂಗಸ್ವಾಮಿ, ಶೇಷಪ್ಪಾ ಪಾಸ್ವಾನ್, ವಿ.ಶ್ರೀನಿವಾಸಪ್ರಸಾದ್, ಸೋಮವಾರಪೇಟೆ ಗುರು, ಪೋಟೋಕೃಷ್ಣ, ಭೋಗಾಪುರ ಕುಮಾರ್, ಕೃಷ್ಣಪ್ಪ, ಪ್ರವೀಣ್ ನಾಯಕ್, ಕೃಷ್ಣಕುಮಾರ್, ಚಂದ್ರಶೇಖರ್, ಪರಶಿವು ಹಾಜರಿದ್ದರು.

ಅಕ್ಕ ಕೆಫೆಯಿಂದ ಮಹಿಳೆಯರ ಸಬಲೀಕರಣ



ಅಕ್ಕ ಕೆಫೆ ಉದ್ಘಾಟಿಸುತ್ತಿರುವ ಸಂಸದ ಸುನೀಲ್ ಬೋಸ್.

ಗುಂಡ್ಲುಪೇಟೆ, ಮೇ 4– ಮಹಿಳೆಯರೇ ತಿಂಡಿ ಊಟ ತಯಾರಿಸಿ ವಿಶೇಷ ದರದಲ್ಲಿ ಗ್ರಾಹಕರಿಗೆ ನೀಡುವ ಅಕ್ಕ ಕೆಫೆಯಿಂದ ಮಹಿಳಾ ಸಬಲೀಕರಣ ಮತ್ತು ಹಣಕಾಸು ಬಲವರ್ಧನೆಗೆ ಸಹಾಯಕವಾಗಲಿದೆ ಎಂದು ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ತಿಳಿಸಿದರು.

ತೆರಕಣಾಂಬಿಯಲ್ಲಿಂದು ಅಕ್ಕ ಕೆಫೆ ಹಾಗೂ ತೆರಕಣಾಂಬಿ ಹೊರವಲಯ ಹಾಗೂ ಕೊಳ್ಳೇಗಾಲ ತಾಲೂಕಿನ ಕೊಂಗರಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ 176.89 ಲಕ್ಷ ರೂ. ವೆಚ್ಚದಲ್ಲಿ ನಿರ್ಮಾಣ ಮಾಡಲಾಗಿರುವ ಮಲತ್ಯಾಜ್ಯ ನಿರ್ವಹಣಾ ಘಟಕವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯ ಸರ್ಕಾರವು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ರಾಷ್ಟ್ರೀಯ ಜೀವನೋಪಾಯ ಮಿಷನ್ (ಎನ್.ಆರ್.ಎಲ್.ಎಂ) ಅಡಿಯಲ್ಲಿ ಮಹಿಳೆಯರೇ ಸಂಪೂರ್ಣವಾಗಿ ನಿರ್ವಹಿಸುವ ಅಕ್ಕ ಕೆಫೆಗಳನ್ನು ಪ್ರಾರಂಭಿಸುವ ಯೋಜನೆ ರೂಪಿಸಿದೆ. ಮಹಿಳೆಯರೇ ಸಂಪೂರ್ಣವಾಗಿ ಅಡುಗೆ ತಯಾರಿಸಿ ಗ್ರಾಹಕರಿಗೆ ಮಾರಾಟ ಮಾಡುವ ಅಕ್ಕ ಕೆಫೆ ಉದ್ದೇಶ ಮಹಿಳೆಯರನ್ನು ಆರ್ಥಿಕವಾಗಿ ಸಧೃಡಗೊಳಿಸುವುದಾಗಿದೆ ಎಂದು ಲೋಕಸಭಾ ಸದಸ್ಯರು ಹೇಳಿದರು.

ಪ್ರಸ್ತುತ ತೆರಕಣಾಂಬಿಯಲ್ಲಿ ಆರಂಭವಾಗಿರುವ ಅಕ್ಕ ಕೆಫೆಯನ್ನು ಮಲೆ ಮಹದೇಶ್ವರಬೆಟ್ಟದಲ್ಲಿಯೂ ತೆರೆಯುವ ಉದ್ದೇಶವಿದ್ದು, ತಾಲೂಕುಗಳಲ್ಲಿಯೂ ಆರಂಭವಾದರೆ ಹೆಚ್ಚಿನ ವಹಿವಾಟು ನಡೆಯಲಿದೆ. ಅನ್ನ ಹಾಕುವ ಕಾಯಕ ಶ್ರೇಷ್ಠವಾದದ್ದು, ಮಹಿಳೆಯರಿಂದಲೇ ಎಲ್ಲವೂ ನಿರ್ವಹಣೆಯಾಗುವ ಅಕ್ಕ ಕೆಫೆಯಲ್ಲಿ ಶುಚಿ ರುಚಿಗೆ ಹೆಚ್ಚಿನ ಆದ್ಯತೆ ನೀಡುವ ಜೊತೆಗೆ ಸ್ವಚ್ಚತೆ ಕಾಪಾಡಿಕೊಳ್ಳಬೇಕು. ಉತ್ತಮ ಸೇವೆ ನೀಡುವ ಮೂಲಕ ಮಾದರಿಯಾಗಿ ಅಕ್ಕ ಕೆಫೆಯನ್ನು ನಡೆಸಿಕೊಂಡು ಹೋಗಬೇಕು ಎಂದರು.

ಅಧ್ಯಕ್ಷತೆ ವಹಿಸಿ ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ಮಾತನಾಡಿದರು. ಇದೇ ವೇಳೆ ಜಲ ಅರ್ಪಣ್ ದಿವಸ್ ಅಂಗವಾಗಿ ಜಲ ಜೀವನ್ ಮಿಷನ್ ಯೋಜನೆಯಡಿ ಶೇ.100ರಷ್ಟು ನಳ ಸಂಪರ್ಕ ಹೊಂದಿ ದಿನದ 24 ಗಂಟೆ ಶುದ್ಧ ಕುಡಿಯುವ ನೀರು ಪೂರೈಸುತ್ತಿರುವ ಬಲಚವಾಡಿ ಗ್ರಾಮವನ್ನು 24*7 ನೀರು ಸರಬರಾಜು ಗ್ರಾಮವೆಂದು ಘೋಷಿಸಿ ಗ್ರಾಮ ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿಗೆ ಪ್ರಮಾಣ ಪತ್ರವನ್ನು ಲೋಕಸಭಾ ಸದಸ್ಯರು, ಶಾಸಕರು ವಿತರಿಸಿದರು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ತಾಲೂಕು ಗ್ಯಾರಂಟಿ ಯೋಜನೆಗಳ ಅಧ್ಯಕ್ಷ ಉಮಾಪತಿ, ಜಿಪಂ ಸಿಇಓ ಅಧಿಕಾರಿ ಮೋನಾ ರೋತ್, ಉಪ ಕಾರ್ಯದರ್ಶಿ ಶೃತಿ.ಡಿ.ಸಿ, ತಾಪಂ ಇಓ ಅಧಿಕಾರಿಗಳಾದ ಹೆಚ್.ಎ. ಷಣ್ಮುಗಂ, ಗುರುಶಾಂತಪ್ಪ ಬೆಳ್ಳುಂಡಿ, ನಂಜುಂಡಪ್ರಸಾದ್, ನಂಜಪ್ಪ ಇತರರಿದ್ದರು.

ಸಿಲಿಂಡರ್ ಬೆಲೆ ಏರಿಕೆ ಖಂಡಿಸಿ ಕರ್ನಾಟಕ ಸೇನಾ ಪಡೆ ಪ್ರತಿಭಟನೆ

ಭುವನೇಶ್ವರಿ ವೃತ್ತದಲ್ಲಿ ಖಾಲಿ ಸಿಲಿಂಡರ್ ಪ್ರದರ್ಶಿಸಿ ಕೇಂದ್ರ ಸರ್ಕಾರದ ವಿರುದ್ಧ ಅಕ್ರೋಶ



ಸಿಲಿಂಡರ್ ಬೆಲೆ ಏರಿಕೆ ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.


ಚಾಮರಾಜನಗರ: ಸಿಲಿಂಡರ್ ಬೆಲೆ ಏರಿಕೆ ಖಂಡಿಸಿ ಕರ್ನಾಟಕ ಸೇನಾಪಡೆ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಭುವನೇಶ್ವರಿ ವೃತ್ತದಲ್ಲಿ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಅವರ ನೇತೃತ್ವದಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ರಾಷ್ಟ್ರೀಯ ಹೆದ್ದಾರಿಯಲ್ಲಿ ಖಾಲಿ ಸಿಲಿಂಡರ್ ಪ್ರದರ್ಶಿಸಿ ಕೇಂದ್ರ ಸರ್ಕಾರದ ವಿರುದ್ಧ ಘೋಷಣೆ ಅಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಶ್ರೀನಿವಾಸಗೌಡ ಮಾತನಾಡಿ, ಕೇಂದ್ರ ಸರ್ಕಾರ ವಾಣಿಜ್ಯ ಗ್ಯಾಸ್ ದರವನ್ನು 993 ರೂ. ಹೆಚ್ಚಳ ಮಾಡಿದ್ದು, ಪದೇಪದೇ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುತ್ತಿರುವುದು ಅತ್ಯಂತ ಖಂಡನೀಯವಾದದ್ದು ಕೂಡಲೇ ದರ ಹಿಂಪಡೆಯಬೇಕು ಎಂದು ಕೇಂದ್ರ ಸರ್ಕಾರ ವನ್ನು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಶಾ.ಮುರಳಿ, ಕಂಡಕ್ಟರ್ ಚಾ.ಸಿ.ಸೋಮನಾಯಕ, ಪ್ಯಾದಹುಂಡಿ ರಾಜು, ಮಹೇಶ್ ಗೌಡ, ಚಾ.ವೆಂ.ರಾಜ್‌ಗೋಪಾಲ್, ಆಟೋ ಲಿಂಗರಾಜು, ಅಮಚವಾಡಿ ರಾಜು, ರಾಚಪ್ಪ ಮುತ್ತಿಗೆ ಗೋವಿಂದರಾಜು, ಹೊಮ್ಮ ಲೋಕೇಶ್, ಮಂಗಲ ಹೊಸೂರು ಶಿವಣ್ಣ ನಂಜುಂಡಿ, ನಾಗರಾಜಶೆಟ್ಟಿ ನಂಜುಂಡಶೆಟ್ಟಿ ಆಟೋ ಸುರೇಶ್ ಇದ್ದರು.

ಇಂದು ಶ್ರೀಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿ ಪ್ರದಾನ



ಚಾಮರಾಜನಗರ: ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠವು ಚಾಮರಾಜನಗರ ಜಿಲ್ಲೆಯಲ್ಲಿ ಅತ್ಯುತ್ತಮ ಸೇವೆ ಸಲ್ಲಿಸಿದ ಹಿರಿಯ ಪತ್ರಕರ್ತರಿಗೆ ನೀಡುವ ಶ್ರೀಶಿವರಾತ್ರೀಶ್ವರ ಮಾಧ್ಯಮ ಪ್ರಶಸ್ತಿಗೆ ಜಿಲ್ಲೆಯ ಹಿರಿಯ ಪತ್ರಕರ್ತರಾದ ಪ್ರಕಾಶ್ ಬೆಲ್ಲದ್ ಆಯ್ಕೆಯಾಗಿದ್ದಾರೆ.

ನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸೆಮಿನಾರ್ ಹಾಲ್‌ನಲ್ಲಿ ಮೇ 5ರಂದು ಬೆಳಗ್ಗೆ 11 ಗಂಟೆಗೆ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ.

ಸಮಾರಂಭವನ್ನು ಮೈಸೂರಿನ ಹಿರಿಯ ಪತ್ರಕರ್ತರಾದ ಸಿ.ಕೆ. ಮಹೇಂದ್ರ ಉದ್ಘಾಟಿಸಲಿದ್ದು, ಶಾಸಕ ಸಿ.ಪುಟ್ಟರಂಗ ಶೆಟ್ಟಿ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಸಂಘದ ಜಿಲ್ಲಾಧ್ಯಕ್ಷರಾದ ಆರ್.ಎನ್. ಸಿದ್ದಲಿಂಗಸ್ವಾಮಿ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜೆಎಸ್‌ಎಸ್ ಮಹಾವಿದ್ಯಾಪೀಠದ ತೋಟಗಾರಿಕೆ ವಿಭಾಗದ ನಿರ್ದೇಶಕ ಎನ್.ಎಂ. ಶಿವಶಂಕರಪ್ಪ ಭಾಗವಹಿಸುವರು.

ಜಿಂಕೆ ಮಾಂಸ ಸಾಗಿಸುತ್ತಿದ್ದವನ ಬಂಧನ



ಆರೋಪಿಯನ್ನು ಬಂಧಿಸಿರುವ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ಸಿಬ್ಬಂದಿ.

ಹನೂರು: ಜಿಂಕೆ ಬೇಟೆಯಾಡಿ ಮಾಂಸವನ್ನು ಬೈಕ್‌ನಲ್ಲಿ ಸಾಗಿಸುತ್ತಿದ್ದ ವೇಳೆ ಅರಣ್ಯ ಇಲಾಖೆಯ ಅಧಿಕಾರಿಗಳು ದಾಳಿ ನಡೆಸಿ ವ್ಯಕ್ತಿಯೋರ್ವನನ್ನು ಬಂಧಿಸಿರುವ ಘಟನೆ ತಾಲೂಕಿನ ಜಲ್ಲಿಪಾಳ್ಯ ಗ್ರಾಮದ ಬಳಿ ನಡೆದಿದೆ.

ತಾಲೂಕಿನ ಜಲ್ಲಿಪಾಳ್ಯ ಗ್ರಾಮದ ಕನಕರಾಜು(46) ಬಂಧಿತ ಆರೋಪಿ. ಈತ ತಮಿಳುನಾಡು, ಕರ್ನಾಟಕ ಗಡಿ ಪ್ರದೇಶದ ಅರಣ್ಯದಲ್ಲಿ ಜಿಂಕೆ ಭೇಟೆಯಾಡಿ ಅದರ ಮಾಂಸವನ್ನು ಬೈಕ್‌ನಲ್ಲಿ ಸಾಗಣೆ ಮಾಡುತ್ತಿರುವ ಕುರಿತು ಖಚಿತ ಮಾಹಿತಿ ಮೇರೆಗೆ ಹೂಗ್ಯಂ ವಲಯ ಅರಣ್ಯಾಧಿಕಾರಿಗಳ ತಂಡ ದಾಳಿ ನಡೆಸಿದ್ದು ಪರಿಶೀಲನೆ ಮಾಡಿದ ವೇಳೆ ಜಿಂಕೆ ಮಾಂಸ ಕಂಡು ಬಂದಿದ್ದು ಕೂಡಲೇ ಕನಕರಾಜು ಎಂಬಾತನನ್ನು ಬಂಧಿಸಿದ್ದು ಆತನಿಂದ ಜಿಂಕೆ ಮಾಂಸ ಹಾಗೂ ಬೈಕ್ ಅನ್ನು ವಶಪಡಿಸಿಕೊಳ್ಳಲಾಗಿದೆ.

ಮತ್ತಿಬ್ಬರು ಪರಾರಿ: ಪ್ರಕರಣದಲ್ಲಿ ಭಾಗಿಯಾಗಿದ್ದ ಜಲ್ಲಿಪಾಳ್ಯ ಗ್ರಾಮದ ಮಾರಿಕಣ್ಣು ಹಾಗೂ ಪೇರಿಸ್ವಾಮಿ ಸ್ಥಳದಿಂದ ಪರಾರಿಯಾಗಿದ್ದು ಅವರ ಪತ್ತೆಗಾಗಿ ಅರಣ್ಯ ಇಲಾಖೆ ಅಧಿಕಾರಿಗಳು ಬಲೆ ಬೀಸಿದ್ದಾರೆ. ದಾಳಿಯಲ್ಲಿ ಹೂಗ್ಯಂ ವಲಯ ಅರಣ್ಯಾಧಿಕಾರಿ ಜಿತೇಂದ್ರ, ಉಪ ವಲಯ ಅರಣ್ಯಾಧಿಕಾರಿಗಳಾದ ಗಿರೀಶ್, ಶ್ರೀಧರ್, ಅರಣ್ಯ ರಕ್ಷಕರಾದ ಪುಂಡಲೀಕ, ಅನಿಲ್, ಶರವಣ, ಪೆರುಮಾಳ್, ರಾಜು ಭಾಗವಹಿಸಿದ್ದರು.

ಮಹದೇವಸ್ವಾಮಿಗೆ ಪತ್ರಕರ್ತರಿಂದ ಶ್ರದ್ಧಾಂಜಲಿ



ಚಾಮರಾಜನಗರ: ಪತ್ರಿಕೆಯ ಪುಟ ವಿನ್ಯಾಸಕ ಪಿ.ಮಹದೇವಸ್ವಾಮಿ ನಿಧನ ಹಿನ್ನೆಲೆಯಲ್ಲಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಸಭಾಂಗಣದಲ್ಲಿ ಪಿ. ಮಹದೇವಸ್ವಾಮಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿ ಬಳಿಕ ಮೌನಾಚರಿಸಲಾಯಿತು. ಸಂಘದ ಜಿಲ್ಲಾಧ್ಯಕ್ಷ ಆರ್.ಎನ್. ಸಿದ್ದಲಿಂಗಸ್ವಾಮಿ ಮಾತನಾಡಿ, ಮಹದೇವಸ್ವಾಮಿ ಅವರು 12 ವರ್ಷಗಳಿಂದಲೂ ಗೊರುಕನ ಪತ್ರಿಕೆಯಲ್ಲಿ ಪುಟ ವಿನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಅವರ ಅಕಾಲಿಕ ನಿಧನದಿಂದ ತುಂಬಲಾರದ ನಷ್ಟ ಉಂಟಾಗಿದ್ದು ಅವರ ಕುಟುಂಬಕ್ಕೆ ದುಃಖ ಭರಿಸುವ ಶಕ್ತಿಯನ್ನು ಆ ದೇವರು ನೀಡಲಿ ಎಂದರು.

ಈ ವೇಳೆ ಸಂಘದ ಪ್ರಧಾನ ಕಾರ್ಯದರ್ಶಿ ಲಕ್ಕೂರು ಪ್ರಸಾದ್, ಪತ್ರಕರ್ತರಾದ ಎಸ್.ಎಂ. ನಂದೀಶ್, ಫಾಲ ಲೋಚನಾ ಆರಾಧ್ಯ, ಲಿಂಗಪ್ಪ, ಬದನ ಗುಪ್ಪೆ ಮಲ್ಲಣ್ಣ, ಬಸವಣ್ಣ, ಚಂದ್ರಶೇಖರ್, ನಂಜುಂಡ ನಾಯಕ, ವಿಜಯ್, ಬಸವರಾಜು, ರವಿ ಕುಮಾರ್, ಮಂಜುಕುಮಾರ್, ಚರಣ್ ಇದ್ದರು.

ಕಿರುತೆರೆಯಿಂದ ಅಧಿಕಾರದ ಗದ್ದುಗೆವರೆಗೆ

ದಳಪತಿಯದ್ದು ಬಹುತೇಕ ವಿಜಯದ ಹಾದಿ



ಚೆನ್ನೈ: ದಳಪತಿ ವಿಜಯ್ ಅವರು ಸಿನಿಮಾ ನಟರಾಗಿ ಉತ್ತುಂಗದಲ್ಲಿರುವಾಗಲೇ, ಸಿನಿಮಾ ಕ್ಷೇತ್ರದಿಂದ ಹಿಂದೆ ಸರಿದು, ಪೂರ್ಣಪ್ರಮಾಣದ ರಾಜಕಾರಣಿ ಆಗಿದ್ದಾರೆ. ಮಾತ್ರವಲ್ಲ, ತಮಿಳು ವೆಟ್ರಿ ಕಳಗಂ (ಟಿವಿಕೆ) ಪಕ್ಷ ಸ್ಥಾಪಿಸಿ, ತಮಿಳುನಾಡು ವಿಧಾನಸಭೆಯಲ್ಲಿ ಅತಿ ದೊಡ್ಡ ಪಕ್ಷವನ್ನಾಗಿಸಿದ್ದಾರೆ. ಆ ಮೂಲಕ ಸರ್ಕಾರ ರಚಿಸಿ, ಸಿಎಂ ಸ್ಥಾನದ ಆಕಾಂಕ್ಷಿಯಾಗಿದ್ದಾರೆ.

ಜೋಸೆಫ್ ವಿಜಯ್ ಚಂದ್ರಶೇಖರ್ ಅವರು 1974ರ ಜೂನ್ 22 ರಂದು ತಮಿಳುನಾಡಿನ ಚೆನ್ನೈನಲ್ಲಿ ಜನಿಸಿದರು. ಅವರ ತಂದೆ ಎಸ್.ಎ. ಚಂದ್ರಶೇಖರ್ ಅವರು ಪ್ರಸಿದ್ಧ ತಮಿಳು ಸಿನಿಮಾ ನಿರ್ದೇಶಕರು ಮತ್ತು ತಾಯಿ ಶೋಭಾ ಚಂದ್ರಶೇಖರ್ ಪ್ಲೇಬ್ಯಾಕ್ ಸಿಂಗರ್ ಆಗಿದ್ದರು.

ಬಾಲ್ಯದಿಂದಲೇ ಸಿನಿಮಾ ವಾತಾವರಣದಲ್ಲಿ ಬೆಳೆದ ವಿಜಯ್ ಅವರು ತಮ್ಮ 10ನೇ ವಯಸ್ಸಿನಲ್ಲಿ ತಂದೆಯ ನಿರ್ದೇಶನದ ವೇತ್ರಿ (1984) ಚಿತ್ರದ ಮೂಲಕ ಬಾಲ ನಟನಾಗಿ ಚಿತ್ರರಂಗಕ್ಕೆ ಪದಾರ್ಪಣೆ ಮಾಡಿದ್ದರು.

ಅವರ ತಂದೆ ನಿರ್ದೇಶನದ ಕುಟುಂಬಂ, ನಾನ್ ಸಿಗಪ್ಪು ಮನಿತನ್ ಮುಂತಾದವುಗಳಲ್ಲಿ ಬಾಲ ನಟನಾಗಿ ಕಾಣಿಸಿಕೊಂಡರು. ಲೊಯೋಲಾ ಕಾಲೇಜಿನಲ್ಲಿ ವಿಷುವಲ್ ಕಮ್ಯುನಿಕೇಷನ್ ಅಧ್ಯಯನ ಮಾಡುತ್ತಿದ್ದ ವಿಜಯ್ ಅವರು ಸಿನಿಮಾ ಪ್ರವೇಶಕ್ಕಾಗಿ ಅಧ್ಯಯನ ಬಿಟ್ಟರು.

1992ರಲ್ಲಿ ತಂದೆಯ ನಿರ್ದೇಶನದ ನಾಳೈಯ ತೀರ್ಪು ಚಿತ್ರದ ಮೂಲಕ ನಾಯಕನಾಗಿ ಪಾದಾರ್ಪಣೆ ಮಾಡಿದರು. ಆರಂಭದಲ್ಲಿ ಹಲವು ಚಿತ್ರಗಳು ಸಾಧಾರಣ ಯಶಸ್ಸು ಕಂಡವು. ಲವ್ ಟುಡೇ, ಕಾಧಲುಕ್ಕು ಮರಿಯಾಧೈ, ಥುಲ್ಲಾತ ಮನಮುಂ ಥುಲ್ಲುಂ ಮುಂತಾದ ಚಿತ್ರಗಳು ಅವರ ಜನಪ್ರಿಯತೆ ಹೆಚ್ಚಿಸಿದವು.

2000ನೇ ದಶಕದಲ್ಲಿ ಘಿಲ್ಲಿ, ಪೋಕ್ಕಿರಿ, ತಿರುಮಲೈ ಮುಂತಾದ ಆಕ್ಷನ್ ಚಿತ್ರಗಳು ಅವರನ್ನು ಮಾಸ್ ಹೀರೊ ಆಗಿ ಮಾರ್ಪಡಿಸಿದವು. 2010ರ ನಂತರ ಥುಪ್ಪಾಕ್ಕಿ, ಕತ್ತಿ, ಮೆರ್ಸಲ್, ಸರ್ಕಾರ್, ಮಾಸ್ಟರ್, ಲಿಯೋ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಮ್ ಮುಂತಾದ ಚಿತ್ರಗಳು ಬ್ಲಾಕ್‌ಬಸ್ಟರ್ ಯಶಸ್ಸು ನೀಡಿದವು. ಅವರ ಕೊನೆಯ ಸಿನಿಮಾ ಜನನಾಯಗನ್ ಇನ್ನಷ್ಟೇ ಬಿಡುಗಡೆಯಾಗಬೇಕಿದೆ.

ಜನ ನಾಯಗನ್: ನಟ ವಿಜಯ್ ಅವರ ಬಹು ನಿರೀಕ್ಷಿತ ಸಿನಿಮಾ ಜನನಾಯಗನ್ 2026ರಲ್ಲಿ ತೆರೆ ಕಾಣಲಿದೆ. ಈ ಸಿನಿಮಾ ರಾಜಕೀಯ, ಥ್ರಿಲ್ಲರ್ ಕಥೆ ಹೊಂದಿದ್ದು, ದಳಪತಿ ವಿಜಯ್ ಪೂರ್ಣಾವಧಿ ರಾಜಕೀಯ ಪ್ರವೇಶ ಮಾಡಿರುವುದರಿಂದ, ಇದು ಅವರ ಕೊನೆಯ ಚಿತ್ರವಾಗಲಿದೆ.

ಅವರು 69ಕ್ಕೂ ಅಧಿಕ ಸಿನಿಮಾಗಳಲ್ಲಿ ನಾಯಕನಾಗಿ ನಟಿಸಿರುವ ಅವರು ತಮಿಳು ಸಿನಿಮಾ ರಂಗದಲ್ಲಿ ಅತೀ ಹೆಚ್ಚು ಸಂಭಾವನೆ ಪಡೆಯುವ ನಟರಲ್ಲಿ ಒಬ್ಬರಾಗಿದ್ದಾರೆ. ಅಭಿಮಾನಿಗಳು ಅವರನ್ನು 'ದಳಪತಿ' ಎಂದು ಕರೆಯುತ್ತಾರೆ.

2024ರ ಫೆಬ್ರವರಿ 2ರಂದು ತಮಿಳಗ ವೆಟ್ರಿ ಕಳಗಂ ಪಕ್ಷವನ್ನು ಸ್ಥಾಪಿಸಿದರು. ಸಿನಿಮಾ ರಂಗದಿಂದ ರಾಜಕೀಯಕ್ಕೆ ಪ್ರವೇಶಿಸಿದ ಅವರು ಸದ್ಯ ನಡೆದ ಚುನಾವಣೆಯಲ್ಲಿ ಎಲ್ಲಾ ಕ್ಷೇತ್ರಗಳಿಂದಲೂ ಅಭ್ಯರ್ಥಿಗಳನ್ನು ಕಣ ಕ್ಕಿಳಿಸಿ, 107ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದೆ.

1999ರಲ್ಲಿ ಸಂಗೀತ ಸೊರ್ಣಾಲಿಗಮ್ ಎಂಬುವವರನ್ನು ವಿವಾಹವಾದರು. ಅವರಿಗೆ, ಜಯಂತ್ ಮತ್ತು ಸಂಧ್ಯಾ ಎಂಬ ಇಬ್ಬರು ಮಕ್ಕಳಿದ್ದಾರೆ. ಸದ್ಯ, ತಮಿಳುನಾಡು ಚುನಾವಣೆಯಲ್ಲಿ ಭಾರೀ ಯಶಸ್ಸು ಸಾಧಿಸಿರುವ ಅವರು ಮುಖ್ಯಮಂತ್ರಿ ಸ್ಥಾನದ ಪ್ರಮುಖ ಅಭ್ಯರ್ಥಿಯಾಗಿದ್ದಾರೆ.

ವಿಜಯ್‌ಗೆ ಶುಭಹಾರೈಸಿದ ರಾಹುಲ್ ಗಾಂಧಿ

ನವದೆಹಲಿ: ತಮಿಳುನಾಡಿನಲ್ಲಿ ವಿಜಯ್ ನೇತೃತ್ವದ ಟಿವಿಕೆ ಪಕ್ಷ ಅಭೂತಪೂರ್ವ ಗೆಲುವು ಸಾಧಿಸಿದ ಹಿನ್ನೆಲೆ ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ವಿಜಯ್ ಅವರಿಗೆ ಶುಭಹಾರೈಸಿದ್ದಾರೆ.




ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ ಅವರು, ನಾನು ತಿರು ವಿಜಯ್ ಅವರೊಂದಿಗೆ ಮಾತನಾಡಿ ಟಿವಿಕೆಯ ಅದ್ಭುತ ಫಲಿತಾಂಶಕ್ಕಾಗಿ ಅವರನ್ನು ಅಭಿನಂದಿಸಿದೆ. ತಮಿಳುನಾಡು ಮತ್ತು ಪುದುಚೇರಿಯ ಕಾಂಗ್ರೆಸ್ ಕಾರ್ಯಕರ್ತರ ಕಠಿಣ ಪರಿಶ್ರಮ ಮತ್ತು ಬೆಂಬಲಕ್ಕೆ ನಾನು ಹೃತ್ಪೂರ್ವಕ ಧನ್ಯವಾದ ಸಲ್ಲಿಸುತ್ತೇನೆ. ಕಾಂಗ್ರೆಸ್ ಪಕ್ಷವು ತಮಿಳುನಾಡು ಮತ್ತು ಪುದುಚೇರಿಯ ಜನರನ್ನು ರಕ್ಷಿಸುವುದನ್ನು ಮತ್ತು ಸೇವೆ ಮಾಡುವುದನ್ನು ಮುಂದುವರಿಸುತ್ತದೆ ಎಂದು ಪುನರುಚ್ಚರಿಸಿದ್ದಾರೆ.

ಇನ್ನು ಪಂಚರಾಜ್ಯಗಳ ಫಲಿತಾಂಶದ ಕುರಿತು ರಾಹುಲ್ ಗಾಂಧಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ತಮಿಳುನಾಡು ಸಿಎಂ ಎಂಕೆ ಸ್ಟಾಲಿನ್ ಹಾಗೂ ಟಿವಿಕೆ ಪಕ್ಷದ ವಿಜಯ್ ಅವರೊಂದಿಗೆ ಮಾತನಾಡಿದ್ದಾರೆ ಎಂದು ಕಾಂಗ್ರೆಸ್ ನಾಯಕ ಜೈರಾಮ್ ರಮೇಶ್ ತಿಳಿಸಿದ್ದಾರೆ.

ಗೆಲುವಿನ ಬಗ್ಗೆ ನನ್ನ ಮಗನಿಗೆ ಯಾವ ಅನುಮಾನವೂ ಇರಲಿಲ್ಲ

ವಿಜಯ್ ತಂದೆ ಚಂದ್ರಶೇಖರ್ ವಿಶ್ವಾಸದ ನುಡಿ

ಚೆನ್ನೈ: ವಿಜಯ್‌ಗೆ ಟಿವಿಕೆ ಪಕ್ಷದ ಗೆಲುವಿನ ಬಗ್ಗೆ 1% ಅನುಮಾನ ಕೂಡ ಇರಲಿಲ್ಲ ಎಂದು ಅವರ



ತಂದೆ ಎಸ್.ಎ ಚಂದ್ರಶೇಖರ್ ಹೇಳಿದರು. ಟಿವಿಕೆ ಪಕ್ಷ ಮುನ್ನಡೆ ಸಾಧಿಸಿದ್ದರ ಬಗ್ಗೆ ಅವರು ಮಾಧ್ಯಮಗಳ ಜೊತೆ ಮಾತನಾಡಿದರು. ಈ ವೇಳೆ, ಒಬ್ಬ ತಂದೆಯಾಗಿ ನನಗೆ ತುಂಬಾ ಹೆಮ್ಮೆ ಮತ್ತು ಸಂತೋಷವಾಗಿದೆ. ನಾನು ಕಳೆದ ಎರಡು ವರ್ಷಗಳಿಂದ ನನ್ನ ಮಗನ ಆತ್ಮವಿಶ್ವಾಸವನ್ನು ನೋಡುತ್ತಿದ್ದೇನೆ. ನಾನು ಅವನಿಗೆ ಶುಭ ಹಾರೈಸುತ್ತೇನೆ. ಇನ್ನೂ, ಇದೇ ವೇಳೆ ವಿಜಯ್ ನಾನು ತಮಿಳುನಾಡಿನ ಮುಖ್ಯಮಂತ್ರಿಯಾಗುತ್ತೇನೆ ಎಂದು ಹೇಳಿದ್ದನ್ನು ಅವರು ನೆನಪಿಸಿಕೊಂಡರು.

ಅವನಿಗೆ ಗೆಲುವಿನ ಬಗ್ಗೆ ಯಾವ ಅನುಮಾನ ಇರಲಿಲ್ಲ. ನಾನು ನನ್ನ ಸ್ವಂತ ಕಾಲುಗಳ ಮೇಲೆ ನಿಲ್ಲುತ್ತೇನೆ. ಯಾವುದೇ ಮೈತ್ರಿಯನ್ನೂ ಮಾಡಿಕೊಳ್ಳುವುದಿಲ್ಲ ಎಂದು ಹೇಳಿದ್ದ. ಈ ಗೆಲುವಿನಿಂದ ತಮಿಳುನಾಡಿನ ಜನರಿಗೆ ಒಳ್ಳೆಯದಾಗಲಿದೆ. ಖಂಡಿತ, ಇದು ಐತಿಹಾಸಿಕ ಯಶಸ್ಸು ಎಂದು ನಾನು ಭಾವಿಸುತ್ತೇನೆ.

ವಿಜಯ್ ಕಳೆದ 30 ವರ್ಷಗಳಲ್ಲಿ, ಸಮಾಜಕ್ಕಾಗಿ, ತಮಿಳು ಜನರಿಗಾಗಿ ಏನಾದರೂ ಒಳ್ಳೆಯದು ಮಾಡಬೇಕೆಂದು ಯೋಚಿಸುತ್ತಿದ್ದ. ನಿಧಾನವಾಗಿ ಆ ದಾರಿಯಲ್ಲಿ ಸಾಗಿದ್ದಾನೆ. ವಿಜಯ್ ತಮಿಳುನಾಡಿನ ಮುಖ್ಯಮಂತ್ರಿಯಾಗಲಿದ್ದಾರೆ ಎಂದರು.

ತಮಿಳುನಾಡಿನ ಜನರು ನನ್ನ ಮಗನನ್ನು ನಾಯಕನನ್ನಾಗಿ ಮಾತ್ರ ಪ್ರೀತಿಸುತ್ತಿರಲಿಲ್ಲ. ಪ್ರತಿಯೊಬ್ಬ ಮಹಿಳೆಯೂ ಅವನನ್ನು ತಮ್ಮ ಸ್ವಂತ ಮಗನಂತೆ ನೋಡುತ್ತಾರೆ. ಯುವಕರು ಅವನನ್ನು ತಮ್ಮ ಸ್ವಂತ ಸಹೋದರ ಎಂದು ಪರಿಗಣಿಸಿದ್ದಾರೆ. ಎಲ್ಲರೂ ಅವನನ್ನು ಅಣ್ಣ ಎಂದು ಕರೆಯುತ್ತಾರೆ. ವೃದ್ಧರು ಅವನನ್ನು ತಮ್ಮ ಮೊಮ್ಮಗ ಎಂದು ಪರಿಗಣಿಸುತ್ತಾರೆ. ಸಾರ್ವಜನಿಕವಾಗಿ ಆ ಮಟ್ಟಿಗೆ ಅವರು ಸಂಬಂಧವನ್ನು ಬೆಳೆಸಿಕೊಂಡಿದ್ದಾರೆ ಎಂದು ಹಾಡಿ ಹೊಗಳಿದ್ದಾರೆ.

ವಿಜಯ್‌ಗೆ ಕಾಂಗ್ರೆಸ್ ಬೆಂಬಲ?

ನವದೆಹಲಿ: ನಟ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದು, ತಮಿಳುನಾಡಿನಲ್ಲಿ ಸರ್ಕಾರ ರಚಿಸುವುದು ಬಹುತೇಕ ಖಚಿತವಾಗಿದೆ. ಆದರೆ ಸ್ಪಷ್ಟ ಬಹುಮತ ಪಡೆದಿಲ್ಲ. ಹೀಗಾಗಿ ಟಿವಿಕೆಗೆ ಯಾರು ಬೆಂಬಲ ನೀಡುತ್ತಾರೆ ಎನ್ನುವುದೇ ಸದ್ಯದ ಕುತೂಹಲ.

ತಮಿಳುನಾಡಿನಲ್ಲಿ ನಟ ವಿಜಯ್ ಅವರ ಟಿವಿಕೆ ಜೊತೆ ಮೈತ್ರಿಗಾಗಿ ಕಾಂಗ್ರೆಸ್ ಮನವಿ ಮಾಡಿದೆ ಎಂದು ಮೂಲಗಳು ತಿಳಿಸಿವೆ.

ಒಟ್ಟು 234 ಸ್ಥಾನಗಳ ಪೈಕಿ ಬಹುಮತಕ್ಕೆ 118 ಸ್ಥಾನಗಳ ಅಗತ್ಯವಿದೆ. ಹೀಗಾಗಿ ಕಾಂಗ್ರೆಸ್, ಟಿವಿಕೆ ಜೊತೆ ಮೈತ್ರಿಗೆ ಮುಂದಾಗಿದೆ. ಈ ಬಗ್ಗೆ ಪ್ರತಿಕ್ರಿಯಿಸಿದ ಹಿರಿಯ ಕಾಂಗ್ರೆಸ್ ನಾಯಕ ಕೆ.ಸಿ. ವೇಣುಗೋಪಾಲ್ ಅವರು, ತಮಿಳುನಾಡಿನ ಫಲಿತಾಂಶ ಆಶ್ಚರ್ಯಕರವಾಗಿ ಎಂದು ಹೇಳಿದ್ದಾರೆ.

ನಾವು ತಡಮಾಡದೆ ತಮಿಳುನಾಡಿನ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕಾಗಿದೆ ಮತ್ತು ನಾವು ಅದನ್ನು ಮಾಡುತ್ತೇವೆ. ನಾವು ವಿಜಯ್ ಅವರನ್ನು ಪ್ರಶಂಸಿಸಬೇಕು ಎಂದು ವೇಣುಗೋಪಾಲ್ ತಿಳಿಸಿದ್ದಾರೆ.

ಚುನಾವಣೆ ಪ್ರಾರಂಭವಾಗುವ ಮೊದಲೇ ಎರಡೂ ಪಕ್ಷಗಳು ಒಂದಾಗಬೇಕಿತ್ತೇ ಎಂಬ ಪ್ರಶ್ನೆಗೆ, ನಾವು ಅದನ್ನು ನಂತರ ವಿಶ್ಲೇಷಿಸುತ್ತೇವೆ ಎಂದು ವೇಣುಗೋಪಾಲ್ ಹೇಳಿದ್ದಾರೆ.

ತಮಿಳುನಾಡು ಚುನಾವಣೆಯ ಫಲಿತಾಂಶ ವಿಜಯ್ ಅವರ ಹೊಸ ಪಕ್ಷ ಗೋಟೆಡ್ (ಗ್ರೇಟೆಸ್ಟ್ ಆಫ್ ಆಲ್ ಟೈವರ್) ಪ್ರದರ್ಶನವು ರಾಜಕೀಯದಲ್ಲಿ ಹೊಸ ಸಂಚಲನ ಮೂಡಿಸಿದೆ. 2024ರ ತಮಿಳು ಚಿತ್ರ ದಿ ಗ್ರೇಟೆಸ್ಟ್ ಆಫ್ ಆಲ್ ಟೈಮ್‌ನಲ್ಲಿಯೂ ಅವರು ನಟಿಸಿದ್ದಾರೆ, ಇದನ್ನು ಗೋಟ್ ಎಂದೂ ಕರೆಯುತ್ತಾರೆ.

ಮೈತ್ರಿ ಲೆಕ್ಕಾಚಾರ: ದಳಪತಿ ವಿಜಯ್ ನೇತೃತ್ವದ ತಮಿಳಗ ವೆಟ್ರಿ ಕಳಗಂ ಪಕ್ಷ 107 ಸ್ಥಾನ ಗೆದ್ದಿದೆ. ಸರ್ಕಾರ ರಚನೆ ಮಾಡಲು 118 ಸೀಟ್‌ಗಳು ಬೇಕಾಗಿದೆ. ಒಂದು ವೇಳೆ ಟಿವಿಕೆ ಪಕ್ಷ ಮ್ಯಾಜಿಕ್ ನಂಬರ್ ತಲುಪಲು ಸಾಧ್ಯವಾಗದೇ ಇದ್ದಲ್ಲಿ ಅನಿವಾರ್ಯವಾಗಿ ಮೈತ್ರಿ ಮಾಡಿಕೊಳ್ಳಲೇ ಬೇಕಿದೆ. ಆದರೆ ಟಿವಿಕೆಗೆ ಕಾಂಗ್ರೆಸ್ ಬೆಂಬಲ ನೀಡುತ್ತಾ ಎಂಬ ಪ್ರಶ್ನೆ ಎದ್ದಿದೆ.

ಚುನಾವಣೆಗೂ ಮುನ್ನ ಕಾಂಗ್ರೆಸ್, ಡಿಎಂಕೆ ಜೊತೆ ಮೈತ್ರಿ ಮಾಡಿಕೊಂಡಿದ್ದರೂ, ಫಲಿತಾಂಶದ ಟ್ರೆಂಡ್‌ಗಳು ಟಿವಿಕೆ ಪರವಾಗಿ ಇರುವುದರಿಂದ ಡಿಎಂಕೆ ಮೈತ್ರಿಯಿಂದ ಹೊರಬಂದು ಟಿವಿಕೆಗೆ ಬೆಂಬಲ ನೀಡುವ ಬಗ್ಗೆ ಪಕ್ಷದ ಒಳಗೆ ಗಂಭೀರ ಚರ್ಚೆಗಳು ನಡೆಯುತ್ತಿವೆ.

ವಿಜಯ್ ಸಂಪುಟದಲ್ಲಿ ನಟಿ ತ್ರಿಶಾ ಡಿಸಿಎಂ?

ಚೆನ್ನೈ: ದಕ್ಷಿಣ ಭಾರತದ ಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಬಹು ಭಾಷಾ ನಟಿ ತ್ರಿಶಾ ಕೃಷ್ಣನ್ ಅವರ ಹುಟ್ಟು ಹಬ್ಬದಂದೇ ತಮಿಳುನಾಡು ವಿಧಾನಸಭೆಯ ಚುನಾವಣೆಯ ಫಲಿತಾಂಶ ಪ್ರಕಟವಾಗಿದ್ದು, ಅಚ್ಚರಿಯ ರೀತಿಯಲ್ಲಿ ದಳಪತಿ ವಿಜಯ್ ಅವರ ಟಿವಿಕೆ ಪಕ್ಷ 107ಕ್ಕೂ ಹೆಚ್ಚು ಸ್ಥಾನಗಳನ್ನು ಪಡೆದು ಭರ್ಜರಿಯಾಗಿ ಮುನ್ನುಗ್ಗುತ್ತಿದೆ.



ನಟ ವಿಜಯ್ ಅವರ ತಮಿಳಗ ವೆಟ್ರಿ ಕಳಗಂ(ಟಿವಿಕೆ) ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದು, ತಮಿಳುನಾಡಿನಲ್ಲಿ ಸರ್ಕಾರ ರಚಿಸುವುದು ಬಹುತೇಕ ಖಚಿತವಾಗಿದೆ.

ದಳಪತಿ ವಿಜಯ್ ಅವರು ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸಿದ್ದು, ಒಂದು ವೇಳೆ ಎರಡೂ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿದರೆ ಒಂದು ಸ್ಥಾನಕ್ಕೆ ರಾಜೀನಾಮೆ ನೀಡುತ್ತಾರೆ. ಅವರ ರಾಜೀನಾಮೆಯಿಂದ ತೆರವಾಗುವ ಸ್ಥಾನಕ್ಕೆ ವಿಜಯ್ ಅವರ ಆಪ್ತ ಗೆಳತಿ, ನಟಿ ತ್ರಿಶಾ ಕೃಷ್ಣನ್ ಅವರು ಸ್ಪರ್ಧಿಸಲಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಅಲ್ಲದೆ ನಟಿ ಉಪ ಚುನಾವಣೆಯಲ್ಲಿ ಗೆದ್ದರೆ, ಅವರು ಉಪಮುಖ್ಯಮಂತ್ರಿಯಾಗುವ ಸಾಧ್ಯತೆಯೂ ಇದೆ ಎನ್ನಲಾಗುತ್ತಿದೆ. ಇದಕ್ಕೆ ಪುಷ್ಟಿ ನೀಡುವಂತೆ ಟಿವಿಕೆ ಅಧ್ಯಕ್ಷ ವಿಜಯ್ ಅವರ ನೀಲಾಂಕರೈ ನಿವಾಸಕ್ಕೆ ನಟಿ ತ್ರಿಶಾ ಭೇಟಿ ನೀಡಿದ್ದಾರೆ.

ವಿಜಯ್ ಅವರು ಸ್ಪರ್ಧಿಸಿರುವ ಎರಡೂ ಕ್ಷೇತ್ರಗಳಲ್ಲಿ (ತಿರುಚಿ ಪೂರ್ವ ಮತ್ತು ಪೆರಂಬೂರು) ಮುನ್ನಡೆ ಕಾಯ್ದುಕೊಂಡಿದ್ದಾರೆ. ಇಂದು ತ್ರಿಶಾ ಅವರ ಹುಟ್ಟುಹಬ್ಬವಾಗಿದ್ದು, ಬೆಳಗ್ಗೆ ತಿರುಪತಿಯಲ್ಲಿ ದೇವರ ದರ್ಶನ ಪಡೆದು, ಪ್ರಸಾದದೊಂದಿಗೆ ವಿಜಯ್ ಮನೆಗೆ ಭೇಟಿ ನೀಡಿದ್ದರು.

ತಿರುಪತಿ ಪ್ರಸಾದದೊಂದಿಗೆ ವಿಜಯ್ ಮನೆಗೆ ನಟಿ ತ್ರಿಶಾ ಭೇಟಿ

ಚೆನ್ನೈ: ನಟಿ ತ್ರಿಶಾ ಕೃಷ್ಣನ್ ತಮ್ಮ ಹುಟ್ಟು ಹಬ್ಬದ ನಿಮಿತ್ತ ಸೋಮವಾರ ಬೆಳಿಗ್ಗೆ ತಿರುಮಲ ತಿರುಪತಿ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿದರು. ದರ್ಶನ ಮುಗಿಸಿದ ನಂತರ, ಅವರು ಚೆನ್ನೈಗೆ ಹಿಂತಿರುಗಿ ನೇರವಾಗಿ ನಟ–ರಾಜಕಾರಣಿ ವಿಜಯ್ ಅವರ ನಿವಾಸಕ್ಕೆ ತೆರಳಿದ್ದಾರೆ.

ವಿಜಯ್ ಅವರ ನಿವಾಸಕ್ಕೆ ಪ್ರವೇಶಿಸುವಾಗ ಮಾಧ್ಯಮ ಸಿಬ್ಬಂದಿ ಅವರನ್ನು ಗಮನಿಸಿದರು.

ರಾಜಕೀಯ ಪಕ್ಷ ಸ್ಥಾಪಿಸಿದ 6 ತಿಂಗಳಲ್ಲಿ ಚೊಚ್ಚಲ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿರುವ ವಿಜಯ್ ಅವರ ಟಿವಿಕೆ ಪಕ್ಷ ಇತಿಹಾಸ ಸೃಷ್ಟಿಸಿ ಸರ್ಕಾರ ರಚಿಸಲು ಸಜ್ಜಾಗಿರುವ ಸಮಯದಲ್ಲಿ ಈ ಭೇಟಿ ಬಂದಿದೆ.

ತಿರುಪತಿ ಪ್ರಸಾದವನ್ನು ಹಸ್ತಾಂತರಿಸಲು ಮತ್ತು ಅಭಿನಂದನೆಗಳನ್ನು ತಿಳಿಸಲು ತ್ರಿಶಾ ವಿಜಯ್ ಅವರನ್ನು ವೈಯಕ್ತಿಕವಾಗಿ ಭೇಟಿ ಮಾಡಿದ್ದಾರೆ. ಎಂದು ವರದಿಗಳು ಸೂಚಿಸುತ್ತವೆ.

ತ್ರಿಶಾ ಮತ್ತು ವಿಜಯ್ ಪರಸ್ಪರ ಪ್ರೀತಿಸುತ್ತಿದ್ದಾರೆ ಎಂಬ ವದಂತಿ ಬಹಳ ಹಿಂದಿನಿಂದಲೂ ಇದೆ. ಏತನ್ಮಧ್ಯೆ, ವಿಜಯ್ ಅವರ ಪತ್ನಿ ಡಿಸೆಂಬರ್‌ನಲ್ಲಿ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದರು ಮತ್ತು ಪ್ರಸ್ತುತ ಕೇಸ್ ನಡೆಯುತ್ತಿದೆ. ಈ ಜೋಡಿ ಈ ಹಿಂದೆ "ಗಿಲ್ಲಿ" ಮತ್ತು "ಲಿಯೋ" ನಂತಹ ಬ್ಲಾಕ್‌ಬಸ್ಟರ್ ಚಿತ್ರಗಳಲ್ಲಿ ನಟಿಸಿವೆ.

ವಿಜಯ್ ಕಾರು ಚಾಲಕನ ಪುತ್ರ ಈಗ ಶಾಸಕ!

ಚೆನ್ನೈ: ನಟ ವಿಜಯ್ ಅವರ ಬಹುಕಾಲದ ಕಾರು ಚಾಲಕ ರಾಜೇಂದ್ರನ್ ಅವರ ಪುತ್ರ



ಶಬರಿನಾಥನ್ ಅವರು ವಿರುಗಮ್‌ಪಾಕಮ್ ಕ್ಷೇತ್ರದಲ್ಲಿ ಭರ್ಜರಿ ಗೆಲುವು ದಾಖಲಿಸಿದ್ದಾರೆ. ಆರ್. ಶಬರಿನಾಥನ್ ಅವರಿಗೆ 30 ವರ್ಷ. ಡಿಎಂಕೆ ಅಭ್ಯರ್ಥಿ ಪ್ರಭಾಕರ ರಾಜ ಅವರನ್ನು 25 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಮಣಿಸಿ ಮೊದಲ ಬಾರಿ ಶಬರಿನಾಥನ್ ವಿಧಾನಸಭೆ ಪ್ರವೇಶಿಸುತ್ತಿದ್ದಾರೆ.

ವಿಜಯ್ 'ನಾಳೈಯ ತೀರ್ಪು' (1992) ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದ್ದರು. ಆಗ ವಿಜಯ್ ಅವರ ಕಾರು ಚಾಲಕರಾಗಿದ್ದ ರಾಜೇಂದ್ರನ್ ಮುಂದೆ ಆಪ್ತ ಸಹಾಯಕರೂ ಆದರು. ಟಿವಿಕೆ ಅಭ್ಯರ್ಥಿಗಳ ಪಟ್ಟಿಯಲ್ಲಿ ತನ್ನ ಹೆಸರು ಘೋಷಣೆ ಆಗುತ್ತಿದ್ದಂತೆ ಕಾರ್ಯಕ್ರಮದ ವೇದಿಕೆಯಲ್ಲೇ ಶಬರಿನಾಥನ್ ಸಂತೋಷ ತಡೆಯಲಾರದೇ ಕಣ್ಣೀರು ಹಾಕಿದ್ದರು. ಈ ಭಾವನಾತ್ಮಕ ದೃಶ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಚೆನ್ನೈ ಜಿಲ್ಲೆಯ ವಿರುಗಮ್‌ಪಾಕಮ್ ಕ್ಷೇತ್ರ ಕಳೆದ ಐದು ಚುನಾವಣೆಗಳಲ್ಲಿ ಮೂರು ಪಕ್ಷಗಳ ಅಭ್ಯರ್ಥಿಗಳನ್ನು ಕಂಡಿತ್ತು. ಇದೀಗ ಟಿವಿಕೆ ಗೆಲುವಿನ ಮೂಲಕ ಮತ್ತೊಂದು ಪಕ್ಷವನ್ನು ಅಪ್ಪಿಕೊಂಡಿದೆ.

ತ.ನಾಡಲ್ಲಿ ವಿಜಯ್ ಗೆಲ್ತಾರೆ ಎಂದಿದ್ದ ಆಕ್ಸಿಸ್ ಮೈ ಇಂಡಿಯಾ!



ನವದೆಹಲಿ: ನಟ–ರಾಜಕಾರಣಿ ವಿಜಯ್ ಅವರ ಟಿವಿಕೆ ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಗೆಲ್ಲುತ್ತದೆ ಎಂದು ಭವಿಷ್ಯ ನುಡಿದಾಗ ಜನರು ತಮ್ಮನ್ನು ನೋಡಿ ನಗುತ್ತಿದ್ದರು ಎಂದು ಆಕ್ಸಿಸ್ ಮೈ ಇಂಡಿಯಾದ ಪ್ರದೀಪ್ ಗುಪ್ತಾ ನೆನಪಿಸಿಕೊಂಡಿದ್ದಾರೆ.

234 ಸದಸ್ಯ ಬಲದ ವಿಧಾನಸಭೆಯಲ್ಲಿ ಟಿವಿಕೆ 98 ರಿಂದ 120 ಸ್ಥಾನಗಳನ್ನು ಗೆಲ್ಲಲಿದೆ ಎಂದು ಭವಿಷ್ಯ ನುಡಿದಿದ್ದ ಏಕೈಕ ಸಮೀಕ್ಷೆ ಸಂಸ್ಥೆ ಆಕ್ಸಿಸ್ ಮೈ ಇಂಡಿಯಾ. ಈಗ ಅದರ ಚುನಾವಣೋತ್ತರ ಸಮೀಕ್ಷೆ ನಿಜವಾಗಿದೆ ಎಂದಿದ್ದಾರೆ.

8 ಗ್ರಾಂ ಚಿನ್ನ, 6 ಸಿಲಿಂಡರ್: ಟಿವಿಕೆ ಭರವಸೆಗಳತ್ತ ಜನರ ಚಿತ್ತ

ಚೆನ್ನೈ: ತಮಿಳುನಾಡಿನಲ್ಲಿ ನಟ ವಿಜಯ್ ನೇತೃತ್ವದ ಟಿವಿಕೆ ಅಧಿಕಾರದ ಗದ್ದುಗೆಗೆ ಸನಿಹವಾಗಿದೆ. ಇದರೊಂದಿಗೆ, ಚುನಾವಣೆ ಪ್ರಚಾರ ಸಂದರ್ಭದಲ್ಲಿ ವಿಜಯ ಅವರು ನೀಡಿದ್ದ ಭರವಸೆಗಳು ಈಗ ಮತ್ತೆ ಚರ್ಚೆಗೆ ಕಾರಣವಾಗಿವೆ.

ವಿವಾಹವಾಗುವವರಿಗೆ 8 ಗ್ರಾಂ ಚಿನ್ನ ವಿತರಣೆ ಸೇರಿದಂತೆ ಭರಪೂರ ಘೋಷಣೆಗಳು ಕೂಡಾ ವಿಜಯ್ ಗೆಲುವಿಗೆ ಪ್ರಮುಖ ಕಾರಣವಾಗಿರಬಹುದು ಎಂಬ ಚರ್ಚೆಗಳು ರಾಜಕೀಯ ವಲಯದಲ್ಲಿ ನಡೆಯುತ್ತಿದೆ. ವಿಜಯ್ ಅಧಿಕಾರಕ್ಕೇರಿದರೆ ಎಲ್ಲ ಭರವಸೆಗಳನ್ನು ಈಡೇರಿಸುವರೇ ಎಂಬ ಲೆಕ್ಕಚಾರ ಮತದಾರರದ್ದಾಗಿದೆ.

60 ವಯೋಮಾನದ ಒಳಗಿನ ಮಹಿಳೆಯರಿಗೆ ಮಾಸಿಕ 2,500, ಬಡ ವಧುಗಳಿಗೆ 8 ಗ್ರಾಂ ಚಿನ್ನದ ಜೊತೆ ರೇಷ್ಮೆ ಸೀರೆ ಮತ್ತು ಪ್ರತಿ ಕುಟುಂಬಕ್ಕೆ ವರ್ಷಕ್ಕೆ ಉಚಿತ ವಾಗಿ ಆರು ಸಿಲಿಂಡರ್ ನೀಡುವುದಾಗಿ ವಿಜಯ್ ಪ್ರಣಾಳಿಕೆಯಲ್ಲಿ ಘೋಷಿಸಿದ್ದರು.

ಮಹಿಳೆಯರು ನಡೆಸುವ ಸ್ವಸಹಾಯ ಸಂಘಗಳಿಗೆ 5 ಲಕ್ಷ ಬಡ್ಡಿ ರಹಿತ ಸಾಲ ವಿತರಣೆ. ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಓದುತ್ತಿರುವ ಮಕ್ಕಳ ತಾಯಿ ಅಥವಾ ಪೋಷಕರಿಗೆ ವರ್ಷಕ್ಕೆ 15 ಸಾವಿರ ನೀಡುವುದಾಗಿ ವಿಜಯ್ ಹೇಳಿದ್ದರು.

ಆಸ್ಪತ್ರೆಗಳ ಆಧುನೀಕರಣ, 25 ಲಕ್ಷ ಮೊತ್ತದ ಕುಟುಂಬ ಆರೋಗ್ಯ ವಿಮಾ ಯೋಜನೆ ಪರಿಚಯಿಸಲಾಗುವುದು. ವೃದ್ಧರು ಮತ್ತು ಅಂಗವಿಕಲರಿಗೆ ಮಾಸಿಕ 3 ಸಾವಿರ ಪಿಂಚಣಿ, 200 ಯೂನಿಟ್ ಉಚಿತ ವಿದ್ಯುತ್ ನೀಡಲಾಗುವುದು ಎಂದು ಭರವಸೆ ನೀಡಿದ್ದರು.

ಇನ್ನೂ ಹಲವು ಭರವಸೆಗಳನ್ನು ವಿಜಯ್ ನೀಡಿದ್ದು, ಅಧಿಕಾರಕ್ಕೇರಿದ ಬಳಿಕ ಈ ಭರವಸೆಗಳು ಅನುಷ್ಠಾನ ಗೊಳ್ಳುಬಹುದೇ ಎನ್ನುವುದನ್ನು ಮತದಾರರು ಎದುರು ನೋಡುತ್ತಿದ್ದಾರೆ.

ದೇವರ ನಾಡಿನಲ್ಲಿ ಅರಳಿದ ಕಮಲ: 3 ಸ್ಥಾನ ಗೆದ್ದು ಇತಿಹಾಸ ಸೃಷ್ಟಿ

ತಿರುವನಂತಪುರಂ: ದೇವರ ನಾಡಿನಲ್ಲಿ ನೆಲೆ ಕಂಡುಕೊಳ್ಳಲು ದಶಕಗಳಿಂದ ಹೋರಾಡುತ್ತಿದ್ದ ಬಿಜೆಪಿಗೆ ಈ ಬಾರಿಯ ವಿಧಾನಸಭಾ ಚುನಾವಣೆ ಅಭೂತಪೂರ್ವ ಯಶಸ್ಸು ತಂದುಕೊಟ್ಟಿದೆ. ಇದೇ ಮೊದಲ ಬಾರಿಗೆ ಬಿಜೆಪಿ ಮೂರು ವಿಧಾನಸಭಾ ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸುವ ಮೂಲಕ ಇತಿಹಾಸ ನಿರ್ಮಿಸಿದೆ. ಕೇರಳದ ಬಿಜೆಪಿ ರಾಜ್ಯಾಧ್ಯಕ್ಷರಾದ ರಾಜೀವ್ ಚಂದ್ರಶೇಖರ್, ಮಮ್ ಕ್ಷೇತ್ರದಲ್ಲಿ, ಬಿ.ಬಿ. ಗೋಪಕುಮಾರ್ ಚಾತನ್ನೂರಿನಲ್ಲಿ ಜಯಗಳಿಸಿದ್ದಾರೆ. ಮಾಜಿ ಕೇಂದ್ರ ಸಚಿವ ಮುರಳೀಧರನ್ ಕಲಕುಟ್ಟಂದಿಂದ ವಿಜಯ ಸಾಧಿಸಿದ್ದಾರೆ.


ಗಂಗೋತ್ರಿಯಿಂದ ಗಂಗಾಸಾಗರದವರೆಗೆ ಕಮಲ ಅರಳಿದೆ!

ಬಂಗಾಳದ ಗೆಲುವು ಐತಿಹಾಸಿಕ; ಪ್ರಧಾನಿ ಮೋದಿ

ನವದೆಹಲಿ, ಮೇ 4: ಮೂರು ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಬಿಜೆಪಿಯ ಗೆಲುವನ್ನು ಸಂಭ್ರಮಿಸಲು ನವದೆಹಲಿಯ ಭಾರತೀಯ ಜನತಾ ಪಕ್ಷದ ಪ್ರಧಾನ ಕಚೇರಿಗೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಭೂತಪೂರ್ವ ಸ್ವಾಗತ ದೊರೆಯಿತು. ಬಂಗಾಳಿ ಧೋತಿ ಧರಿಸಿ ಬಂದ ಪ್ರಧಾನಿ ಮೋದಿ ಕಾರಿನಿಂದ ಕೆಳಗೆ ಇಳಿಯುತ್ತಿದ್ದಂತೆ ಇಡೀ ಆವರಣದ ಸುತ್ತ 'ಮೋದಿ, ಮೋದಿ!' ಎಂಬ ಘೋಷಣೆಗಳು ಪ್ರತಿಧ್ವನಿಸಿತು. ಪ್ರಧಾನಿ ಮೋದಿ 'ಭಾರತ್ ಮಾತಾ ಕಿ ಜೈ' ಎಂಬ ಘೋಷಣೆಯೊಂದಿಗೆ ತಮ್ಮ ಭಾಷಣವನ್ನು ಪ್ರಾರಂಭಿಸಿದರು. ಇಂದು ಐತಿಹಾಸಿಕ ಮತ್ತು ಅಭೂತಪೂರ್ವ ದಿನ ಎಂದ ಅವರು ಈ ಗೆಲುವಿಗೆ ಕಾರಣರಾದ ಬಿಜೆಪಿ ಕಾರ್ಯಕರ್ತರನ್ನು ಅಭಿನಂದಿಸಿದರು.

ಪಶ್ಚಿಮ ಬಂಗಾಳದಲ್ಲಿ ಮೊದಲ ಬಾರಿ ಬಿಜೆಪಿ ಗೆಲುವು ಸಾಧಿಸಿದ ಕುರಿತು ಮಾತನಾಡಿದ ಪ್ರಧಾನಿ ಮೋದಿ, ತಲೆಮಾರುಗಳಿಂದ ಅಸಂಖ್ಯಾತ ಕಾರ್ಯಕರ್ತರ ಪ್ರಯತ್ನ ಮತ್ತು ಹೋರಾಟಗಳಿಲ್ಲದೆ ಪಶ್ಚಿಮ ಬಂಗಾಳದಲ್ಲಿ ಬಿಜೆಪಿಯ ದಾಖಲೆಯ ಗೆಲುವು ಸಾಧ್ಯವಾಗುತ್ತಿರಲಿಲ್ಲ. ನಾನು ಅವರೆಲ್ಲರನ್ನೂ ವಂದಿಸುತ್ತೇನೆ. ಹಲವು ವರ್ಷಗಳಿಂದ ಅವರು ಎಲ್ಲಾ ರೀತಿಯ ತೊಂದರೆಗಳನ್ನು ನಿವಾರಿಸಿಕೊಂಡು, ಪಕ್ಷದ ಅಭಿವೃದ್ಧಿಗೆ ತಳಮಟ್ಟದಲ್ಲಿ ಶ್ರಮಿಸಿದ್ದಾರೆ. ಅವರು ನಮ್ಮ ಪಕ್ಷದ ಶಕ್ತಿ ಎಂದು ಹೇಳಿದ್ದಾರೆ.

ಗಂಗಾ ಮಾತೆಯ ಜೊತೆಗೆ ಬ್ರಹ್ಮಪುತ್ರ ಕೂಡ



ನಮ್ಮನ್ನು ಆಶೀರ್ವದಿಸಿದೆ. ಅಸ್ಸಾಂನ ಜನರು ಮೂರನೇ ಬಾರಿಗೆ ಬಿಜೆಪಿಯ ಮೇಲೆ ತಮ್ಮ ನಂಬಿಕೆಯನ್ನು ಇಟ್ಟಿದ್ದಾರೆ. ಇದು ಅಸ್ಸಾಂ ಇತಿಹಾಸದಲ್ಲಿ ಮಹತ್ವದ ಘಟನೆಯಾಗಿದೆ. ಅಸ್ಸಾಂ ತನ್ನ ಅಭಿವೃದ್ಧಿಯನ್ನು ಮತ್ತಷ್ಟು ವೇಗಗೊಳಿಸುತ್ತದೆ ಎಂದು ನಾನು ಭರವಸೆ ನೀಡುತ್ತೇನೆ. ಗಂಗೋತ್ರಿಯಿಂದ ಗಂಗಾಸಾಗರದವರೆಗೆ ಕಮಲ ಅರಳಿದೆ. ಗಂಗಾ ಮಾತೆಯ ದಡದಲ್ಲಿರುವ ರಾಜ್ಯಗಳಲ್ಲಿ ಈಗ ಬಿಜೆಪಿ–ಎನ್‌ಡಿಎ ಸರ್ಕಾರಗಳಿವೆ ಎಂದು ಪ್ರಧಾನಿ ಮೋದಿ ಸಂತಸ ವ್ಯಕ್ತಪಡಿಸಿದರು.

ಪ್ರಜಾಪ್ರಭುತ್ವ ಮತ್ತು ಚುನಾವಣಾ ರಾಜಕೀಯದಲ್ಲಿ ಗೆಲುವು ಮತ್ತು ಸೋಲು ಸಹಜವಾದ ಭಾಗ. ಆದರೆ ಈ 5 ರಾಜ್ಯಗಳ ಜನರು ನಮ್ಮ ಭಾರತ ಏಕೆ ಪ್ರಜಾಪ್ರಭುತ್ವದ ತಾಯಿ ಎಂಬುದನ್ನು ಇಡೀ ಜಗತ್ತಿಗೆ ತೋರಿಸಿದ್ದಾರೆ. ಪ್ರಜಾಪ್ರಭುತ್ವ ನಮಗೆ ಕೇವಲ ಒಂದು ವ್ಯವಸ್ಥೆಯಲ್ಲ. ಅದು ನಮ್ಮ ರಕ್ತನಾಳಗಳಲ್ಲಿ ಹರಿಯುವ ಸಂಸ್ಕೃತಿ. ಹಲವು ವರ್ಷಗಳ ಪರಿಶ್ರಮ ಸಾಧನೆಯಾಗಿ ಪರಿವರ್ತನೆಗೊಂಡಾಗ ಆಗುವ ಸಂತೋಷವನ್ನು ನಾನು ಇಂದು ದೇಶಾದ್ಯಂತದ ಬಿಜೆಪಿ ಕಾರ್ಯಕರ್ತರ ಮುಖಗಳಲ್ಲಿ ನೋಡುತ್ತಿದ್ದೇನೆ ಎಂದು ಪ್ರಧಾನಿ ಮೋದಿ ಹೇಳಿದರು.

ಕೇರಳ ಮತ್ತು ಬಂಗಾಳದಲ್ಲಿ ಬಿಜೆಪಿ ಕಾರ್ಯಕರ್ತರು ಹಲವಾರು ದೌರ್ಜನ್ಯಗಳಿಗೆ ಒಳಗಾಗಿದ್ದಾರೆ ಎಂದು ಪ್ರಧಾನಿ ಮೋದಿ ಹೇಳಿದರು. ಬಂಗಾಳದಲ್ಲಿ ಇಂದು ಬಿಜೆಪಿಯ ಯಶಸ್ಸಿಗೆ ಅಂತಹ ಎಲ್ಲಾ ಕಾರ್ಯಕರ್ತರು ಮತ್ತು ಅವರ ಕುಟುಂಬಗಳು ಕಾರಣ ಎಂದು ಅವರು ಹೇಳಿದರು. ಈ ಗೆಲುವನ್ನು ನಾನು ಬಂಗಾಳದ ಜನರಿಗೆ ಅರ್ಪಿಸುತ್ತೇನೆ ಎಂದು ಪ್ರಧಾನಿ ಮೋದಿ ಹೇಳಿದರು.

ಪುದುಚೇರಿಯ ಜನರು ನಮಗೆ ತಮ್ಮ ಆಶೀರ್ವಾದ ನೀಡಿದ್ದಾರೆ. ಕಳೆದ 5 ವರ್ಷಗಳಲ್ಲಿ ಎನ್‌ಡಿಎ ಸರ್ಕಾರ ಸಂಪೂರ್ಣ ಸಮರ್ಪಣಾ ಭಾವದಿಂದ ಕೆಲಸ ಮಾಡಿದೆ. ಇಂದು ಮತ್ತೊಮ್ಮೆ ಜನರು ಎನ್‌ಡಿಎ ಮೇಲೆ ತಮ್ಮ ನಂಬಿಕೆಯನ್ನು ವ್ಯಕ್ತಪಡಿಸಿದ್ದಾರೆ. ನಿಮ್ಮ ಉಜ್ವಲ ಭವಿಷ್ಯಕ್ಕಾಗಿ ಎನ್‌ಡಿಎ ಸರ್ಕಾರವು ಅವಿಶ್ರಾಂತವಾಗಿ ಕೆಲಸ ಮಾಡುವುದನ್ನು ಮುಂದುವರಿಸುತ್ತದೆ ಎಂದು ನಾನು ಪುದುಚೇರಿಯ ಯುವಕರಿಗೆ ಭರವಸೆ ನೀಡುತ್ತೇನೆ. ಇಂದು, ದೇಶಾದ್ಯಂತ 20ಕ್ಕೂ ಹೆಚ್ಚು ರಾಜ್ಯಗಳಲ್ಲಿ ಬಿಜೆಪಿ–ಎನ್‌ಡಿಎ ಸರ್ಕಾರಗಳು ಅಧಿಕಾರದಲ್ಲಿವೆ. ನಾವು ಜನರಿಗೆ ಸೇವೆ ಸಲ್ಲಿಸಲು ಸಮರ್ಪಿತರಾಗಿದ್ದೇವೆ. ಅದಕ್ಕಾಗಿಯೇ ಜನರು ಬಿಜೆಪಿಯನ್ನು ನಂಬುತ್ತಿದ್ದಾರೆ. ಬಿಜೆಪಿ ಇರುವಲ್ಲಿ ಉತ್ತಮ ಆಡಳಿತವಿದೆ, ಬಿಜೆಪಿ ಇರುವಲ್ಲಿ ಅಭಿವೃದ್ಧಿ ಇದೆ ಎಂಬುದನ್ನು ಜನರು ಸ್ಪಷ್ಟವಾಗಿ ನೋಡುತ್ತಿದ್ದಾರೆ ಎಂದು ಪ್ರಧಾನಿ ಮೋದಿ ಹೇಳಿದರು.

ಕಾಂಗ್ರೆಸ್ ನಕ್ಸಲ್ ಗ್ಯಾಂಗ್ ಆಗ್ತಿದೆ: ಕಾಡಿನಲ್ಲಿ ಕಣ್ಮರೆಯಾಗುತ್ತಿರುವ ಮಾವೋವಾದಿಗಳು ಕಾಂಗ್ರೆಸ್ ಪಕ್ಷದೊಳಗೆ ತಮ್ಮ ನೆಲೆಯನ್ನು ಭದ್ರಪಡಿಸಿಕೊಳ್ಳುತ್ತಿದ್ದಾರೆ. ಕಾಂಗ್ರೆಸ್ ನಗರ ನಕ್ಸಲರ ಗ್ಯಾಂಗ್ ಆಗುತ್ತಿದೆ ಎಂದು ಪ್ರಧಾನಿ ನರೇಂದ್ರ ಮೋದಿ ವಾಗ್ದಾಳಿ ನಡೆಸಿದರು.

ಮಹಿಳೆಯರು ಚುನಾವಣೆಯಲ್ಲಿ ಶಿಕ್ಷಿಸಿದ್ದಾರೆ: ಅಲ್ಲದೇ, ಅಭಿವೃದ್ಧಿ ಹೊಂದಿದ ಭಾರತವನ್ನು ನಿರ್ಮಿಸುವಲ್ಲಿ ದೇಶದಲ್ಲಿ ಮಹಿಳೆಯರು ಪ್ರಮುಖ ಪಾತ್ರ ವಹಿಸುತ್ತಿದ್ದಾರೆ. ಆದರೆ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳು ಸಂಸತ್ತಿನಲ್ಲಿ ನಾರಿ ಶಕ್ತಿ ವಂದನ ತಿದ್ದುಪಡಿಯನ್ನು ವಿರೋಧಿಸುವ ಮೂಲಕ ಈ ಪ್ರಗತಿಯನ್ನು ತಡೆಯಲು ಪ್ರಯತ್ನಿಸಿದವು. ಮಹಿಳೆಯರಿಗೆ ಮೀಸಲಾತಿಯನ್ನು ವಿರೋಧಿಸುವ ಪಕ್ಷಗಳು ಈಗ ಮತದಾರರಿಂದ ತೀವ್ರ ಟೀಕೆಗೆ ಗುರಿಯಾಗಿವೆ. ಹಾಗಾಗಿಯೇ ಮಹಿಳೆಯರು ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ ಮತ್ತು ದ್ರಾವಿಡ ಮುನ್ನೇತ್ರ ಕಳಗಂ ಅನ್ನು ಚುನಾವಣೆಯಲ್ಲಿ ಶಿಕ್ಷಿಸಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ಮೈಸೂರು ಮಿತ್ರ

ಬಸವಣ್ಣನವರ 'ಕಾಯಕವೇ ಕೈಲಾಸ' ತತ್ವ ಜೀವನದ ಮಂತ್ರವಾಗಲಿ

ಡಾ.ಶಿವಕುಮಾರ ಶ್ರೀಗಳು ಮಾನವೀಯತೆಯ ಪ್ರತೀಕ: ಹೆಳವರಹುಂಡಿ ಸಿದ್ದಪ್ಪ ಬಣ್ಣನೆ



ಬಸವ ಹಾಗೂ ಶಿವಕುಮಾರ ಸ್ವಾಮೀಜಿ ಅವರ ಜಯಂತಿಯನ್ನು ಹರಗುರುಚರ ಮೂರ್ತಿಗಳು ಉದ್ಘಾಟಿಸಿದರು.

ತಿ.ನರಸೀಪುರ, ಮೇ 4– ಸಿದ್ಧಗಂಗಾ ಮಠದ ಡಾ.ಶ್ರೀಶಿವಕುಮಾರ ಸ್ವಾಮೀಜಿ ಅವರು ಒಬ್ಬ ಸ್ವಾಮೀಜಿಯಲ್ಲ. ಅವರು ಮಾನವೀಯತೆಯ ಪ್ರತೀಕ. ದೇಶದಲ್ಲಿ ಭಾರತ ರತ್ನ ಎಂಬ ಅತ್ಯುನ್ನತ ಪ್ರಶಸ್ತಿ ಇದ್ದರೂ, ಕೆಲ ವ್ಯಕ್ತಿಗಳು ಪ್ರಶಸ್ತಿಗಳ ಅಳತೆ ಮೀರಿ ನಿಂತಿರುತ್ತಾರೆ. ಅಂತಹವರಲ್ಲಿ ಡಾ.ಶಿವಕುಮಾರ ಸ್ವಾಮೀಜಿ ಪ್ರಮುಖರು ಎಂದು ಶಿವಕುಮಾರಸ್ವಾಮಿ ಸೇವಾ ಟ್ರಸ್ಟ್ ಗೌರವಾಧ್ಯಕ್ಷ ಹೆಳವರಹುಂಡಿ ಸಿದ್ದಪ್ಪ ಬಣ್ಣಿಸಿದರು.

ಶ್ರೀಶಿವಕುಮಾರಸ್ವಾಮಿ ಸೇವಾ ಟ್ರಸ್ಟ್ ವತಿಯಿಂದ ಪಟ್ಟಣದ ವಿದ್ಯೋದಯ ಕಾಲೇಜು ಸಭಾಂಗಣದಲ್ಲಿ ಸೋಮವಾರ ಆಯೋಜಿಸಿದ್ದ ಸಾಂಸ್ಕೃತಿಕ ನಾಯಕ, ವಿಶ್ವಗುರು ಶ್ರೀಬಸವೇಶ್ವರ ಜಯಂತಿ ಮಹೋತ್ಸವ ಹಾಗೂ ತ್ರಿವಿಧ ದಾಸೋಹಿ ಡಾ.ಶ್ರೀಶಿವಕುಮಾರ ಸ್ವಾಮೀಜಿ ಅವರ 119ನೇ ಜಯಂತಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಮ್ಮ ಜೀವನಕ್ಕೆ ದಾರಿ ತೋರುವ ಮಹಾನ್ ಚಿಂತಕರಲ್ಲಿ ವಿಶ್ವ ಗುರು ಬಸವಣ್ಣ ಅಗ್ರಗಣ್ಯರು. ಅವರು ಕೇವಲ ಉಪದೇಶ ಮಾಡಿದವರಲ್ಲ. ತಮ್ಮ ಜೀವನದಲ್ಲೇ ತತ್ವಗಳನ್ನು ಅನುಸರಿಸಿದ ಮಹಾನ್ ವ್ಯಕ್ತಿತ್ವ ಬಸವಣ್ಣನವರು ನಮಗೆ ಕಲಿಸಿದ್ದು ಸರಳವಾದರೂ ಅತ್ಯಂತ ಗಂಭೀರವಾದ ಸತ್ಯವಾಗಿದೆ. ಮಾತಿನಲ್ಲಿ ಅಲ್ಲ ಬದುಕಿನಲ್ಲಿ ಧರ್ಮ ಇರಬೇಕು. ಆದ್ದರಿಂದಲೇ ಬಸವಣ್ಣನವರ ಜೀವನ ನಮ್ಮ ಬದುಕಾಗಲಿ ಎಂಬುದು ನಮ್ಮ ಸಂಕಲ್ಪವಾಗಬೇಕು ಎಂದರು.

> "ಬಸವಣ್ಣನವರು ಕೇವಲ ಧಾರ್ಮಿಕ ನಾಯಕರಲ್ಲ. ಸಮಾಜ ಸುಧಾರಣೆಯ ಮಹಾನ್ ಕ್ರಾಂತಿಕಾರರು. ಅವರ ಕಾಲದಲ್ಲಿ ಜಾತಿ–ಮತ ಭೇದಗಳು ಗಾಢವಾಗಿದ್ದಾಗ ಅವರು ಸಮಾನತೆ, ಸ್ವಾಭಿಮಾನ ಮತ್ತು ಶ್ರಮದ ಮಹತ್ವ ಸಾರಿದರು. ಕಾಯಕವೇ ಕೈಲಾಸ ಎಂಬ ಮಹಾ ಮಂತ್ರದ ಮೂಲಕ ಯಾವುದೇ ಕೆಲಸ ಮೇಲು ಕೀಳಲ್ಲ. ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು ಎಂಬ ಸಂದೇಶ ನೀಡಿದರು. ಬಸವಣ್ಣನವರ ವಚನಗಳು ಇಂದಿಗೂ ಸಮಾಜಕ್ಕೆ ದಾರಿ ದೀಪವಾಗಿವೆ. ಅದೇ ರೀತಿ ಡಾ.ಶಿವಕುಮಾರ ಸ್ವಾಮೀಜಿ ಅವರು ನಡೆದು ತೋರಿಸಿದ ಮಹಾನ್ ಸನ್ಯಾಸಿಗಳು. ಸಿದ್ಧಗಂಗಾ ಕ್ಷೇತ್ರವನ್ನು ಅವರು ಸೇವೆಯ ತೀರ್ಥ ಕ್ಷೇತ್ರವನ್ನಾಗಿ ರೂಪಿಸಿದರು. ಲಕ್ಷಾಂತರ ಬಡ ವಿದ್ಯಾರ್ಥಿಗಳಿಗೆ ಉಚಿತ ಅನ್ನ, ಆಶ್ರಯ ಮತ್ತು ಶಿಕ್ಷಣ ನೀಡುವ ಮೂಲಕ ಅವರು ಮಾನವ ಸೇವೆಯೇ ಮಾಧವನ ಸೇವೆ ಎಂಬುದನ್ನು ಜೀವನದಲ್ಲಿ ಅನ್ವಯಿಸಿದರು. ಅವರ ಜೀವನವೇ ನಮಗೆ ಸತ್ಯ, ತ್ಯಾಗ ಮತ್ತು ಸೇವೆಯ ಸಂದೇಶ.
>
> – ಶ್ರೀಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ವಾಟಾಳು ಪೀಠಾಧ್ಯಕ್ಷ.

ಬಸವಣ್ಣನವರು ಹೇಳಿದ ಕಾಯಕವೇ ಕೈಲಾಸ ತತ್ವವು ನಮ್ಮ ಜೀವನದ ಮಂತ್ರವಾಗಬೇಕು. ನಾವು ಮಾಡುವ ಪ್ರತಿಯೊಂದು ಕೆಲಸವೂ ಪ್ರಾಮಾಣಿಕವಾಗಿರಬೇಕು. ದುಡಿಯುವ ಪ್ರತಿಯೊಬ್ಬರನ್ನೂ ಗೌರವಿಸುವ ಮನೋಭಾವ ನಮ್ಮಲ್ಲಿ ಬೆಳೆಯಬೇಕು. ಬಸವಣ್ಣನವರು ದಾಸೋಹ ತತ್ವದ ಮಹತ್ವ ಸಾರಿದರು. ನಾವು ಗಳಿಸಿದ ಸಂಪತ್ತು, ಜ್ಞಾನ, ಶಕ್ತಿ ಇವುಗಳನ್ನು ಸಮಾಜದ ಒಳಿತಿಗಾಗಿ ಬಳಸಬೇಕು. ಇದರಿಂದ ಸಮಾನತೆ ಮತ್ತು ಸಹೋದರತ್ವ ಮೂಡುತ್ತದೆ ಎಂದರು.

ಬಸವಣ್ಣರು ಜಾತಿ, ವರ್ಣ, ಲಿಂಗ ಭೇದಗಳನ್ನು ತಿರಸ್ಕರಿಸಿದರು. ಎಲ್ಲರೂ ಸಮಾನರು ಎಂಬ ಸಂದೇಶವನ್ನು ತಮ್ಮ ಜೀವನದಿಂದಲೇ ತೋರಿಸಿದರು. ಇಂದಿನ ಸಮಾಜದಲ್ಲಿ ಈ ತತ್ವಗಳನ್ನು ಅಳವಡಿಸಿಕೊಳ್ಳುವುದು ಅತ್ಯಂತ ಅಗತ್ಯವಾಗಿದೆ. ನಿತ್ಯ ಬಸವಣ್ಣರ ವಚನಗಳನ್ನು ಓದುವುದಕ್ಕಿಂತ ಅವುಗಳನ್ನು ನಮ್ಮ ಜೀವನದಲ್ಲಿ ಅನುಸರಿಸಿದಾಗ ಮಾತ್ರ ನಿಜವಾದ ಭಕ್ತಿ ಮೂಡುತ್ತದೆ. ಸತ್ಯ, ನಿಷ್ಠೆ, ಸೇವೆ, ಸಮಾನತೆ ಇವೆಲ್ಲವೂ ನಮ್ಮ ನಡೆ–ನುಡಿಯಲ್ಲಿ ಕಾಣಿಸಬೇಕು ಎಂದು ನುಡಿದರು.

ಮೈಸೂರು ಕುಂದೂರು ಮಠದ ಡಾ.ಶರತ್ ಚಂದ್ರ ಸ್ವಾಮೀಜಿ ವಿಶೇಷ ಉಪನ್ಯಾಸ ನೀಡಿ ಮಾತನಾಡಿ, ಬಸವಣ್ಣನವರ ಜೀವನ ನಮ್ಮ ಬದುಕಾಗಲಿ ಎಂಬುದು ನಮ್ಮ ಸಂಕಲ್ಪವಾಗಬೇಕು ಎಂದರು.

ಬಸವಣ್ಣನವರು ಸ್ಪಷ್ಟವಾಗಿ ತಿಳಿಸಿದಂತೆ ಲಿಂಗಪೂಜೆ ಮಾಡುವುದಕ್ಕಿಂತ ಸಮಾಜ ಸೇವೆ ಮಾಡುವುದು ನಿಜವಾದ ಧರ್ಮ. ಬಸವಣ್ಣನವರ ದೃಷ್ಟಿಯಲ್ಲಿ ಭಗವಂತ ಕೇವಲ ದೇವಸ್ಥಾನದಲ್ಲಿಲ್ಲ. ಆತ ಪ್ರತಿಯೊಬ್ಬ ಮಾನವನಲ್ಲಿದ್ದಾನೆ. ಹೀಗಾಗಿ ಹಸಿದವನಿಗೆ ಅನ್ನ ಕೊಡುವುದು, ಬಡವನಿಗೆ ನೆರವಾಗುವುದು, ದುಃಖದಲ್ಲಿರುವವರಿಗೆ ಧೈರ್ಯ ತುಂಬುವುದು ನಿಜವಾದ ಲಿಂಗ ಪೂಜೆ ಎಂದರು.

ಕಾರ್ಯಕ್ರಮದಲ್ಲಿ ಮಾಡ್ರಹಳ್ಳಿ ಪಟ್ಟದ ಮಠದ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಹಲವಾರ ಮುಡುಕನಪುರ ಮಠದ ಷಡಕ್ಷರ ದೇಶಿಕೇಂದ್ರ ಸ್ವಾಮೀಜಿ, ಸರಗೂರು ಹೊಸ ಮಠಾಧ್ಯಕ್ಷ ಬಸವರಾಜೇಂದ್ರ ಸ್ವಾಮೀಜಿ, ಕಳ್ಳೀಪುರ ಮಠದ ಗುರುಪಾದ ಶಿವಾಚಾರ್ಯ ಸ್ವಾಮೀಜಿ, ಸೇತುವೆ ಮಠದ ಸಹಜಾನಂದ ಸ್ವಾಮೀಜಿ, ಮುಡುಕುತೊರೆ ರೇಣುಕಾ ಶಿವಾಚಾರ್ಯ ಸ್ವಾಮೀಜಿ, ವಿದ್ಯೋದಯ ಶಿಕ್ಷಣ ಸಂಸ್ಥೆ ಪ್ರಧಾನ ಕಾರ್ಯದರ್ಶಿ ಕೆ.ಪಿ.ಮಹದೇವ ಸ್ವಾಮಿ, ಕೃಷಿಕ ಸಮಾಜದ ಅಧ್ಯಕ್ಷ ಬಿ.ಎಂ.ಶಿವಮಲ್ಲಪ್ಪ, ಬಸವ ಬಳಗದ ಅಧ್ಯಕ್ಷ ಹಲವಾರ ಪರಮೇಶ್ ಪಟೇಲ್, ಶ್ರೀಶಿವಕುಮಾರಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ ಬಜ್ಜಿ ನಿಂಗಪ್ಪ, ಕಾರ್ಯದರ್ಶಿ ಮಾಯಪ್ಪ, ಸಂಚಾಲಕ ಅದೃಷ್ಟ ಮಾದಪ್ಪ, ಬಸಪ್ಪ, ನಿರ್ದೇಶಕರಾದ ಕಾರ್ ಮಲ್ಲಪ್ಪ, ಆರ್.ಶಿವಕುಮಾರ್, ಕೆ.ಮಲ್ಲು, ಕೈಯ್ಯಂಬಳ್ಳಿ ಅಶೋಕ್, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕ ಮಹೇಶ್, ಬಿ.ವೀರಭದ್ರಪ್ಪ, ಎಸ್‌ಎಂಆರ್ ಪ್ರಕಾಶ್, ಉಪನ್ಯಾಸಕ ಮೂಗೂರು ಕುಮಾರಸ್ವಾಮಿ, ತೊಟ್ಟವಾಡಿ ರವಿ, ಜ್ಯೋತಿ ಪರಮೇಶ್ ಪಟೇಲ್ ಸೇರಿದಂತೆ ಅಕ್ಕಮಹಾದೇವಿ ಮಹಿಳಾ ಭಜನಾ ಸಂಘದ ಸದಸ್ಯ ರೂಪಶ್ರೀ ಪರಮೇಶ್ ಸೇರಿದಂತೆ ಮತ್ತಿತರರಿದ್ದರು.

ಖಾಸಗಿ ವ್ಯಕ್ತಿಯಿಂದ ಸರ್ಕಾರಿ ಜಮೀನು ಒತ್ತುವರಿ

• ನಿವೇಶನ ನಿರ್ಮಿಸಿ ಮಾರಾಟ • ವಶಕ್ಕೆ ಪಡೆಯುವಂತೆ ಬಿಜೆಪಿ ಮುಖಂಡ ಅನಂತ್ ಒತ್ತಾಯ



ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಅನಂತ್ ಮಾತನಾಡಿದರು.

ನಂಜನಗೂಡು, ಮೇ 4– ಇಲ್ಲಿನ ನೀಲಕಂಠ ನಗರದ ಬಳಿ 26 ಗುಂಟೆ ಸರ್ಕಾರಿ ಜಮೀನನ್ನು ಖಾಸಗಿ ವ್ಯಕ್ತಿಯೊಬ್ಬರು ಒತ್ತುವರಿ ಮಾಡಿಕೊಂಡು ನಿವೇಶನ ನಿರ್ಮಿಸಿ ಮಾರಾಟ ಮಾಡುತ್ತಿದ್ದು, ಕಂದಾಯ ಅಧಿಕಾರಿಗಳು ಕ್ರಮವಹಿಸಿ ಸರ್ಕಾರಿ ಜಮೀನನ್ನು ವಶಕ್ಕೆ ಪಡೆಯಬೇಕು ಎಂದು ಬಿಜೆಪಿ ಮುಖಂಡ ಅನಂತ್ ಒತ್ತಾಯಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನೀಲಕಂಠ ನಗರದ ಸರ್ವೆ ನಂ.1325ರ ಮಾಲೀಕ ಮಸಣಶೆಟ್ಟಿ ಎಂಬುವರು ತಮ್ಮ 1.32 ಎಕರೆ ಜಮೀನಿಗೆ ಇತ್ತೀಚೆಗೆ ಸರ್ಕಾರದಿಂದ ಸಾಗುವಳಿ ಚೀಟಿ ಪಡೆದಿದ್ದು, 15 ವರ್ಷಗಳ ಕಾಲ ಪರಭಾರೆ ಮಾಡಬಾರದು ಎಂಬ ಸರ್ಕಾರದ ನಿಯಮವಿದ್ದರೂ ಸಹ ಸರ್ಕಾರದಿಂದ ಯಾವುದೇ ಅನುಮತಿ ಪಡೆಯದೆ ಭೂ ಪರಿವರ್ತನೆ ನಡೆಸದೆ, ವಸತಿ ನಿವೇಶನಗಳನ್ನು ಮಾಡಿ ಮಾರಾಟ ಮಾಡುತ್ತಿದ್ದಾರೆ. ಅಲ್ಲದೇ ಇದರ ಪಕ್ಕದಲ್ಲಿರುವ ಸರ್ವೆ ನಂ 1324ರಲ್ಲಿ 26 ಗುಂಟೆ ಸರ್ಕಾರಿ ಜಮೀನಿದ್ದು, ಈಗಲೂ ಆರ್‌ಟಿಸಿಯಲ್ಲಿ ಚಕ್ರ ಇನಾಂ ಸರ್ಕಾರಿ ಭೂಮಿ ಎಂದೇ ನಮೂದಾಗಿದೆ. ಈ ಜಮೀನು ನಗರದ ಮಧ್ಯ ಭಾಗದಲ್ಲಿರುವುದರಿಂದ ನಾಲ್ಕರಿಂದ ಐದು ಕೋಟಿ ಬೆಲೆ ಬಾಳುತ್ತದೆ. 1325ರ ಮಾಲೀಕ ಮಸಣಶೆಟ್ಟಿ ಎಂಬುವರು ಸರ್ಕಾರಿ ಭೂಮಿ ಒತ್ತುವರಿ ಮಾಡಿಕೊಂಡು ವಸತಿ ನಿವೇಶನ ಮಾಡಿ ಮಾರಾಟ ಮಾಡಲು ಮುಂದಾಗಿದ್ದಾರೆ. ಸರ್ಕಾರಿ ಜಮೀನನ್ನು ವಶಕ್ಕೆ ಪಡೆಯುವಂತೆ ಜಿಲ್ಲಾಧಿಕಾರಿಗಳು, ಅಪರ ಜಿಲ್ಲಾಧಿಕಾರಿಗಳು ಮತ್ತು ತಹಸೀಲ್ದಾರ್ ಜೊತೆಗೆ ಶಾಸಕರಿಗೂ ಮನವಿ ಮಾಡಲಾಗಿದೆ. ಜೊತೆಗೆ ಈ ಭೂಮಿ ದಿಶಾಂಕ ಆ್ಯಪ್‌ನಲ್ಲಿ ಸರ್ಕಾರಿ ಭೂಮಿ ಎಂದೇ ನಮೂದಾಗಿದೆ ಆದರೂ ಸಹ ಅಧಿಕಾರಿಗಳು ಕ್ರಮ ಕೈಗೊಳ್ಳಲು ಮುಂದಾಗುತ್ತಿಲ್ಲ. ಕ್ಷೇತ್ರದ ಶಾಸಕರೇ ಈ ಭೂಮಿ ಕಬಳಿಕೆಯ ಪಾಲುದಾರರಾಗಿ ತಮ್ಮ ಬೆಂಬಲಿಗರು ಹಾಗೂ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್ ಎಂಬುವರನ್ನು ನನ್ನ ಬಳಿ ಕಳುಹಿಸಿದ್ದರು. ಅವರು ನಿಮಗೆ 3 ನಿವೇಶನ ನೀಡುವುದಾಗಿ ಆಮಿಷವೊಡ್ಡಿದರು ಎಂದು ಆಪಾದಿಸಿದರು.

ಬಡಾವಣೆಯಲ್ಲಿ ನಡೆಯುತ್ತಿರುವ ಭೂಕಬಳಿಕೆ ಬಗ್ಗೆ ಸಾರ್ವಜನಿಕರು ದೂರು ನೀಡಲು ಹೋದರೆ ಶಾಸಕರು ರೌಡಿಶೀಟರ್‌ಗಳನ್ನು ಜೊತೆಯಲ್ಲಿರಿಸಿಕೊಂಡು ಸಾರ್ವಜನಿಕರು ಹತ್ತಿರ ಸುಳಿಯಲು ಬಿಡುತ್ತಿಲ್ಲ. ಆದ್ದರಿಂದ ಈ ಕೂಡಲೇ ಅಧಿಕಾರಿಗಳು ಮತ್ತು ಶಾಸಕರು ಎಚ್ಚೆತ್ತುಕೊಂಡು ಒತ್ತುವರಿಯಾಗಿರುವ ಸರ್ಕಾರಿ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆಯಬೇಕು. ಇಲ್ಲವಾದಲ್ಲಿ ಉಗ್ರ ಪ್ರತಿಭಟನೆ ರೂಪಿಸುವುದಾಗಿ ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ನಗರ ಬಿಜೆಪಿ ಅಧ್ಯಕ್ಷ ಸಿದ್ದರಾಜು, ಪ್ರಧಾನ ಕಾರ್ಯದರ್ಶಿ ರಾಘವೇಂದ್ರ, ರತ್ನಾಕರ, ಮುಖಂಡರಾದ ರಾಘವೇಂದ್ರ ಉಪಸ್ಥಿತರಿದ್ದರು.

ಎಂ.ಸೀಹಳ್ಳಿಯಲ್ಲಿ ಕೆರೆ ಜೀರ್ಣೋದ್ಧಾರಕ್ಕೆ ಭೂಮಿ ಪೂಜೆ



ಕೆರೆ ಜೀರ್ಣೋದ್ಧಾರ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

ಮೂಗೂರು, ಮೇ 4– ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮೂಗೂರು ವಲಯದ ಎಂ.ಸೀಹಳ್ಳಿ ಗ್ರಾಮದಲ್ಲಿ ನಮ್ಮೂರು ನಮ್ಮ ಕೆರೆ ಯೋಜನೆ ಅಡಿ ಕೆರೆ ಜೀರ್ಣೋದ್ಧಾರ ಕಾಮಗಾರಿಗೆ ತಾಲೂಕು ಯೋಜನಾಧಿಕಾರಿ ನಾಗೇಶ್ ನಾಯಕ್ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ನಮ್ಮೂರು ನಮ್ಮ ಕೆರೆ ಯೋಜನೆ ಬಹಳ ಪ್ರಮುಖ ಯೋಜನೆಯಾಗಿದ್ದು, ಕೆರೆಗಳ ಜೀರ್ಣೋದ್ಧಾರ ಮಾಡುವುದು ಈ ಯೋಜನೆಯ ಉದ್ದೇಶವಾಗಿದೆ. ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಹಲವು ಸಮಾಜಮುಖಿ ಕಾರ್ಯಗಳನ್ನು ಮಾಡುತ್ತಾ ಬಂದಿದೆ. ಜನತೆ ಸೌಹಾರ್ದತೆಯಿಂದ ಒಗ್ಗೂಡಿ ಸಂಸ್ಥೆ ಪ್ರಯೋಜನ ಪಡೆಯಲು ಮುಂದಾಗಬೇಕು ಎಂದರು.

ಮೈಸೂರು ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ ಮಾತನಾಡಿ, ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಹಣಕಾಸಿನ ವ್ಯವಹಾರಕ್ಕೆ ಸೀಮಿತವಾಗದೆ ಜನಪರ ಕಾರ್ಯಗಳಿಗೂ ಆದ್ಯತೆ ನೀಡುತ್ತಿದೆ. ಸಂಸ್ಥೆ ಗ್ರಾಮಕ್ಕೆ ನೀಡಿದ ಕೊಡುಗೆಯನ್ನು ಶಾಶ್ವತವಾಗಿ ಉಳಿಸಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬರದ್ದಾಗಿದೆ. ಆಗ ಸಂಸ್ಥೆಯ ಯೋಜನೆಗಳು ಫಲಪ್ರದವಾಗಲಿದೆ. ಕೆರೆ ಜೀರ್ಣೋದ್ಧಾರದಿಂದ ಅಂತರ್ಜಲ ವೃದ್ಧಿಯಾಗುವ ಜೊತೆಗೆ ಬೇಸಿಗೆಯಲ್ಲಿ ಪ್ರಾಣಿ ಪಕ್ಷಿಗಳಿಗೆ ನೀರುಣಿಸುವ ಪುಣ್ಯದ ಕೆಲಸವಾಗಲಿದೆ ಎಂದರು.

ಈ ವೇಳೆ ಕಬ್ಬು ಬೆಳೆಗಾರ ರೈತ ಸಂಘದ ಅಧ್ಯಕ್ಷ ಕಿರಂಗಸೂರು ಶಂಕರ್, ಕಾರ್ಯದರ್ಶಿ ಕಿರಗಸೂರು ಪ್ರಸಾದ್, ಯೋಜನಾಧಿಕಾರಿ ನಾಗೇಶ್ ನಾಯಕ್, ಮೈಸೂರು ಪ್ರಾದೇಶಿಕ ಕೆರೆ ಅಭಿಯಂತರ ಪುಷ್ಪರಾಜ್, ಕೆರೆ ಸಮಿತಿ ಅಧ್ಯಕ್ಷ ಸೀಹಳ್ಳಿ ಗುರುಮೂರ್ತಿ, ಉಪಾಧ್ಯಕ್ಷ ತಾಂಡವ ಮೂರ್ತಿ, ಸಮಿತಿ ಸದಸ್ಯ ಮಹದೇವ ಸ್ವಾಮಿ, ಗ್ರಾಪಂ ಸದಸ್ಯರು, ವಲಯದ ಮೇಲ್ವಿಚಾರಕರು ಕುಮಾರಿ ಮತ್ತು ತಾಲೂಕು ಕೃಷಿ ಮೇಲ್ವಿಚಾರಕ ಶಿವಶಂಕರ, ಸೇವಾ ಪ್ರತಿನಿಧಿ ಮಮತ, ಸ್ವಸಹಾಯ ಸಂಘದ ಸದಸ್ಯರು, ಗ್ರಾಮಸ್ಥರು ಉಪಸ್ಥಿತರಿದ್ದರು.

ಕುಮಾರಸ್ವಾಮಿ ಅಭಿಮಾನಿ ಬಳಗದ ಪದಾಧಿಕಾರಿಗಳ ಆಯ್ಕೆ



ಸುದ್ದಿಗೋಷ್ಠಿಯಲ್ಲಿ ಎಡತೊರೆ ದೇವರಾಜು ಮಾತನಾಡಿದರು.

ಹೆಚ್.ಡಿ.ಕೋಟೆ, ಮೇ 4– ತಾಲೂಕಿನ ಕರುನಾಡ ಜನನಾಯಕ ಕುಮಾರ ಸ್ವಾಮಿ ಅಭಿಮಾನಿ ಬಳಗದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಎಡತೊರೆ ದೇವರಾಜು ತಿಳಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ 3 ವರ್ಷದ ಹಿಂದೆ ಕರುನಾಡ ಜನನಾಯಕ ಕುಮಾರಸ್ವಾಮಿ ಅಭಿಮಾನಿ ಬಳಗವನ್ನು ರಚಿಸಿ, ಅಧ್ಯಕ್ಷರನ್ನಾಗಿ ಬದನ ಕುಪ್ಪೆ ರವಿಕುಮಾರ್ ಅವರನ್ನು ಆಯ್ಕೆ ಮಾಡಲಾಗಿತ್ತು. ಆದರೆ ಅವರು ಯಾವುದೇ ಸಂಘಟನೆಯಲ್ಲಿ ಪಾಲ್ಗೊಳ್ಳದ ಕಾರಣ ನಾವು ನೂತನ ಅಧ್ಯಕ್ಷರು ಮತ್ತು ಪದಾಧಿಕಾರಿಗಳನ್ನು ಆಯ್ಕೆ ಮಾಡಿದ್ದೇವೆ ಎಂದರು.

ಇದೀಗ ಬಳಗದ ನೂತನ ಅಧ್ಯಕ್ಷರಾಗಿ ಹೆಚ್.ಎ.ರಮೇಶ್, ಉಪಾಧ್ಯಕ್ಷ ಹೆಚ್.ಪಿ.ಚಲುವರಾಜು, ಡಿ.ಟಿ.ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಸಿ.ಎಸ್.ಶ್ರೀನಿವಾಸ, ಖಜಾಂಚಿ ಸಿ.ಆರ್.ಜಗದೀಶ್, ಗೌರವಾಧ್ಯಕ್ಷ ಜಿ.ಕೆ.ಕೆಂಪರಾಜು, ಸಂಘಟನಾ ಕಾರ್ಯದರ್ಶಿ ಮಂಜೇಗೌಡ, ಕಾರ್ಯಾಧ್ಯಕ್ಷ ದೇವರಾಜು, ಸಹ ಕಾರ್ಯದರ್ಶಿ ಬಾಲಕೃಷ್ಣ, ಮಾಧ್ಯಮ ಸಲಹೆಗಾರ ಸಿದ್ದಲಿಂಗೇಗೌಡ ಆಯ್ಕೆಯಾಗಿದ್ದಾರೆ ಎಂದರು.

ವೈಭವದ ಶ್ರೀಲಕ್ಷ್ಮೀ ನರಸಿಂಹಸ್ವಾಮಿ ರಥೋತ್ಸವ



ಹುಣಸೂರಲ್ಲಿ ಶ್ರೀಲಕ್ಷ್ಮೀ ನರಸಿಂಹಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಹುಣಸೂರು, ಮೇ 4– ನಗರದ ಬ್ರಾಹ್ಮಣರ ಬಡಾವಣೆಯಲ್ಲಿ ಶ್ರೀಲಕ್ಷ್ಮೀ ನರಸಿಂಹಸ್ವಾಮಿ ಅವರ 190ನೇ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಲಕ್ಷ್ಮಣತೀರ್ಥ ನದಿ ದಂಡೆ ಮೇಲಿರುವ ಶ್ರೀಲಕ್ಷ್ಮೀ ನರಸಿಂಹಸ್ವಾಮಿ ದೇವಾಲಯದಲ್ಲಿ ಅರ್ಚಕ ನಾರಾಯಣಮೂರ್ತಿ ನೇತೃತ್ವದಲ್ಲಿ ವಿವಿಧ ಪೂಜಾ ಕೈಂಕರ್ಯಗಳನ್ನು ನಡೆಸಿದ ಬಳಿಕ ಉತ್ಸವ ಮೂರ್ತಿಯನ್ನು ಅಲಂಕೃತ ರಥದಲ್ಲಿಟ್ಟು ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ನೆರೆದಿದ್ದ ಅಪಾರ ಬಂಧುಗಳು ರಥ ಎಳೆದು ಪುನೀತರಾದರು.

ಬಿರು ಬಿಸಿಲಿನ ನಡುವೆ ನಡೆದ ರಥೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದ ಮಹಿಳೆಯರು ರಥವನ್ನು ಭಕ್ತಿಭಾವದಿಂದ ಎಳೆದರು. ಪುರುಷ ಭಕ್ತರು ಕೈ ಜೋಡಿಸಿದರು. ರಥವನ್ನು ಜೆಎಲ್‌ಬಿ ರಸ್ತೆಯ ಲಕ್ಷ್ಮೀವಿಲಾಸ್ ಸರ್ಕಲ್‌ವರೆಗೆ ಎಳೆದೊಯ್ದು, ಪುನಃ ಸ್ವಸ್ಥಾನಕ್ಕೆ ರಥ ತರಲಾಯಿತು. ರಸ್ತೆಯುದ್ದಕ್ಕೂ ಮನೆಗಳ ಬಳಿ ಪೂಜೆ ಸಲ್ಲಿಸಲಾಯಿತು.

ದೇವಾಲಯದ ಸಂಚಾಲಕ ಗುರುರಾಜ್, ಪುರೋಹಿತರಾದ ಶ್ರೀಹರಿ, ಚಂದ್ರಮೌಳಿ, ಬ್ರಾಹ್ಮಣರ ಸಂಘದ ಅಧ್ಯಕ್ಷ ಭಾಸ್ಕರ್‌ಭಟ್, ಮುಖಂಡರಾದ ಸತ್ಯವತಿ, ಸುಬ್ಬಣ್ಣ, ಸಂಪತ್ ಕುಮಾರ್, ಕುಮಾರ ನಾಯ್ಕ, ಮಂಜು ಮೊದಲಿಯಾರ್, ಶ್ರೀದತ್ತ, ಏಕಾಂತ್, ಮಾದೇವ, ಅಮಿತ್, ರಾಜು, ಪವನ್, ಶಿವಕುಮಾರ್, ನಂದಿ, ಮಹೇಶ್, ಪವನ್ ಮತ್ತಿತರರು ರಥೋತ್ಸವದ ನೇತೃತ್ವ ವಹಿಸಿದ್ದರು. ನಗರಸಭಾ ಮಾಜಿ ಸದಸ್ಯ ಸ್ವಾಮಿಗೌಡ, ದಸಂಸದ ನಿಂಗರಾಜ ಮಲ್ಲಾಡಿ, ರೇಣುಕಾ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ ನೂರಾರು ಭಕ್ತರು ರಥೋತ್ಸವದಲ್ಲಿ ಭಾಗವಹಿಸಿದ್ದರು. ಸಾವಿರಾರು ಮಂದಿಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು.

ಕನ್ನಾಯಕನಹಳ್ಳಿಯಲ್ಲಿ ವಿಜೃಂಭಣೆಯ ಶ್ರೀಒಡ್ಗಲ್ ರಂಗನಾಥಸ್ವಾಮಿ, ಮಾರಮ್ಮ ದೇವಿ ಮೆರವಣಿಗೆ




ಶ್ರೀಒಡ್ಗಲ್ ರಂಗನಾಥಸ್ವಾಮಿ, ಮಾರಮ್ಮ ದೇವಿ ಮೆರವಣಿಗೆ ನಡೆಯಿತು.

ತಿ.ನರಸೀಪುರ, ಮೇ 4– ತಾಲೂಕಿನ ಕನ್ನಾಯಕನಹಳ್ಳಿ ಗ್ರಾಮದಲ್ಲಿ 13 ವರ್ಷಗಳ ಬಳಿಕ ಶ್ರೀಒಡ್ಗಲ್ ರಂಗನಾಥ ಸ್ವಾಮಿ ಹಾಗೂ ಗ್ರಾಮದೇವತೆ ಕನ್ನಾಯಕನಹಳ್ಳಿ ಮಾರಮ್ಮ ದೇವಿ ಮೆರವಣಿಗೆ ವಿಜೃಂಭಣೆಯಿಂದ ನಡೆಯಿತು.

ಸಂಜೆ ಸುಮಾರು 5 ಗಂಟೆಗೆ ಆರಂಭವಾದ ಉತ್ಸವದ ಮೆರವಣಿಗೆ ರಾತ್ರಿ 9 ಗಂಟೆವರೆಗೂ ನಡೆಯಿತು. ಗ್ರಾಮದ ಯುವಕರು, ಹಿರಿಯರು, ಯಜಮಾನರು ಸೇರಿದಂತೆ ಎಲ್ಲಾ ಗ್ರಾಮಸ್ಥರು ಸಂಭ್ರಮದಿಂದ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಬಳಿಕ ಭಕ್ತರು ಹಾಗೂ ಸಾರ್ವಜನಿಕರಿಗೆ ಅನ್ನ ಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು ಎಂದು ಯುವ ಮುಖಂಡ ಸುನೀಲ್ ಬೋಸ್ ಯುವ ಬ್ರಿಗೇಡ್ ಅಧ್ಯಕ್ಷ ಕುಮಾರ್ ರಾಮೇಗೌಡ ತಿಳಿಸಿದರು.

ನೂತನ ಕ್ಷೇತ್ರ ಶಿಕ್ಷಣಾಧಿಕಾರಿಗೆ ಸ್ವಾಗತ



ಹುಣಸೂರು ತಾಲೂಕಿನ ನೂತನ ಕ್ಷೇತ್ರ ಶಿಕ್ಷಣಾಧಿಕಾರಿ ಹೆಚ್.ಕಾಳನಾಯಕ ಅವರನ್ನು ಮುಳ್ಳೂರು ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಎಸ್.ವಸಂತಕುಮಾರ, ಕರ್ಣಕುಪ್ಪೆ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿ ಹಾಳೇಗೌಡ, ಮುಖ್ಯ ಶಿಕ್ಷಕ ಸುರೇಶ, ಪ್ರೌಢಶಾಲಾ ಶಿಕ್ಷಕ ಮಹದೇವ, ಸಹ ಶಿಕ್ಷಕರಾದ ಪರಮೇಶ, ಚಂದ್ರೇಗೌಡ, ದೇವರಾಜು, ನಾಗರಾಜು, ಮಂಜುನಾಥ್ ಸ್ವಾಗತಿಸಿದರು.

ಪಂಚ ಗ್ಯಾರಂಟಿ ಯೋಜನೆಯಿಂದಾಗಿ

ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಭರ್ಜರಿ ಗೆಲುವು



ಹೇಮಂತ್

ಕೆ.ಆರ್.ನಗರ, ಮೇ 4–ಪಂಚ ಗ್ಯಾರಂಟಿ ಯೋಜನೆ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾರದರ್ಶಕ ಆಡಳಿತದಿಂದಾಗಿ ರಾಜ್ಯದ 2 ವಿಧಾನಸಭಾ ಕ್ಷೇತ್ರಗಳಿಗೆ ನಡೆದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಿದೆ ಎಂದು ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಸದಸ್ಯ ಗಂಧನಹಳ್ಳಿ ಹೇಮಂತ್ ತಿಳಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, 2 ಕ್ಷೇತ್ರಗಳ ಉಪ ಚುನಾವಣಾ ಫಲಿತಾಂಶ ಎಲ್ಲಾ ಚುನಾವಣೋತ್ತರ ಫಲಿತಾಂಶಗಳನ್ನು ಮೀರಿ ಬಂದಿದೆ. ಆ ಮೂಲಕ ಜನತೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಅಭಿವೃದ್ಧಿ ಕಾರ್ಯಗಳಿಗೆ ಬೆಂಬಲ ನೀಡಿದ್ದಾರೆ ಎಂದಿದ್ದಾರೆ.

ಬಿಜೆಪಿಯವರು ಏನು ಬೇಕಾದರೂ ಹೇಳಿಕೊಳ್ಳಬಹುದು. ಆದರೆ ಕಾಂಗ್ರೆಸ್ ಸರ್ಕಾರ ಚುನಾವಣೆ ಪೂರ್ವ ನೀಡಿದ್ದ ಭರವಸೆಗಳನ್ನು ಈಡೇರಿಸಿದ್ದು, 5 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ನುಡಿದಂತೆ ನಡೆದಿದೆ. ರಾಜ್ಯದ ಜನರು ಮತ್ತೊಮ್ಮೆ ಕಾಂಗ್ರೆಸ್ ಪರವಾಗಿದ್ದಾರೆ ಎನ್ನುವುದಕ್ಕೆ ಈ ಉಪ ಚುನಾವಣೆ ಫಲಿತಾಂಶ ಸಾಕ್ಷಿಯಾಗಿದೆ. ದಲಿತರು, ಹಿಂದುಳಿದ ವರ್ಗದವರು, ಬಡವರು, ರೈತರು ಮತ್ತು ಅಲ್ಪಸಂಖ್ಯಾತರು ಸೇರಿದಂತೆ ಎಲ್ಲರೂ ನಮ್ಮೊಂದಿಗಿದ್ದಾರೆ ಎಂದು ತಿಳಿಸಿದ್ದಾರೆ.

ಗ್ಯಾರಂಟಿ ಯೋಜನೆ ರಾಜ್ಯದ ಜನತೆಗೆ ಸಮರ್ಪಕವಾಗಿ ತಲುಪಿದೆ. ಹಾಗಾಗಿ ಈ ಉಪ ಚುನಾವಣೆಯಲ್ಲಿ ಮತದಾರರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳನ್ನು ಬೆಂಬಲಿಸಿದ್ದಾರೆ ಎಂದಿರುವ ಅವರು 2028ಕ್ಕೆ ರಾಜ್ಯದಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಪಕ್ಷ ಅಧಿಕಾರ ಹಿಡಿಯಲಿದೆ ಎಂದು ಭವಿಷ್ಯ ನುಡಿದಿದ್ದಾರೆ.

ಹೋಂ ಸ್ಟೇ, ರೆಸಾರ್ಟ್ ಸಿಬ್ಬಂದಿ ವೆರಿಫಿಕೇಶನ್ ಮಾಡಿಸಿ

ಮಾಲೀಕರಿಗೆ ಅಂತರಸಂತೆ ಠಾಣೆ ಎಸ್‌ಐ ಚಂದ್ರಹಾಸ್ ನಾಯಕ ಸೂಚನೆ



ರೆಸಾರ್ಟ್, ಹೋಂ ಸ್ಟೇ ಮಾಲೀಕರೊಂದಿಗೆ ಎಸ್‌ಐ ಚಂದ್ರಹಾಸ್ ನಾಯಕ ಸಭೆ ನಡೆಸಿದರು.

ಹೆಚ್.ಡಿ.ಕೋಟೆ, ಮೇ 4– ಹೋಂ ಸ್ಟೇ, ರೆಸಾರ್ಟ್‌ಗಳಲ್ಲಿ ಕೆಲಸ ಮಾಡುವ ಪ್ರತಿಯೊಬ್ಬ ಸಿಬ್ಬಂದಿ ಪೂರ್ವಪರ ಮಾಹಿತಿಗಾಗಿ ಸಿಬ್ಬಂದಿ ಸ್ಥಳೀಯರೇ ಆಗಿರಲಿ, ಹೊರ ರಾಜ್ಯದವರೇ ಆಗಿರಲಿ ಕಡ್ಡಾಯವಾಗಿ ನಮ್ಮ ಠಾಣೆಗೆ ಮಾಹಿತಿ ನೀಡಿ, ಪರಿಶೀಲನೆ ಮಾಡಿಸಬೇಕು ಎಂದು ಅಂತರಸಂತೆ ಠಾಣೆ ಎಸ್‌ಐ ಚಂದ್ರಹಾಸ್ ನಾಯಕ ಸೂಚಿಸಿದರು.

ತಾಲೂಕಿನ ಅಂತರಸಂತೆ ಪೊಲೀಸ್ ಠಾಣೆಯಲ್ಲಿ ಠಾಣಾ ವ್ಯಾಪ್ತಿಯ ಎಲ್ಲಾ ರೆಸಾರ್ಟ್ ಹಾಗೂ ಹೋಂ ಸ್ಟೇ ಮಾಲೀಕರು, ವ್ಯವಸ್ಥಾಪಕರೊಂದಿಗೆ ಸಭೆ ನಡೆಸಿದ ಅವರು, ಕೊಡಗಿನ ಹೋಂ ಸ್ಟೇನಲ್ಲಿ ಅಲ್ಲಿನ ಸಿಬ್ಬಂದಿ ವಿದೇಶಿ ಪ್ರವಾಸಿಯೊಬ್ಬರ ಮೇಲೆ ಅತ್ಯಾಚಾರವೆಸಗಿರುವ ವಿಚಾರ ಬೆಳಕಿಗೆ ಬಂದಿದ್ದು, ಕೂಡಲೇ ಆರೋಪಿಗಳನ್ನು ಬಂಧಿಸಲಾಗಿದೆ. ಹೀಗಾಗಿ ಇಲಾಖೆ ಮುಂಜಾಗ್ರತ ಕ್ರಮ ವಹಿಸಿದ್ದು, ನಿಮ್ಮ ರೆಸಾರ್ಟ್‌ಗಳಲ್ಲಿ ಕೆಲಸ ಮಾಡುವ ಎಲ್ಲಾ ಸಿಬ್ಬಂದಿಗಳ ಪೊಲೀಸ್ ವೆರಿಫಿಕೇಶನ್ ಮಾಡಿಸಬೇಕು. ಸೇವಾಸಿಂಧು ಮೂಲಕ ಅವರ ವೆರಿಫಿಕೇಶನ್ ಮಾಡಬಹುದಾಗಿದ್ದು, ಕೂಡಲೇ ನಿಮ್ಮ ಸಿಬ್ಬಂದಿಗೆ ತಿಳಿಸಿ ಎಂದು ಸೂಚಿಸಿದರು.

ನಿಮ್ಮ ರೆಸಾರ್ಟ್ ಹಾಗೂ ಹೋಂ ಸ್ಟೇಗಳಿಗೆ ಬರುವ ಪ್ರವಾಸಿಗರ ಮಾಹಿತಿ ಸಂಗ್ರಹಿಸಬೇಕು. ಅವರ ಸರಿಯಾದ ಮೊಬೈಲ್ ನಂಬರ್ ಪಡೆದುಕೊಳ್ಳಬೇಕು. ಕಡ್ಡಾಯವಾಗಿ ಸಿಸಿ ಕ್ಯಾಮೆರಾಗಳನ್ನು ಅಳವಡಿಸಬೇಕು. ಜೊತೆಗೆ ವಿದೇಶಿ ಪ್ರವಾಸಿಗರು ಬಂದಾಗ ತಪ್ಪದೇ ಠಾಣೆಗೆ ಸಿ–ಫಾರಂ ಸಲ್ಲಿಸಬೇಕು ಎಂದು ಕಟ್ಟುನಿಟ್ಟಿನ ಎಚ್ಚರಿಕೆ ನೀಡಿದರು.

ಮೇಲಧಿಕಾರಿಗಳ ಆದೇಶವಾಗಿದ್ದು, ಎಲ್ಲಾ ರೆಸಾರ್ಟ್ ಹಾಗೂ ಹೋಂಸ್ಟೇಗಳು ನಿಮ್ಮ ದಾಖಲೆಗಳನ್ನು ಕೂಡಲೇ ಸಲ್ಲಿಸಬೇಕು. ಪ್ರವಾಸೋದ್ಯಮ ಇಲಾಖೆಯಿಂದ ಅನುಮತಿ ಪಡೆದಿರುವುದು, ರೆಸಾರ್ಟ್ ಭೂ ಪರಿವರ್ತನೆಯಾಗಿರುವುದು ಸೇರಿದಂತೆ ಇತರೆ ಅಗತ್ಯ ದಾಖಲೆಗಳನ್ನು ನೀಡಬೇಕು. ಇವು ಇಲ್ಲದೇ ಮುಂದುವರಿದರೆ ಕಾನೂನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅಲ್ಲದೇ ರೆಸಾರ್ಟ್‌ಗಳಿಗೆ ನಮ್ಮ ಸಿಬ್ಬಂದಿ ಆಗಾಗ್ಗೆ ಭೇಟಿ ನೀಡಿ ಪರಿಶೀಲಿಸುತ್ತಾರೆ. ಈ ಸಂದರ್ಭ ಪ್ರವಾಸಿಗರ ದಾಖಲೆ, ಕ್ಯಾಮೆರಾ ಪರಿಶೀಲಿಸುತ್ತಾರೆ. ಜೊತೆಗೆ ಯಾವುದಾದರೂ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿರುವುದು ಕಂಡು ಬಂದರೆ ಶೀಘ್ರ ಕ್ರಮ ವಹಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸಿಸಿ ಕ್ಯಾಮರಾಗಳ ರೆಕಾರ್ಡ್ ಡೇಟಾ ಒಂದು ತಿಂಗಳವರೆಗೆ ಇರಲಿ. ಸಿಸಿ ಕ್ಯಾಮರಾ ಇಲ್ಲದವರು ಕೂಡಲೇ ಕ್ಯಾಮರ ಅಳವಡಿಸಬೇಕು ಎಂದು ಸೂಚಿಸಿದರು. ಅಂತರಸಂತೆ ಪೊಲೀಸ್ ಠಾಣಾ ವ್ಯಾಪ್ತಿಯ ವಿವಿಧ ರೆಸಾರ್ಟ್‌ಗಳು ಹಾಗೂ ಹೋಂ ಸ್ಟೇ ಮಾಲೀಕರು, ಇಲಾಖೆ ಸಿಬ್ಬಂದಿ ಹಾಜರಿದ್ದರು.

ವ್ಯಕ್ತಿ ನಾಪತ್ತೆ



ಸರಗೂರು, ಮೇ 4– ವ್ಯಕ್ತಿ ನಾಪತ್ತೆಯಾಗಿರುವ ಸಂಬಂಧ ಸರಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತಾಲೂಕಿನ ಕಾಳೇಗೌಡನಹುಂಡಿ ಗ್ರಾಮದ ನಿವಾಸಿ ಕೆ.ಬಿ.ರಾಜು (31) ನಾಪತ್ತೆಯಾದವರು. ಈತ ಏ.20ರಂದು ಬೆಳಗ್ಗೆ 11 ಗಂಟೆಗೆ ಬೈಕ್ ರಿಪೇರಿ ಮಾಡಿಸಿಕೊಂಡು ಬರುತ್ತೇನೆಂದು ಸ್ವಗ್ರಾಮದಿಂದ ಸರಗೂರಿಗೆ ಆಗಮಿಸಿದ್ದು, ಇದುವರೆಗೂ ಮನೆಗೆ ಆಗಮಿಸಿಲ್ಲ ಎಂದು ರಾಜು ಅವರ ತಂದೆ ಬಸವರಾಜು ಸರಗೂರು ಠಾಣೆಗೆ ದೂರು ನೀಡಿದ್ದಾರೆ. ಮಾಹಿತಿ ಸಿಕ್ಕಲ್ಲಿ ದೂ: 08228–265542, 9480805064 ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಪುಟ್ಟಮಾದಮ್ಮ ನಿಧನ




ತಿ.ನರಸೀಪುರ, ಮೇ 4– ಜಿಲ್ಲಾ ಜನಜಾಗೃತಿ ವೇದಿಕೆ ಜಿಲ್ಲಾಧ್ಯಕ್ಷ ಕೆ.ಎನ್.ಪ್ರಭುಸ್ವಾಮಿ ಅವರ ತಾಯಿ ಪುಟ್ಟಮಾದಮ್ಮ (75) ಸೋಮವಾರ ಸಂಜೆ ನಿಧನರಾದರು.

ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಸ್ವಗ್ರಾಮ ಕರೋಹಟ್ಟಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಫ್ಲೈಓವರ್, ರಸ್ತೆ ಅಗಲೀಕರಣಕ್ಕೆ 561 ಮರ ತೆರವು ಪ್ರಸ್ತಾಪ; ಸಾರ್ವಜನಿಕರಿಂದ ಅರಣ್ಯ ಇಲಾಖೆ ಆಕ್ಷೇಪಣೆ ಆಹ್ವಾನ

ಮೇ 7 ತಕರಾರು ಸಲ್ಲಿಕೆಗೆ ಕಡೇ ದಿನ


ಫ್ಲೈಓವರ್ ನಿರ್ಮಾಣ ಕಾಮಗಾರಿಗೆ ತೆರವು ಮಾಡಲು ಗುರುತಿಸಿರುವ ಮರಗಳು.

ಮೈಸೂರು,ಮೇ.4(ಎಂಟಿವೈ)– ಬೆಂಗಳೂರು ರಸ್ತೆಯ ಮೈಸೂರು ಮಣಿಪಾಲ್ ಆಸ್ಪತ್ರೆ ಬಳಿ ಫ್ಲೈಓವರ್ ನಿರ್ಮಾಣ ಹಾಗೂ ನಂಜನಗೂಡು, ತಿ.ನರಸೀಪುರ ರಸ್ತೆಯ ಅಗಲೀಕರಣಕ್ಕಾಗಿ 561 ಮರಗಳ ತೆರವಿಗೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮನವಿ ಮಾಡಿದ್ದು, ಈ ಸಂಬಂಧ ಅರಣ್ಯ ಇಲಾಖೆ ಮೇ.7ರಂದು ಸಂಜೆ 5 ಗಂಟೆಯೊಳಗೆ ಆಕ್ಷೇಪಣೆಯಿದ್ದರೆ ಇ–ಮೇಲ್ ಅಥವಾ ಅಂಚೆ ಮೂಲಕ ಸಲ್ಲಿಸುವಂತೆ ಕೋರಿದೆ.

ಮಣಿಪಾಲ್ ಆಸ್ಪತ್ರೆ ಕಡೆಯಿಂದ ಸಿದ್ದಿಕ್ಕಿ ನಗರ, ಬನ್ನಿಮಂಟಪ ಹಾಗೂ ಫೌಂಟೇನ್ ವೃತ್ತದ ಕಡೆಗೆ ಬರುವ ರಸ್ತೆಯಲ್ಲಿ ಕೆಲವು ಮರಗಳು ಫ್ಲೈಓವರ್ ನಿರ್ಮಾಣಕ್ಕೆ ಅಡಚಣೆಯಾಗಿದ್ದು, ಅವುಗಳನ್ನು ತೆರವು ಮಾಡುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮನವಿ ಮಾಡಿದೆ. ಅಲ್ಲದೆ, ನಂಜನಗೂಡು ರಸ್ತೆಯಲ್ಲಿ ಮಂಡಕಳ್ಳಿ, ಕಡಕೊಳ ಬಳಿ, ತಿ.ನರಸೀಪುರ ರಸ್ತೆ ಅಗಲೀಕರಣಕ್ಕೆ ವರುಣ ವೃತ್ತ, ದುದ್ದಗೆರೆ, ಪುಟ್ಟೇಗೌಡನಹುಂಡಿ, ಎಂ.ಸಿ.ಹುಂಡಿ ಬಳಿಯೂ ಕೆಲವು ಮರಗಳನ್ನು ತೆರವು ಮಾಡುವಂತೆ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಲಾಗಿದೆ. ಈ ಮನವಿಯನ್ನು ಪುರಸ್ಕರಿಸಿರುವ ಅರಣ್ಯ ಇಲಾಖೆ ಸಾರ್ವಜನಿಕರಿಂದ ಆಕ್ಷೇಪಣೆಗೆ ಕಾಲಾವಕಾಶ ನೀಡಿದೆ.

ಫ್ಲೈಓವರ್‌ಗೆ 350 ಮರ ಹನನ: ಮೈಸೂರು–ಬೆಂಗಳೂರು ರಸ್ತೆಯ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ನಿರ್ಮಿಸುತ್ತಿರುವ ಫ್ಲೈಓವರ್ ವಿಸ್ತರಣೆಗೆ 350 ಮರಗಳನ್ನು ತೆರವು ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಈಗಾಗಲೇ ಫ್ಲೈಓವರ್ ಕಾಮಗಾರಿಗೆ ಬೃಹತ್ ಫಿಲ್ಲರ್ ನಿರ್ಮಾಣ ಕಾರ್ಯ ಬಿರುಸಾಗಿ ಸಾಗಿದೆ. ರಿಂಗ್‌ರಸ್ತೆಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಫ್ಲೈಓವರ್‌ಗೆ ಬನ್ನಿಮಂಟಪದ ರಸ್ತೆ, ಸಿದ್ದಿಕ್ಕಿನಗರದ ರಸ್ತೆ ಹಾಗೂ ರಿಂಗ್ ರಸ್ತೆಯ ಎರಡೂ ಬದಿಯಲ್ಲಿರುವ ಮರಗಳನ್ನು ತೆರವು ಮಾಡಲು ಗುರುತಿಸಲಾಗಿದೆ.

ಫ್ಲೈಓವರ್‌ಗೆ ಸಿದ್ದಿಕ್ಕಿನಗರದಿಂದ ಫೌಂಟೇನ್ ವೃತ್ತದ ಕಡೆಗೆ ಬರುವ ರಸ್ತೆಯಲ್ಲಿ 19 ಮರ, ಬನ್ನಿಮಂಟಪದ ರಸ್ತೆಯ ಪಾರ್ಕ್ ಆವರಣದಲ್ಲಿರುವ 256 ಗಿಡ, ಮರ, ಮಣಿಪಾಲ್ ಜಂಕ್ಷನ್‌ನಿಂದ ಹುಣಸೂರು ಕಡೆಗೆ ಹೋಗುವ ರಿಂಗ್ ರಸ್ತೆಯ ವಿಭಜಕದಲ್ಲಿರುವ 52 ಮರ, ಮಣಿಪಾಲ್ ಜಂಕ್ಷನ್‌ನಿಂದ ಮಹದೇವಪುರ(ಬನ್ನೂರು) ಕಡೆಗೆ ಹೋಗುವ ರಿಂಗ್ ರಸ್ತೆಯ ವಿಭಜಕದಲ್ಲಿರುವ 20 ಮರಗಳನ್ನು ತೆರವು ಮಾಡಲು ಗುರುತಿಸಲಾಗಿದೆ. ಈ 350 ಮರಗಳಲ್ಲಿ 3 ಶ್ರೀಗಂಧದ ಮರಗಳು ಸೇರಿದಂತೆ 347 ಜಾತಿಯ ಮರಗಳು ಸೇರಿವೆ.

ನಂಜನಗೂಡು ರಸ್ತೆಯಲ್ಲಿ 15 ಮರ: ಮೈಸೂರು–ನಂಜನಗೂಡು(ರಾಷ್ಟ್ರೀಯ ಹೆದ್ದಾರಿ 766) ಮುಖ್ಯರಸ್ತೆಯಲ್ಲಿ ಕಡಕೊಳದ ಟಿವಿಎಸ್ ಕಾರ್ಖಾನೆ ವೃತ್ತ ಹಾಗೂ ಮಂಡಕಳ್ಳಿ ಬಳಿ ರಸ್ತೆ ಅಗಲೀಕರಣಕ್ಕೆ 15 ಮರ ತೆರವಿಗೆ ಗುರುತಿಸಲಾಗಿದೆ. ಕಡಕೊಳದ ಟಿವಿಎಸ್ ಸರ್ಕಲ್ ಬಳಿ 11 ಮರ ಹಾಗೂ ಮಂಡಕಳ್ಳಿ ಬಳಿ 4 ಮರಗಳು ಸೇರಿವೆ.

ತಿ.ನರಸೀಪುರ ರಸ್ತೆಯಲ್ಲಿ 196 ಮರ: ತಿ.ನರಸೀಪುರ(ರಾಷ್ಟ್ರೀಯ ಹೆದ್ದಾರಿ 766) ರಸ್ತೆಯ ಅಗಲೀಕರಣ ಕಾಮಗಾರಿಗಾಗಿ ವಿವಿಧೆಡೆ 196 ಮರಗಳನ್ನು ತೆರವು ಮಾಡುವಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮನವಿ ಮಾಡಿದೆ. ಅದರಲ್ಲಿ ವರುಣ ವೃತ್ತದಲ್ಲಿ 26 ಮರ, ದುದ್ದಗೆರೆಯಿಂದ ಪುಟ್ಟೇಗೌಡನಹುಂಡಿವರೆಗೆ ರಸ್ತೆಯ ಎರಡೂ ಬದಿಯಲ್ಲಿರುವ 110 ಮರ ಹಾಗೂ ಎಂ.ಸಿ.ಹುಂಡಿ ಬಳಿ ರಸ್ತೆ ಬದಿಯಲ್ಲಿರುವ 60 ಮರಗಳನ್ನು ತೆರವು ಮಾಡುವಂತೆ ಅರಣ್ಯ ಇಲಾಖೆಗೆ ಮನವಿ ಸಲ್ಲಿಸಲಾಗಿದೆ.

ಅರಣ್ಯ ಇಲಾಖೆ ಪ್ರತ್ಯೇಕ ಮೂರು ಸ್ಥಳಗಳಲ್ಲಿ 561 ಮರಗಳ ತೆರವು ಮಾಡಲು ಹೆದ್ದಾರಿ ಪ್ರಾಧಿಕಾರ ಕೋರಿರುವ ಮನವಿ ಮೇರೆಗೆ ಸಾರ್ವಜನಿಕರಿಂದ ಆಕ್ಷೇಪವಿದ್ದರೆ ಸಲ್ಲಿಸುವಂತೆ ಕೋರಿದೆ. ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯ್ದೆ 1976(ತಿದ್ದುಪಡಿ ಕಾಯ್ದೆ 2014) 8(3) ಅಡಿ ಮರ ತೆರವಿಗಾಗಿ ಸಾರ್ವಜನಿಕರಿಂದ ಅಹವಾಲು ಆಲಿಸಲು ಮುಂದಾಗಿದೆ.

ಮೈಸೂರಿನ ಅಶೋಕಪುರಂನಲ್ಲಿರುವ ಅರಣ್ಯ ಭವನದಲ್ಲಿ ವಲಯ ಅರಣ್ಯಾಧಿಕಾರಿಗಳ ಕಚೇರಿಯಲ್ಲಿ ಸಾರ್ವಜನಿಕರ ಅಹವಾಲು ಸ್ವೀಕರಿಸಲು ಪೆಟ್ಟಿಗೆಯೊಂದನ್ನು ಇಡಲಾಗಿದ್ದು, ಅದರಲ್ಲಿ ಸಾರ್ವಜನಿಕರು ಆಕ್ಷೇಪಣಾ ಪತ್ರ ಸಲ್ಲಿಸಬಹುದಾಗಿದೆ. ಅಲ್ಲದೆ, ಇ–ಮೇಲ್ ಹಾಗೂ ಅಂಚೆ ಮೂಲಕವೂ ಮರಗಳ ಹನನಕ್ಕೆ ಆಕ್ಷೇಪಣೆ ಸಲ್ಲಿಸಲು ಅವಕಾಶ ನೀಡಲಾಗಿದೆ. ಮೇ.7ರಂದು ಸಂಜೆ 5.30ರೊಳಗೆ ಆಕ್ಷೇಪಣೆ ಸಲ್ಲಿಸಲು ಗಡುವು ನೀಡಲಾಗಿದೆ.

ಆಕ್ಷೇಪ ಸಲ್ಲಿಸಬೇಕಾದ ವಿಳಾಸ: ವೃಕ್ಷಾಧಿಕಾರಿ ಹಾಗೂ ವಲಯ ಅರಣ್ಯಾಧಿಕಾರಿ, ಮೈಸೂರು ಪ್ರಾದೇಶಿಕ ವಲಯ, ಅರಣ್ಯ ಭವನ, ಅಶೋಕಪುರಂ, ಮೈಸೂರು–570008 ಈ ವಿಳಾಸಕ್ಕೆ ಅಂಚೆ ಮೂಲಕ ಹಾಗೂ ಇ–ಮೇಲ್: rfomysore123@gmail.com ಇದಕ್ಕೆ ಇ–ಮೇಲೆ ಕಳುಹಿಸುವಂತೆ ಅರಣ್ಯ ಇಲಾಖೆ ಕೋರಿದೆ.

ಸರ್ಕಾರದ ಗಮನಕ್ಕೆ ತರಲಾಗುವುದು

“ಫ್ಲೈಓವರ್ ನಿರ್ಮಾಣ ಹಾಗೂ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ವಿವಿಧೆಡೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ 561 ಮರಗಳ ತೆರವಿಗೆ ಮನವಿ ಮಾಡಿದೆ. ಇದಕ್ಕೆ ನಿಯಮಾನುಸಾರ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಲು ಅರಣ್ಯ ಇಲಾಖೆ ಮುಂದಾಗಿದೆ. ಸಲ್ಲಿಕೆಯಾದ ಆಕ್ಷೇಪಣೆಗಳನ್ನು ಪರಿಶೀಲಿಸಿ, ಸಾರ್ವಜನಿಕರ ಅಭಿಪ್ರಾಯವನ್ನು ಸರ್ಕಾರದ ಗಮನಕ್ಕೆ ತರಲಾಗುವುದು. ಆ ನಂತರ ಸರ್ಕಾರ ಕೈಗೊಂಡ ನಿಲುವಿಗೆ ಇಲಾಖೆ ಕ್ರಮ ಕೈಗೊಳ್ಳಲಿದೆ.

- **ಕೆ.ಪರಮೇಶ್,** ಡಿಸಿಎಫ್ ಮೈಸೂರು ಪ್ರಾದೇಶಿಕ ವಲಯ

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕರ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಡಕಾಯಿಟ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಪೆಟ್ರಿಯೋಟ್ (ಮ)	4 ಪ್ರದರ್ಶನಗಳು
ಸಂಗಂ	
ಕರ (ತ)	4 ಪ್ರದರ್ಶನಗಳು
ಲಿಡೋ	
ಮಾಣಿಕ್ಯ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪುನೀತ್ ನಿವಾಸ (ಕ)	4 ಪ್ರದರ್ಶನಗಳು

ಶ್ರೀರಂಗಪಟ್ಟಣದ ಗಂಜಾಂ ಬಳಿ ಯುವಕನ ಭೀಕರ ಕೊಲೆ

ಶ್ರೀರಂಗಪಟ್ಟಣ, ಮೇ 4(ಬಿಎಲ್‌ಯು)– ಯುವಕನನ್ನು ಭೀಕರವಾಗಿ ಕೊಚ್ಚಿ ಕೊಲೆ ಮಾಡಿರುವ ಘಟನೆ ಶ್ರೀರಂಗಪಟ್ಟಣದ ಗಂಜಾಂ ಬಳಿಯ ನಿಮಿಷಾಂಬ ದೇವಸ್ಥಾನ ರಸ್ತೆಯಲ್ಲಿ ನಿನ್ನೆ ಸಂಭವಿಸಿದೆ.

ಮೈಸೂರಿನ ಗೌಸಿಯಾ ನಗರದ ಮೊಹಮ್ಮದ್ ಶೋಹೆಬ್ (27) ಕೊಲೆಯಾದ ಯುವಕ.

ಶೋಹೆಬ್

ಮೊಹಮ್ಮದ್ ಶೋಹೆಬ್ ಸೆಕೆಂಡ್ ಹ್ಯಾಂಡ್ ಕಾರು ಡೀಲರ್ ಆಗಿದ್ದ. ಕಾರು ಮಾರಾಟ ವ್ಯವಹಾರದ ಬಗ್ಗೆ ಮಾತನಾಡಬೇಕೆಂದು ಆತನನ್ನು ನಿನ್ನೆ ಸಂಜೆ 5.30 ಗಂಟೆಯಲ್ಲಿ ಗಂಜಾಂ ಬಳಿ ಕರೆಸಿಕೊಂಡಿದ್ದಾರೆ.

ಬಳಿಕ ಏಕಾಏಕಿ ಪಕ್ಕದ ತೆಂಗಿನ ತೋಟಕ್ಕೆ ಆತನ ಎಳೆದೊಯ್ದಿದ್ದಾರೆ. ತೋಟದಲ್ಲಿದ್ದ ಸಣ್ಣ ಶೆಡ್ ಬಳಿ ಮಚ್ಚು ಲಾಂಗುಗಳಿಂದ ಕೊಚ್ಚಿ ಭೀಕರವಾಗಿ ಕೊಲೆ ಮಾಡಿ ಪರಾರಿಯಾಗಿದ್ದಾರೆ.

ವಿಷಯ ತಿಳಿದು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿದ ವೇಳೆ ಮೊಹಮ್ಮದ್ ಶೋಹೆಬ್ ಸ್ಥಳದಲ್ಲೇ ಮೃತಪಟ್ಟಿದ್ದನು.

ಮೈಸೂರಿನ ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇತ್ತೀಚಿಗೆ ಸೋಫಿಯಾನ್ ಎಂಬಾತನ ಕೊಲೆಯಾಗಿತ್ತು ಈ ಕೊಲೆ ಪ್ರಕರಣದಲ್ಲಿ ಮೊಹಮ್ಮದ್ ಶೋಹೆಬ್ ಸಹೋದರ ಶಕಿಬ್ ಜೈಲಿನಲ್ಲಿದ್ದಾನೆ.

ಈ ಕೊಲೆ ಪ್ರಕರಣದ ಬಗ್ಗೆ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದ ಶ್ರೀರಂಗಪಟ್ಟಣ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ.ಕುಮಾರ್, ಸೋಫಿಯಾನ್‌ನನ್ನು ಕೊಲೆ ಮಾಡಿರುವುದಕ್ಕೆ ಸೇಡು ತೀರಿಸಿಕೊಳ್ಳಲು ಆತನ ಸಹೋದರರು ಮೊಹಮ್ಮದ್ ಶೋಹೆಬ್‌ನನ್ನು ಕೊಲೆ ಮಾಡಿರಬಹುದು ಎಂದು ಶಂಕೆ ವ್ಯಕ್ತಪಡಿಸಿದ್ದಾರೆ.

ಸೋಫಿಯಾನ್ ಸಹೋದರರೇ ನನ್ನ ಮಗನನ್ನು ಕೊಲೆ ಮಾಡಿದ್ದಾರೆ ಎಂದು ಆರೋಪಿಸಿ ಮೊಹಮ್ಮದ್ ಶೋಹೆಬ್ ತಾಯಿ ಸುಲ್ತಾನಾ ಬಾನು ಅವರು ಶ್ರೀರಂಗಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಮೊಹಮ್ಮದ್ ಶೋಹೆಬ್ ಕಳೆದ 15 ದಿನಗಳ ಹಿಂದೆ ಮದುವೆಯಾಗಿದ್ದು, ಈತ ಕೊಲೆ ಪ್ರಕರಣದಲ್ಲಿ ಭಾಗಿಯಾಗಿಲ್ಲದಿದ್ದರೂ ತಮ್ಮ ಮಾಡಿದ ಪಾತಕ ಕೃತ್ಯಕ್ಕೆ ಈತ ಬಲಿಯಾಗಿದ್ದಾನೆ.

ಹಾಡುಹಗಲೇ ಭೀಕರ ಕೊಲೆ ಶ್ರೀರಂಗಪಟ್ಟಣ ಮಾತ್ರವಲ್ಲದೆ ಮೈಸೂರಿನ ಜನರನ್ನು ಬೆಚ್ಚಿ ಬೀಳಿಸಿದೆ. ದಾಖಲಿಸಿಕೊಂಡಿರುವ ಶ್ರೀರಂಗಪಟ್ಟಣ ಟೌನ್ ಪೊಲೀಸರು ಆರೋಪಿಗಳ ಪತ್ತೆಗೆ ಬಲೆ ಬೀಸಿದ್ದಾರೆ. ಸುತ್ತಮುತ್ತಲ ಸಿಸಿಟಿವಿ ಕ್ಯಾಮರಾಗಳ ದೃಶ್ಯಗಳನ್ನು ಕಲೆ ಹಾಕಿದ್ದು, ಆರೋಪಿಗಳನ್ನು ಶೀಘ್ರ ಬಂಧಿಸುವ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ವಕ್ಫ್ ಸಂಸ್ಥೆ ಆಡಳಿತ ಸಮಿತಿಯ ಚುನಾವಣಾ ಅಧಿಸೂಚನೆ

ಮೈಸೂರು, ಮೇ 4– ದರ್ಗಾಹಿ ಮಸ್ಜಿದ್ ಸುನ್ನಿ ಮಂಡಿ ಮೊಹಲ್ಲಾ ಮೈಸೂರು ನಗರ, ವಕ್ಫ್ ಸಂಸ್ಥೆ ಆಡಳಿತ ಸಮಿತಿಯ ಚುನಾವಣಾ ಅಧಿಸೂಚನೆಯನ್ನು ಏ.25 ರಂದು ಪ್ರಕಟಿಸಲಾಗಿದ್ದು, ನಾಮಪತ್ರ ಅರ್ಜಿ ಪಡೆಯುವ ಪ್ರಾರಂಭ ದಿನಾಂಕ ಏ.27 ರಿಂದ ಮೇ 5 ಅಂತಿಮ ದಿನವಾಗಿರುತ್ತದೆ. ಮೇ 6 ರಂದು ನಾಮಪತ್ರ ಪರಿಶೀಲನೆ ಮಾಡಲಾಗುತ್ತದೆ. ನಾಮಪತ್ರ ಹಿಂಪಡೆಯುವ ಅಂತಿಮ ದಿನಾಂಕ ಮೇ 7 ಆಗಿರುತ್ತದೆ. ಮತದಾನವನ್ನು ಮೇ 17 ರಂದು ನಡೆಸಲಾಗುವುದು, ಮತ ಎಣಿಕೆ ಮತ್ತು ಫಲಿತಾಂಶವನ್ನು ಮೇ 17 ರಂದು ಮತದಾನದ ನಂತರ ಪ್ರಕಟಿಸಲಾಗುತ್ತದೆ ಎಂದು ವಕ್ಫ್ ಸಂಸ್ಥೆ ಆಡಳಿತ ಸಮಿತಿಯ ಚುನಾವಣಾಧಿಕಾರಿ ಮೊಹಮದ್ ಮುಷ್ತಾಕ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಭ್ರಮಾಚರಣೆ...


ಪಶ್ಚಿಮ ಬಂಗಾಳ, ಅಸ್ಸಾಂ, ಪುದುಚೇರಿಯಲ್ಲಿ ಭಾರತೀಯ ಜನತಾ ಪಾರ್ಟಿ ಜಯಭೇರಿ ಬಾರಿಸಿರುವ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಅಭಿಮಾನಿ ಬಳಗ ಹಾಗೂ ಅಪೂರ್ವ ಸ್ನೇಹ ಬಳಗದ ಪದಾಧಿಕಾರಿಗಳು ಚಾಮುಂಡಿಪುರಂನಲ್ಲಿ ಸೋಮವಾರ ಪಟಾಕಿ ಸಿಡಿಸಿ, ಸಾರ್ವಜನಿಕರಿಗೆ ಸಿಹಿ ಹಂಚಿ ಸಂಭ್ರಮಿಸಿದರು. ಈ ಸಂದರ್ಭದಲ್ಲಿ ಅಪೂರ್ವ ಸುರೇಶ್, ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಜಗದೀಶ್, ದೂರ ರಾಜಣ್ಣ, ಕೆ.ಎಂ. ನಿಶಾಂತ್, ಶ್ರೀಕಾಂತ ಕಶ್ಯಪ್, ಶಿವಲಿಂಗ ಸ್ವಾಮಿ, ಆನಂದ್, ರಾಮಚಂದ್ರ ರಾವ್, ಆದರ್ಶ್, ನಿವೃತ್ತ ಶಿಕ್ಷಕ ಮಹದೇವಸ್ವಾಮಿ, ಪುರುಷೋತ್ತಮ್, ಅಮಿತ್ ಇನ್ನಿತರರು ಹಾಜರಿದ್ದರು.

ಕೆ.ಗೋಪಿನಾಥ್‌ಗೆ ಸನ್ಮಾನ


ಇತ್ತೀಚೆಗೆ ಗ್ರೇಟರ್ ನೋಯ್ಡಾದಲ್ಲಿ ಒಕ್ಕೂಟದ ಆಶ್ರಯದಲ್ಲಿ ನಡೆದ ಶೈಕ್ಷಣಿಕ ಸಂವಹನ 27ನೇ ಸಿಇಸಿ–ಯುಜಿಸಿ ಶೈಕ್ಷಣಿಕ ಚಲನಚಿತ್ರೋತ್ಸವದಲ್ಲಿ 'ಕಲರಿಪಯಟ್ಟು–ದಿ ಇಂಡಿಯನ್ ಮಾರ್ಷಿಯಲ್ ಆರ್ಟ್' ಚಲನಚಿತ್ರಕ್ಕಾಗಿ ಅತ್ಯುತ್ತಮ ಸಂಪಾದನಾ ಪ್ರಶಸ್ತಿ ಪಡೆದಿರುವ ಮೈಸೂರು ಅಥ್ಲೆಟಿಕ್ಸ್ ಕ್ಲಬ್‌ನ ಕಾರ್ಯನಿರ್ವಾಹಕ ಸದಸ್ಯ ಕೆ.ಗೋಪಿನಾಥ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮೈಸೂರು ಅಥ್ಲೆಟಿಕ್ಸ್ ಕ್ಲಬ್ ಅಧ್ಯಕ್ಷ ಚೈನ್ ಸಿಂಗ್ ರಾಜ್ ಪುರೋಹಿತ್, ಕಾರ್ಯದರ್ಶಿ ಎಂ.ಯೋಗೇಂದ್ರ ಅವರನ್ನು ಸನ್ಮಾನಿಸಿದರು. ಸದಸ್ಯರಾದ ಸಿ.ಕೆ.ಮುರ್ರೈಧರನ್, ಜಿ.ಆರ್.ಪ್ರಭಾಕರ್, ಕೆ.ಬಿ.ಗಂಗಾಧರ್, ಕೆ. ಗುರುರಾಜ್, ಬಿ. ಶ್ರೀಕಾಂತ್ ಮತ್ತು ಬಾಬು ಗುರುರಾಜ್ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಕಲಾಸೌರಭ ತಂಡದಿಂದ ಕರೋಕೆ ಗಾಯನ


ಕಲಾಸೌರಭ ತಂಡದ ಸಂಸ್ಥಾಪಕಿ ನಾಗರತ್ನ ಜ್ಯೋತಿ ಬೆಳಗಿಸಿ ಕಾರ್ಯಕ್ರಮ ಉದ್ಘಾಟಿಸಿದರು.

ಮೈಸೂರು,ಮೇ4–ಮೈಸೂರಿನ ಕಲಾಸೌರಭ ತಂಡದ 6ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಕೃಷ್ಣಮೂರ್ತಿಪುರಂನಲ್ಲಿರುವ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಕರೋಕೆ ಗಾಯನ ಕಾರ್ಯಕ್ರಮ ನೆರವೇರಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಕಲಾಸೌರಭ ತಂಡದ ಸಂಸ್ಥಾಪಕರಾದ ಗಾಯಕಿ ನಾಗರತ್ನ, ಮಾತನಾಡಿ, ಕಲೆಯನ್ನು ಪ್ರೋತ್ಸಾಹ ಮಾಡಬೇಕು. ಕನಸುಗಳಿಗೆ ರೂಪ ಕೊಡುವುದೇ ಕಲೆ. ಪ್ರತಿಭೆಯನ್ನು ಹೊರ ಹಾಕಲು ಇಂತಹ ಗಾಯನ ಕಾರ್ಯಕ್ರಮಗಳು ಅತ್ಯಂತ ಅವಶ್ಯಕ. ಆದ್ದರಿಂದ ಗಾಯಕರು ವೇದಿಕೆಯಲ್ಲಿ ಬಂದು ಹಾಡುವುದರ ಮೂಲಕ ಮತ್ತಷ್ಟು ಕಲೆಯನ್ನು ಪ್ರೋತ್ಸಾಹಿಸಬೇಕೆಂದು ತಿಳಿಸಿದರು.

ನಂತರ ಕಲಾವಿದರಿಂದ ವಿವಿಧ ಕರೋಕೆ ಗಾಯನ ಯಶಸ್ವಿಯಾಗಿ ನೆರವೇರಿಸಲಾಯಿತು. ಈ ವೇಳೆ ಕಲಾಸೌರಭ ಕರೋಕೆ ಗಾಯನ ಕಾರ್ಯಕ್ರಮದಲ್ಲಿ ಗಾಯಕರಾದ ಜೂನಿಯರ್ ರಾಜ್‌ಕುಮಾರ್, ಕೃಷ್ಣಪ್ರಸಾದ್, ನಾಗೇಶ್, ಜಯರಾಂ, ದಿನೇಶ್, ನರಸಿಂಹನ್, ಶ್ರೀಮತಿ ಮಂಗಳ, ನಾಗರತ್ನ, ನಾಗಮ್ಮ, ಕೃಷ್ಣವೇಣಿ, ಚಂದ್ರಿಕ ಹಾಗೂ ಮಲ್ಲಿಕ ಸೇರಿದಂತೆ ಉಪಸ್ಥಿತರಿದ್ದರು.

ಅನುಮಾನಾಸ್ಪದ ರೀತಿ ಯುವಕ ಸಾವು; ಕೊಳೆತ ಸ್ಥಿತಿಯಲ್ಲಿ ಶವ ಪತ್ತೆ

ಮೈಸೂರು, ಮೇ 4(ಪಿಎಂ)– ಯುವಕನೊಬ್ಬ ಅನುಮಾನಾಸ್ಪದ ರೀತಿಯಲ್ಲಿ ಸಾವನ್ನಪ್ಪಿದ್ದು, ಲಿಂಗಾಬುದಿಪಾಳ್ಯದ ಸಮೀಪ ಆರ್‌ಟಿ ನಗರಕ್ಕೆ ಸಂಪರ್ಕ ಕಲ್ಪಿಸುವ ಮಾರ್ಗದ ಖಾಲಿ ಜಾಗದಲ್ಲಿ ಕೊಳೆತ ಸ್ಥಿತಿಯಲ್ಲಿ ಭಾನುವಾರ ಶವ ಪತ್ತೆಯಾಗಿದೆ.

ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲೂಕಿನ ಬಿದರಹಳ್ಳಿ ಗ್ರಾಮದ ಬಸವಯ್ಯ ಅವರ ಪುತ್ರ ಚಂದ್ರಶೇಖರ್ (26) ಅನುಮಾನಾಸ್ಪದ ರೀತಿ ಸಾವನ್ನಪ್ಪಿರುವ ಯುವಕ.

ಮೈಸೂರಿನ ಶ್ರೀರಾಂಪುರ ಭಾಗದಲ್ಲಿ ಕಲ್ಲಂಗಡಿ ಹಣ್ಣು ವ್ಯಾಪಾರ ಮಾಡುತ್ತಿದ್ದ ಈತ ಕೆಲ ದಿನಗಳಿಂದ ನಾಪತ್ತೆಯಾಗಿದ್ದ. ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯಲ್ಲಿ ಈತ ಕಾಣೆಯಾದ ಸಂಬಂಧ ಪ್ರಕರಣ ದಾಖಲಾಗಿತ್ತು. ಕರೆಗಳ ವಿವರ ಆಧರಿಸಿ ಆತನ ಮೊಬೈಲ್ ಎಲ್ಲಿ ಸ್ವಿಚ್ ಆಫ್ ಆಗಿದೆ ಎಂದು ವಿದ್ಯಾರಣ್ಯಪುರಂ ಪೊಲೀಸರು ಪರಿಶೀಲಿಸಿ ಸ್ಥಳಕ್ಕೆ ಬಂದು ನೋಡಿದಾಗ ಆತನ ಶವ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿದೆ. ಆರ್‌ಟಿ ನಗರದಲ್ಲಿ ಶವ ಪತ್ತೆಯಾದ ಹಿನ್ನೆಲೆಯಲ್ಲಿ ಜಯಪುರ ಪೊಲೀಸ್ ಠಾಣೆಯಲ್ಲಿ ಯುವಕನ ಕುಟುಂಬಸ್ಥರು ನೀಡಿದ ದೂರಿನನ್ವಯ ಅನುಮಾನಾಸ್ಪದ ಸಾವು ಪ್ರಕರಣ ದಾಖಲಾಗಿದೆ ಎಂದು ಜಯಪುರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಸೋಮವಾರ ಬೆಳಗ್ಗೆ ಮರಣೋತ್ತರ ಪರೀಕ್ಷೆ ನಡೆಸಿ ಶವವನ್ನು ವಾರಸುದಾರರಿಗೆ ಒಪ್ಪಿಸಲಾಗಿದೆ. ಶವದ ಮೈಮೇಲೆ ಹಲ್ಲೆಯಿಂದ ಗಾಯ ಆಗಿರುವ ಕುರುಹುಗಳು ಕಂಡುಬಂದಿಲ್ಲ. ಮರಣೋತ್ತರ ಪರೀಕ್ಷೆ ವರದಿ ಬಂದ ಬಳಿಕ ತನಿಖೆ ಮುಂದುವರೆಸಲಾಗುವುದು ಎಂದು ಜಯಪುರ ಪೊಲೀಸರು ತಿಳಿಸಿದ್ದಾರೆ.

ಮೈಸೂರಲ್ಲಿ ಭಾರತ್ ಹಾಸ್ಪಿಟಲ್‌ನ 'ಕ್ಯಾನ್ಸರ್ ಡೇ ಕೇರ್ ಸೆಂಟರ್' ಆರಂಭ



ಮೈಸೂರಿನ ಕುವೆಂಪುನಗರದ ವಿಶ್ವ ಮಾನವ ಜೋಡಿ ರಸ್ತೆ(ಡಾ.ಶಿವಕುಮಾರ ಸ್ವಾಮೀಜಿ ವೃತ್ತ ಬಳಿ)ಯಲ್ಲಿ ಭಾರತ್ ಹಾಸ್ಪಿಟಲ್‌ನ ಅತ್ಯಾಧುನಿಕ 'ಕ್ಯಾನ್ಸರ್ ಡೇ ಕೇರ್ ಸೆಂಟರ್'ಗೆ ಬಿಹೆಚ್‌ಐಒ ಅಧ್ಯಕ್ಷ ಡಾ.ಬಿ.ಎಸ್.ಅಜಯ್‌ಕುಮಾರ್ ಸೋಮವಾರ ಚಾಲನೆ ನೀಡಿದರು.

ಮೈಸೂರು, ಮೇ 4(ಎಸ್‌ಪಿಎನ್)– ಮೈಸೂರಿನ ಕುವೆಂಪುನಗರ ವಿಶ್ವ ಮಾನವ ಜೋಡಿ ರಸ್ತೆ(ಡಾ.ಶಿವಕುಮಾರ ಸ್ವಾಮೀಜಿ ವೃತ್ತ ಬಳಿ)ಯಲ್ಲಿ ಭಾರತ್ ಹಾಸ್ಪಿಟಲ್‌ನ ಅತ್ಯಾಧುನಿಕ 'ಕ್ಯಾನ್ಸರ್ ಡೇ ಕೇರ್ ಸೆಂಟರ್'ಗೆ ಬಿಹೆಚ್‌ಐಒ ಅಧ್ಯಕ್ಷ ಡಾ.ಬಿ.ಎಸ್.ಅಜಯ್‌ಕುಮಾರ್ ಸೋಮವಾರ ಚಾಲನೆ ನೀಡಿದರು.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ರೋಗಿ ಕೇಂದ್ರಿತ ಆಂಕೊಲಜಿ ಸೇವೆಗಳ ಲಭ್ಯತೆಯನ್ನು ಬಲಪಡಿಸುವ ನಿಟ್ಟಿನಲ್ಲಿ, ಭಾರತ್ ಕ್ಯಾನ್ಸರ್ ಆಸ್ಪತ್ರೆ ಅತ್ಯಾಧುನಿಕ 'ಕ್ಯಾನ್ಸರ್ ಡೇ ಕೇರ್ ಕ್ಲಿನಿಕ್'ಗೆ ಚಾಲನೆ ನೀಡಲಾಗಿದೆ. ಈ ಭಾಗದ ಜನರಿಗೆ ಗುಣಮಟ್ಟದ ಕ್ಯಾನ್ಸರ್ ಚಿಕಿತ್ಸೆ ನೀಡುವ ನಿಟ್ಟಿನಲ್ಲಿ ಚಾಲನೆ ನೀಡಲಾಗಿದೆ ಎಂದರು.

'ಕ್ಯಾನ್ಸರ್ ಡೇ–ಕೇರ್ ಕೇಂದ್ರ'ದಲ್ಲಿ ಅತ್ಯಾಧುನಿಕ ಮಾದರಿಯ ಚಿಕಿತ್ಸಾ ವಿಧಾನಗಳನ್ನು ಅಳವಡಿಸಿಕೊಂಡಿದ್ದು, ರೋಗಿಗಳು ದೀರ್ಘಕಾಲ ಆಸ್ಪತ್ರೆಗೆ ದಾಖಲಾಗುವ ಅಗತ್ಯವಿಲ್ಲದೆ, ಸುಧಾರಿತ ಚಿಕಿತ್ಸೆಗಳನ್ನು ಪಡೆಯಲು ರೋಗಿಗಳಿಗೆ ಈ ಕೇಂದ್ರವು ಬಹಳ ಹತ್ತಿರದಲ್ಲಿ ಲಭ್ಯವಿದೆ. ಸಣ್ಣಪುಟ್ಟ ಕೌನ್ಸಿಲಿಂಗ್‌ಗೆ ಭಾರತ್ ಆಸ್ಪತ್ರೆಗೆ ಬರುವ ಅಗತ್ಯವಿಲ್ಲ. ಈ ಕೇಂದ್ರಕ್ಕೆ ರೋಗಿಗಳು ಆಗಮಿಸಿ ಚಿಕಿತ್ಸೆ ಪಡೆಯಬಹುದಾಗಿದೆ ಎಂದರು.

ಈ ಕೇಂದ್ರವು ರೋಗಿಗಳ ಚಿಕಿತ್ಸಾ ವೆಚ್ಚ ಮತ್ತು ಮಾನಸಿಕ ಒತ್ತಡವನ್ನು ಕಡಿಮೆ ಮಾಡುವುದಲ್ಲದೆ, ರೋಗಿಗಳು ತಮ್ಮ ದೈನಂದಿನ ಚಟುವಟಿಕೆಗಳನ್ನು ಕನಿಷ್ಠ ಅಡಚಣೆಯೊಂದಿಗೆ ಮುಂದುವರೆಸಲು ಸಹಾಯವಾಗುತ್ತದೆ. ಈ ಕೇಂದ್ರದಲ್ಲಿ ರೋಗಿಗಳಿಗೆ ಸಕಾಲಿಕ, ಕೈಗೆಟುಕುವ ಮತ್ತು ಉತ್ತಮ ಗುಣಮಟ್ಟದ ಕ್ಯಾನ್ಸರ್ ಆರೈಕೆ ಕೇಂದ್ರದ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು.

ಬಿಹೆಚ್‌ಐಒ ನಿರ್ದೇಶಕಿ ಅಂಜಲಿ ಅಜಯ್ ಕುಮಾರ್ ಮಾತನಾಡಿ, ಈ ಕೇಂದ್ರದಲ್ಲಿ 'ರೋಗಿಯೇ ಮೊದಲು' ಎಂಬ ತತ್ವದಲ್ಲಿ ಚಿಕಿತ್ಸೆ ನೀಡಲಾಗುವುದು. ವಿಶ್ವದರ್ಜೆಯ ಆಂಕೊಲಜಿ ಆರೈಕೆ ಕೇಂದ್ರವನ್ನು ಸಮುದಾಯಕ್ಕೆ ಹತ್ತಿರ ತರುವ ಜೊತೆಗೆ ರೋಗಿಗಳ ಸೌಕರ್ಯ ಮತ್ತು ಸುಗಮ ಚಿಕಿತ್ಸೆಯನ್ನು ಖಚಿತಪಡಿಸುವುದು ಈ ಕೇಂದ್ರದ ಗುರಿಯಾಗಿದೆ ಎಂದು ಹೇಳಿದರು.

ಡೇ–ಕೇರ್ ಮಾದರಿಯು ರೋಗಿಗಳ ಜೀವನಕ್ಕೆ ಕನಿಷ್ಠ ಅಡಚಣೆಯಾಗದಂತೆ ಚಿಕಿತ್ಸೆ ಪಡೆಯಲು ಅನುವು ಮಾಡಿಕೊಡುತ್ತದೆ. ಈ ಕೇಂದ್ರದಲ್ಲಿ ಕೀಮೋಥೆರಪಿ, ಟಾರ್ಗೆಟೆಡ್ ಥೆರಪಿ ಮತ್ತು ಇಮ್ಯುನೊಥೆರಪಿಯೊಂದಿಗೆ ಸಮಗ್ರ ಪೂರಕ ಆರೈಕೆ ಕೇಂದ್ರವು ಇದಾಗಿದೆ. ಈ ಡೇ ಕೇರ್ ಕೇಂದ್ರದಲ್ಲಿ ಸಮಾಲೋಚನಾ ಕೊಠಡಿಗಳು, ಸಣ್ಣ ಶಸ್ತ್ರಚಿಕಿತ್ಸೆಗಳಿಗೆ ಮೀಸಲಾದ ಡೇ–ಕೇರ್ ಘಟಕ ಮತ್ತು ಚಿಕಿತ್ಸೆಯ ನಂತರದ ಮೇಲ್ವಿಚಾರಣೆಗಾಗಿ ವೀಕ್ಷಣಾ ಹಾಸಿಗೆಗಳನ್ನು ಒಳಗೊಂಡಿದೆ. ಸಮಗ್ರ ರೋಗನಿರ್ಣಯ, ಫಾರ್ಮಸಿ ಮತ್ತು ಕ್ಯಾನ್ಸರ್ ತಡೆಗಟ್ಟುವ ತಪಾಸಣಾ ಸೇವೆಗಳು ಒಂದೇ ಸೂರಿನಡಿ ಈ ಕೇಂದ್ರದಲ್ಲಿ ಲಭ್ಯವಿದೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಬಿಹೆಚ್‌ಐಒ ಸಿಒಒ ಗೌತಮ್, ಮುಖ್ಯ ವಿಕಿರಣ ಆಂಕೊಲಜಿಸ್ಟ್ ಮತ್ತು ವೈದ್ಯಕೀಯ ಅಧೀಕ್ಷಕಿ ಡಾ. ವೈ.ಎಸ್.ಮಾಧವಿ, ಮುಖ್ಯ ವೈದ್ಯಕೀಯ ಆಂಕೊಲಜಿಸ್ಟ್ ಡಾ. ಸಿ.ಬಿ.ಅವಿನಾಶ್, ಹಿರಿಯ ಸರ್ಜಿಕಲ್ ಆಂಕೊಲಜಿಸ್ಟ್ ಮತ್ತು ರೋಬೋಟಿಕ್ ಸರ್ಜನ್ ಡಾ.ಎಂ.ವಿಜಯಕುಮಾರ್ ಮತ್ತು ಬಿಎಂಟಿ ವೈದ್ಯ ಡಾ.ಕೆ.ಎನ್.ಸಂತೋಷ್ ಕುಮಾರ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

ಮುಂಬೈಗೆ ಜಯ: ಪ್ಲೇ ಆಫ್‌ನಿಂದ ಹೊರಬಿದ್ದ ಲಕ್ನೋ



ಮುಂಬೈ, ಮೇ 4– ರಯಾನ್ ರಿಕಲ್ಟನ್ ಹಾಗೂ ರೋಹಿತ್ ಶರ್ಮಾ ಅವರ ಶತಕದ ಜೊತೆಯಾಟದ ನೆರವಿನಿಂದ ಮುಂಬೈ ಇಂಡಿಯನ್ಸ್ ಲಕ್ನೋ ಸೂಪರ್ ಜೈಂಟ್ಸ್ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಇದರೊಂದಿಗೆ 6 ಅಂಕ ಗಳಿಸಿರುವ ಮುಂಬೈ ಪ್ಲೇ ಆಫ್ ದಾರಿ ದೂರವಿದ್ದರೂ, ಅಂಕಪಟ್ಟಿಯಲ್ಲಿ ಕೊಂಚ ಮಟ್ಟಿಗೆ ತನ್ನ ಸ್ಥಾನ ಉತ್ತಮಪಡಿಸಿಕೊಂಡರೇ, ಲಕ್ನೋ ಬಹುತೇಕ ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದಿದೆ.

ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 228 ರನ್ ಗಳಿಸಿತು. ಬಳಿಕ 229 ರನ್‌ಗಳ ಬೃಹತ್ ಗೆಲುವಿನ ಗುರಿ ಬೆನ್ನತ್ತಿದ ಮುಂಬೈ 20 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ಇನ್ನೂ 8 ಎಸೆತಗಳು ಬಾಕಿ ಇರುವಂತೆಯೇ ಗೆಲುವಿನ ನಗೆ ಬೀರಿತು.

ಮುಂಬೈ ಪರ ಇನ್ನಿಂಗ್ಸ್ ಆರಂಭಿಸಿದ ರೋಹಿತ್ ಶರ್ಮಾ ಹಾಗೂ ರಯಾನ್ ರಿಕಲ್ಟನ್ ಮೊದಲ ವಿಕೆಟ್‌ಗೆ ಬಿರುಸಿನ 143 ರನ್ ಜೊತೆಯಾಟವಾಡಿ ಉತ್ತಮ ಆರಂಭ ಒದಗಿಸಿದರು. ಈ ವೇಳೆ 32 ಎಸೆತಗಳಲ್ಲಿ 8 ಸಿಕ್ಸರ್, 6 ಬೌಂಡರಿ ಒಳಗೊಂಡ ರಿಕಲ್ಟನ್ 83 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ಅರ್ಧ ಶತಕ ಸಿಡಿಸಿ ಶತಕದತ್ತ ಮುನ್ನುಗ್ಗುತ್ತಿದ್ದ ರೋಹಿತ್ ಶರ್ಮಾ 44 ಎಸೆತಗಳಲ್ಲಿ 7 ಸಿಕ್ಸರ್, 6 ಬೌಂಡರಿ ಒಳಗೊಂಡ 84 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ತಿಲಕ್ ವರ್ಮಾ 11, ಸೂರ್ಯ ಕುಮಾರ್ ಯಾದವ್ 12, ನಮನ್ ಧೀರ್ 23, ವಿಲ್ ಜಾಕ್ಸ್ 10 ರನ್ ಗಳಿಸಿದರು. ಲಕ್ನೋ ಪರ ಮಣಿಮಾರನ್ ಸಿದ್ದಾರ್ಥ 2, ಮೊಹಸೀನ್ ಖಾನ್, ಮೊಹಮ್ಮದ್ ಶಮಿ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಲಕ್ನೋ ಪರ ಮಿಚೆಲ್ ಮಾರ್ಷ್ 44, ಜೋಶ್ ಇಂಗ್ಲಿಸ್ 13, ನಿಕೋಲಸ್ ಪೂರನ್ 63, ರಿಷಬ್ ಪಂತ್ 15, ಏಡನ್ ಮಾರ್ಕಮ್ 31, ಅಕ್ಷತ್ ರಘುವಂಶಿ 11, ಹಿಮ್ಮತ್ ಸಿಂಗ್ 40 ರನ್ ಗಳಿಸಿದರು. ಮುಂಬೈ ಪರ ಕಾರ್ಬಿನ್ ಬಾಷ್ 2, ಎಎಮ್ ಗಜನ್ಫರ್, ರಘು ಶರ್ಮಾ, ವಿಲ್ ಜಾಕ್ಸ್ ತಲಾ ಒಂದೊಂದು ವಿಕೆಟ್ ಉರುಳಿಸಿದರು. ರಯಾನ್ ರಿಕಲ್ಟನ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಮೈಸೂರಿನ 12 ರಸ್ತೆಗಳು 393.85 ಕೋಟಿ ವೆಚ್ಚದಲ್ಲಿ ವೈಟ್ ಟ್ಯಾಪಿಂಗ್

• 46.08 ಕಿ.ಮೀ. ಕಾಂಕ್ರೀಟ್ ರಸ್ತೆಯಾಗಿ ಪರಿವರ್ತನೆ • ಎರಡು ವರ್ಷದಲ್ಲಿ ಕಾಮಗಾರಿ ಪೂರ್ಣಗೊಳಿಸಲು ಸೂಚನೆ




ಮೈಸೂರಿನ ರೈಲ್ವೆ ವರ್ಕ್‌ಶಾಪ್ ಬಳಿ ಮಾನಂದವಾಡಿ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಪರಿವರ್ತಿಸುತ್ತಿರುವುದು.

ಮೈಸೂರು, ಮೇ 4(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಿನ ರಸ್ತೆ ಗುಣಮಟ್ಟ ಕಾಯ್ದು ಕೊಳ್ಳುವುದರೊಂದಿಗೆ ದೀರ್ಘ ಕಾಲದ ಬಾಳಿಕೆಯ ರಸ್ತೆಯಾಗಿ ಪರಿವರ್ತಿಸಲು ಸರ್ಕಾರ ಮುಂದಾಗಿದ್ದು, 393.85 ಕೋಟಿ ರೂ. ವೆಚ್ಚದಲ್ಲಿ 12 ರಸ್ತೆಗಳನ್ನು ಕಾಂಕ್ರೀಟ್ ರಸ್ತೆಗಳಾಗಿ(ವೈಟ್ ಟಾಪಿಂಗ್) ಮಾರ್ಪಡಿಸಲು ಉದ್ದೇಶಿಸಿ ಮೊದಲ ಹಂತದಲ್ಲಿ ಎನ್.ಐ.ಇ. ಕಾಲೇಜು ಬಳಿ ಮಾನಂದವಾಡಿ ರಸ್ತೆಯನ್ನು ಕಾಂಕ್ರೀಟ್ ರಸ್ತೆಯಾಗಿಸುವ ಕಾಮಗಾರಿ ಆರಂಭಿಸಲಾಗಿದೆ.

ಕಳಪೆ ಗುಣಮಟ್ಟದ ಡಾಂಬರೀಕರಣ ಹಾಗೂ ನಿರ್ವಹಣೆ ಕೊರತೆಯಿಂದಾಗಿ ಮೈಸೂರಿನ ಹಲವು ರಸ್ತೆಗಳು ಗುಂಡಿಬಿದ್ದಿದ್ದು, ಮೈಸೂರಿಗೆ ಬರುವ ಪ್ರವಾಸಿಗರು ಮುಜುಗರಕ್ಕೀಡಾಗುತ್ತಿದ್ದರು. ಸ್ವಚ್ಛನಗರಿ ಖ್ಯಾತಿಯ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದ್ದರೂ ರಸ್ತೆಗಳ ದುರಸ್ತಿಗೆ ಕ್ರಮ ಕೈಗೊಳ್ಳದೆ ಕೇವಲ ಗುಂಡಿ ಮುಚ್ಚುವ ಹಾಗೂ ತೇಪೆ ಹಾಕುವ ಕೆಲಸವಷ್ಟೇ ಮಾಡಲಾಗುತ್ತಿತ್ತು. ಆದರೆ, ಇದೀಗ ರಾಜ್ಯ ಸರ್ಕಾರ ಮೈಸೂರಿನ ಪ್ರಮುಖ ರಸ್ತೆಗಳ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡಿದ್ದು, 12 ರಸ್ತೆಗಳು ಕಾಂಕ್ರೀಟ್ ರಸ್ತೆಗಳಾಗಿ ಬದಲಾಗಲಿವೆ. ಈಗಾಗಲೇ ಟೆಂಡರ್ ಕರೆಯಲಾಗಿದ್ದು, 12 ರಸ್ತೆಗಳಲ್ಲಿ ಒಟ್ಟು 46.08 ಕಿಮೀಯನ್ನು ಕಾಂಕ್ರೀಟ್ ರಸ್ತೆಯನ್ನಾಗಿಸಲು ಕ್ರಮ ಕೈಗೊಳ್ಳಲಾಗಿದೆ.

393.85 ಕೋಟಿ ವೆಚ್ಚದ ಟೆಂಡರ್ ನೀಡಲಾಗಿದ್ದು, ಮುಂದಿನ 2 ವರ್ಷದ ಅವಧಿಯಲ್ಲಿ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ.

ಮಾನಂದವಾಡಿ ರಸ್ತೆಯಲ್ಲಿ ಕಾಮಗಾರಿ ಆರಂಭ: ಲೋಕೋಪಯೋಗಿ ಇಲಾಖೆ ಮೂಲಕ ನಡೆಸುತ್ತಿರುವ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿಯ 12 ರಸ್ತೆಯಲ್ಲಿ ಇದೀಗ ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿ ಕಾಂಕ್ರೀಟ್ ಕಾಮಗಾರಿ ಆರಂಭಿಸಲಾಗಿದೆ. ಬಸವೇಶ್ವರ ವೃತ್ತದಿಂದ ಅಗ್ರಹಾರದ 101 ಗಣಪತಿ ದೇವಾಲಯ, ನಂಜುಮಳಿಗೆ ವೃತ್ತ ಸಿಲ್ಕ್ ಫ್ಯಾಕ್ಟರಿ ಸರ್ಕಲ್, ಶ್ರೀರಾಂಪುರದಿಂದ ರಿಂಗ್‌ರಸ್ತೆ ಜಂಕ್ಷನ್‌ವರೆಗೆ 6.4 ಕಿಮೀ ರಸ್ತೆಯನ್ನು 42.74 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ಮಾಡಲಾಗುತ್ತಿದೆ. ಎನ್‌ಐಇ ಕಾಲೇಜು ಮುಂಭಾಗದಿಂದ ಕಾಮಗಾರಿ ಆರಂಭಿಸಲಾಗಿದ್ದು, ಈಗಾಗಲೇ ಒಂದು ಪಥವನ್ನು ಸುಮಾರು ಒಂದು ಕಿಮೀ ದೂರ ಕಾಂಕ್ರೀಟ್ ರಸ್ತೆಯಾಗಿ ಪರಿವರ್ತಿಸಲಾಗಿದೆ.

ಈ ರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ಕಾಮಗಾರಿ ನಡೆಸಲಾಗುತ್ತಿರುವುದರಿಂದ ಒಂದು ಪಥದಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ಕೆಲವೆಡೆ ವಾಹನ ಸಂಚಾರಕ್ಕೆ ಪರ್ಯಾಯ ಮಾರ್ಗ ಸೂಚಿಸಲಾಗುತ್ತಿದೆ. ಒಂದು ಪಥದಲ್ಲಿ ಕಾಂಕ್ರೀಟ್ ರಸ್ತೆಯಾಗಿ ಮಾಡಿದ ಬಳಿಕ ಕ್ಯೂರಿಂಗ್ ಮಾಡಿದ ನಂತರವಷ್ಟೇ ಮತ್ತೊಂದು ಪಥದ ಕಾಮಗಾರಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಮತ್ತಷ್ಟು ರಸ್ತೆಗಳು: ರೈಲ್ವೆ ನಿಲ್ದಾಣದ ಮುಂಭಾಗದ ಬಾಬು ಜಗಜೀವನ್ ರಾಮ್ ವೃತ್ತದಿಂದ ಜೆಎಲ್‌ಬಿ ರಸ್ತೆಯನ್ನು ಎಲೆತೋಟದ ಜಂಕ್ಷನ್‌ವರೆಗೆ 4.39 ಕಿಮೀ ದೂರ 33.18 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆಯಾಗಿ ಪರಿವರ್ತಿಸಲಾಗುತ್ತದೆ. ಮೆಟ್ರೊಪೋಲ್ ವೃತ್ತದಿಂದ ಹಿನಕಲ್ ಬಳಿಯ ರಿಂಗ್ ರಸ್ತೆ ಜಂಕ್ಷನ್‌ವರೆಗೂ ಹುಣಸೂರು ರಸ್ತೆಯನ್ನು 5.649 ಕಿಮೀ ದೂರ 44.31 ಕೋಟಿ ರೂ. ವೆಚ್ಚದಲ್ಲಿ ವೈಟ್ ಟ್ಯಾಪಿಂಗ್ ಮಾಡಲು ಕ್ರಮ ಕೈಗೊಳ್ಳಲಾಗಿದೆ. ನ್ಯೂ ಸಯ್ಯಾಜಿರಾವ್ ರಸ್ತೆಯ ಡಿ.ಬನುಮಯ್ಯ ಕಾಲೇಜು ಜಂಕ್ಷನ್‌ನಿಂದ ರಮಾ ವಿಲಾಸ ರಸ್ತೆ ಎಂಡಿಎ ಜಂಕ್ಷನ್, ಕುಕ್ಕರಹಳ್ಳಿ ಕೆರೆ ರೈಲ್ವೆ ಗೇಟ್ ಮೂಲಕ ಬೋಗಾದಿ ರಸ್ತೆ ರಿಂಗ್ ರಸ್ತೆ ಜಂಕ್ಷನ್‌ವರೆಗೆ 6 ಕಿಮೀ ದೂರದ ರಸ್ತೆಯನ್ನು 34.24 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆಯನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಜೆಎಲ್‌ಬಿ ರಸ್ತೆಯ ದಾಸಪ್ಪ ವೃತ್ತದ ಜಂಕ್ಷನ್‌ನಿಂದ ಆಕಾಶವಾಣಿ ವೃತ್ತ, ಒಂಟಿಕೊಪ್ಪಲ್, ಜಯದೇವ ಆಸ್ಪತ್ರೆ, ಮೇಟಗಳ್ಳಿ ಮೂಲಕ ರಿಂಗ್ ರಸ್ತೆ ಜಂಕ್ಷನ್‌ವರೆಗೆ 4.941 ಕಿಮೀ ಉದ್ದದ ಕೆಆರ್‌ಎಸ್ ರಸ್ತೆಯನ್ನು 50 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆಯಾಗಿ ಪರಿವರ್ತಿಸಲು ಉದ್ದೇಶಿಸಲಾಗಿದೆ.

ಗ್ರಾಮಾಂತರ ಬಸ್ ನಿಲ್ದಾಣದ ಬಳಿಯಿಂದ ಕೆ.ಆರ್.ಆಸ್ಪತ್ರೆ ವೃತ್ತದ ಮಾರ್ಗವಾಗಿ ರೈಲ್ವೆ ನಿಲ್ದಾಣದವರೆಗೆ 1.512 ಕಿ.ಮೀ ವಿಸ್ತೀರ್ಣದ ಇರ್ವಿನ್ ರಸ್ತೆಯನ್ನು 21.12 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆಯನ್ನಾಗಿಸಲಾಗುತ್ತಿದೆ. ಫೋರಂ ಮಾಲ್(ನೆಕ್ಸಸ್ ಸೆಂಟರ್ ಸಿಟಿ) ಜಂಕ್ಷನ್‌ನಿಂದ ರಿಂಗ್ ರಸ್ತೆ ಜಂಕ್ಷನ್‌ವರೆಗೆ ಮಹದೇವಪುರ ರಸ್ತೆಯನ್ನು 3.633 ಕಿಮೀ ದೂರ 37.19 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆಯನ್ನಾಗಿಸಲು ಉದ್ದೇಶಿಸಲಾಗಿದೆ. ಹಾರ್ಡಿಂಗ್ ವೃತ್ತದಿಂದ ಗ್ರಾಮಾಂತರ ಬಸ್ ನಿಲ್ದಾಣ, ಫೈವ್‌ಲೈಟ್ ಸರ್ಕಲ್, ಗೌವರ್ನಮೆಂಟ್ ಗೆಸ್ಟ್‌ಹೌಸ್ ಜಂಕ್ಷನ್, ಡಾ.ಅಂಬೇಡ್ಕರ್ (ಎಫ್‌ಟಿಎಸ್) ವೃತ್ತ, ಫೌಂಟೇನ್ ವೃತ್ತ, ಎಲ್‌ಐಸಿ ವೃತ್ತದಿಂದ ಜೆಎಸ್‌ಎಸ್ ಡೆಂಟಲ್ ಕಾಲೇಜು ಮಾರ್ಗವಾಗಿ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ವರೆಗೆ 5.624 ಕಿಮೀ ದೂರದ ರಸ್ತೆಯನ್ನು 67.24 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆಯನ್ನಾಗಿ ಮಾಡಲಾಗುತ್ತದೆ.

ಕುಕ್ಕರಹಳ್ಳಿ ಕೆರೆ ಜಂಕ್ಷನ್‌ನಿಂದ ವಿಜಯಾ ಬ್ಯಾಂಕ್ ವೃತ್ತ, ರಾಮಕೃಷ್ಣ ಪರಮಹಂಸ ವೃತ್ತದ ಮಾರ್ಗವಾಗಿ ರಿಂಗ್‌ರಸ್ತೆ ಜಂಕ್ಷನ್‌ವರೆಗೆ ವಿಶ್ವಮಾನವ ಜೋಡಿ ರಸ್ತೆಯನ್ನು 3.345 ಕಿಮೀ ದೂರ 31.42 ಕೋಟಿ ರೂ. ವೆಚ್ಚದಲ್ಲಿ, ನಜರ್‌ಬಾದ್‌ನಲ್ಲಿರುವ ವಾಣಿ ವಿಲಾಸ ಮಹಿಳಾ ಕಾಲೇಜಿನ ಜಂಕ್ಷನ್‌ನಿಂದ ಮೃಗಾಲಯ ಮುಂಭಾಗದ ರಸ್ತೆಯನ್ನು ಮಾಲ್ ಆಫ್ ಮೈಸೂರು ಜಂಕ್ಷನ್‌ವರೆಗೆ 1.222 ಕಿಮೀ ದೂರ 7.39 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟೀಕರಣಗೊಳಿಸಲಾಗುತ್ತದೆ. ಹಾರ್ಡಿಂಗ್ ಸರ್ಕಲ್‌ನಿಂದ ನಗರ ಪೊಲೀಸ್ ಆಯುಕ್ತರ ಕಚೇರಿ ಮುಂಭಾಗ, ನಜ್ಜರ್‌ಬಾದ್ ಸರ್ಕಲ್, ಚಾಮುಂಡಿವಿಹಾರ ಕ್ರೀಡಾಂಗಣ, ಪೊಲೀಸ್ ಅಕಾಡೆಮಿ, ಸರ್ಕಾರಿ ಅತಿಥಿ ಗೃಹದ ದ್ವಾರದವರೆಗೆ 2.482 ಕಿಮೀ ದೂರದ ರಸ್ತೆಯನ್ನು 17.17 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆಯನ್ನಾಗಿಸಲು ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ, ಹಾರ್ಡಿಂಗ್ ಸರ್ಕಲ್‌ನಿಂದ ಸಿದ್ದಾರ್ಥ ಹೋಟೆಲ್ ಮುಂಭಾಗ, ಛತ್ರಿಮರದ ಸರ್ಕಲ್ ಮೂಲಕ ಮಿನಿ ವಿಧಾನಸೌಧದವರೆಗೆ 0.888 ಕಿಮೀ ರಸ್ತೆಯನ್ನು 5.84 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆಯನ್ನಾಗಿ ಮಾಡಲು ಈಗಾಗಲೇ ಗುತ್ತಿಗೆ ನೀಡಲಾಗಿದೆ.

ಮಾನಂದವಾಡಿ ರಸ್ತೆಯಲ್ಲಿ ಕಾಮಗಾರಿ ಆರಂಭಿಸಲಾಗಿದೆ

“ಮೈಸೂರಿನ 12 ರಸ್ತೆಯಲ್ಲಿ ಒಟ್ಟು 46.08 ಕಿಮೀ ದೂರದ ರಸ್ತೆಯನ್ನು ಕಾಂಕ್ರೀಟ್ ರಸ್ತೆಯನ್ನಾಗಿ ಪರಿವರ್ತಿಸಲಾಗುತ್ತಿದೆ. ಈಗಾಗಲೇ 393.85 ಕೋಟಿ ರೂ. ಮೊತ್ತದ ಟೆಂಡರ್ ನೀಡಲಾಗಿದೆ. ಈಗಾಗಲೇ ಮಾನಂದವಾಡಿ ರಸ್ತೆಯಲ್ಲಿ ಎನ್‌ಐ ಕಾಲೇಜು ಬಳಿ ಕಾಂಕ್ರೀಟ್ ರಸ್ತೆ ಕಾಮಗಾರಿ ಆರಂಭಿಸಲಾಗಿದೆ. ಕಾಮಗಾರಿ ಆರಂಭಿಸುವ ಮುನ್ನ ವಿವಿಧ ಇಲಾಖೆಯಿಂದ ಅನುಮತಿ ಪಡೆಯಲು ಸಮನ್ವಯ ಸಮಿತಿಯನ್ನು ಜಿಲ್ಲಾಧಿಕಾರಿಗಳು ರಚಿಸಿದ್ದಾರೆ. ರಸ್ತೆಯಲ್ಲಿ ಯಾವುದೇ ಪೈಪ್‌ಲೈನ್, ಕೇಬಲ್ ಮಾರ್ಗ ಇಲ್ಲದೇ ಇರುವುದನ್ನು ಖಚಿತಪಡಿಸಿಕೊಂಡ ನಂತರವಷ್ಟೆ ಕಾಂಕ್ರೀಟ್ ಕಾಮಗಾರಿ ನಡೆಸಲಾಗುತ್ತದೆ. ವಾಹನ ಸವಾರರಿಗೆ ತೊಂದರೆಯಾಗದಂತೆ ಒಂದೊಂದೇ ಪಥದಲ್ಲಿ ಕಾಂಕ್ರೀಟ್ ಕಾಮಗಾರಿ ನಡೆಸಲಾಗುತ್ತದೆ.

- ಮಹದೇವಸ್ವಾಮಿ, ಎಇಇ, ಲೋಕೋಪಯೋಗಿ ಇಲಾಖೆ

ಒಂದಕ್ಕೊಂದು ಲಿಂಕ್ ರಸ್ತೆ

10 ವರ್ಷದ ಹಿಂದೆ ರಾಮಸ್ವಾಮಿ ವೃತ್ತದಿಂದ ಅರಮನೆ ಸುತ್ತ ಹಾಗೂ ಕೆ.ಆರ್.ವೃತ್ತದಿಂದ ಬನ್ನಿ ಮಂಟಪದ ಎಲ್‌ಐಸಿ ವೃತ್ತದವರೆಗೆ ನಿರ್ಮಿಸಿರುವ ಕಾಂಕ್ರೀಟ್ ರಸ್ತೆಗೆ ಲಿಂಕ್ ರಸ್ತೆಯಾಗಿ ಇದೀಗ ಹೊಸದಾಗಿ 12 ರಸ್ತೆಗಳನ್ನು ಕಾಂಕ್ರೀಟ್ ರಸ್ತೆಯಾಗಿಸಲು ಸರ್ಕಾರ ಕ್ರಮ ಕೈಗೊಂಡಿರುವುದರಿಂದ ಮುಂಬರುವ ವರ್ಷಗಳಲ್ಲಿ ಮೈಸೂರಿನ ರಸ್ತೆಗಳು ಸುಂದರ ರಸ್ತೆಗಳಾಗಿ ಮಾರ್ಪಡಲಿವೆ. ಅಲ್ಲದೆ, ಸ್ವಚ್ಛ ನಗರಿ ಖ್ಯಾತಿಗೆ ಇನ್ನಷ್ಟು ಪುಷ್ಠಿ ನೀಡಲಿವೆ. ಅಲ್ಲದೆ, ಪ್ರತಿವರ್ಷ ಡಾಂಬರೀಕರಣ, ಗುಂಡಿ ಮುಚ್ಚುವ, ತೇಪೆ ಹಾಕುವ ಹಾಗೂ ದುರಸ್ತಿಗೆಂದು ಲಕ್ಷಾಂತರ ರೂ. ವೆಚ್ಚ ಮಾಡುವ ಹೊರೆ ಸ್ಥಳೀಯ ಸಂಸ್ಥೆಗೆ ಇಲ್ಲದಂತಾಗುತ್ತದೆ.

ಚರಂಡಿ, ಕೇಬಲ್ ಮಾರ್ಗವಿದ್ದರೆ ಸ್ಥಳಾಂತರ

ಕಾಂಕ್ರೀಟ್ ರಸ್ತೆ ಶಾಶ್ವತವಾಗಿ ಉಳಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗಿದ್ದು, ಉದ್ದೇಶಿತ ರಸ್ತೆಯಲ್ಲಿ ಒಳಚರಂಡಿ ಮಾರ್ಗ, ಕುಡಿಯುವ ನೀರಿನ ಪೈಪ್‌ಲೈನ್, ಚೆಸ್ಕಾಂ ಭೂಗತ ಕೇಬಲ್, ದೂರ ಸಂಪರ್ಕ ಮಾರ್ಗದ ಕೇಬಲ್ ಸೇರಿದಂತೆ ಇನ್ನಿತರ ಯಾವುದೇ ಲೈನ್ ಇದ್ದರೆ, ಅದನ್ನು ರಸ್ತೆಯ ಪಕ್ಕಕ್ಕೆ ಸ್ಥಳಾಂತರಿಸಲಾಗುತ್ತದೆ. ಪೈಪ್‌ಲೈನ್ ಸ್ಥಳಾಂತರ ಮಾಡಿದ ನಂತರ ಮುಂದಿನ ದಿನಗಳಲ್ಲಿ ದುರಸ್ತಿ ಕಾರ್ಯ ನಡೆಸುವ ಅಗತ್ಯ ಬಿದ್ದರೆ ಸಹಾಯವಾಗಲೆಂದು ಪೈಪ್‌ಲೈನ್ ಮಾರ್ಗದ ಮೇಲೆ ಕಾಂಕ್ರೀಟ್ ಹಾಕದೆ ಇಂಟರ್‌ಲಾಕ್ ಅಳವಡಿಸಲಾಗುತ್ತದೆ.

ಸಮನ್ವಯ ಸಮಿತಿ ಒಪ್ಪಿಗೆ ಬಳಿಕ ಕಾಮಗಾರಿ

ಕೋಟ್ಯಾಂತರ ರೂ. ವೆಚ್ಚದಲ್ಲಿ ನಿರ್ಮಿಸುತ್ತಿರುವ ಕಾಂಕ್ರೀಟ್ ರಸ್ತೆ ದೀರ್ಘಕಾಲ ಬಾಳಿಕೆ(ಉಪಯೋಗ) ಬರುವಂತೆ ನೋಡಿಕೊಳ್ಳುವ ನಿಟ್ಟಿನಲ್ಲಿ ಸಮನ್ವಯ ಸಮಿತಿ ರಚಿಸಲಾಗಿದೆ. ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ನೇತೃತ್ವದಲ್ಲಿ ಸಮನ್ವಯ ಸಮಿತಿ ರಚಿಸಲಾಗಿದ್ದು, ಈ ಸಮಿತಿಯಲ್ಲಿ ಪಾಲಿಕೆ, ಚೆಸ್ಕಾಂ, ಕಂದಾಯ, ಲೋಕೋಪಯೋಗಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳಿದ್ದಾರೆ. ಕಾಂಕ್ರೀಟ್ ಕಾಮಗಾರಿ ನಡೆಸುವ ಮುನ್ನ ಎಲ್ಲಾ ಇಲಾಖೆಗಳು ಒಪ್ಪಿಗೆ ನೀಡಿದ ಬಳಿಕವಷ್ಟೇ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿ ನಡೆಸಲು ಸೂಚನೆ ನೀಡಲಾಗಿದೆ.

ದಸರಾ ಸಮೀಪಿಸುವಾಗ ಕಾಮಗಾರಿ ಸ್ಥಗಿತ

ಮೈಸೂರಿನ 12 ರಸ್ತೆಗಳನ್ನು ಕಾಂಕ್ರೀಟ್ ರಸ್ತೆಯಾಗಿ ಪರಿವರ್ತಿಸುವ ಕಾಮಗಾರಿಗೆ ಈಗಾಗಲೇ ಟೆಂಡರ್ ನೀಡಲಾಗಿದೆ. ಎರಡು ವರ್ಷದೊಳಗೆ ಕಾಮಗಾರಿ ಪೂರ್ಣಗೊಳಿಸುವ ಷರತ್ತು ವಿಧಿಸಲಾಗಿದೆ. ಕಾಮಗಾರಿ ನಡೆಸುವ ವೇಳೆ ವಾಹನ ಸವಾರರಿಗೆ ತೊಂದರೆ ಆಗದಂತೆ ಕಟ್ಟೆಚ್ಚರ ವಹಿಸಲು ಸೂಚಿಸಲಾಗಿದೆ. ಪರ್ಯಾಯ ಮಾರ್ಗದ ವ್ಯವಸ್ಥೆಯನ್ನು ಗಮನದಲ್ಲಿರಿಸಿಕೊಂಡು ಕಾಮಗಾರಿ ನಡೆಸಲಾಗುತ್ತದೆ. ನಾಡಹಬ್ಬ ದಸರಾ ವೇಳೆ ಮೈಸೂರಿಗೆ ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವುದರಿಂದ ಕಾಂಕ್ರೀಟ್ ರಸ್ತೆ ನಿರ್ಮಾಣ ಕಾಮಗಾರಿ ಸ್ಥಗಿತಗೊಳಿಸಿ, ದಸರಾ ಮುಗಿದ ನಂತರ ಮುಂದುವರೆಸಲು ಸೂಚನೆ ನೀಡಲಾಗಿದೆ.

ಇಬ್ಬರು ಯುವಕರಿಗೆ ಚಾಕು, ಬಿಯರ್ ಬಾಟಲಿಯಿಂದ ಹಲ್ಲೆ

ಮೈಸೂರು,ಮೇ 4(ಪಿಎಂ)– ಇಬ್ಬರು ಯುವಕರಿಗೆ ಗುಂಪೊಂದು ಚಾಕು, ಬಿಯರ್ ಬಾಟಲಿಯಿಂದ ಹಲ್ಲೆ ನಡೆಸಿರುವ ಸಂಬಂಧ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರು ಲಕ್ಷ್ಮೀಕಾಂತನಗರದ ಚಂದನ್ ಕುಮಾರ್, ಮಂಡ್ಯದ ಪಿ.ಹೊಸಳ್ಳಿಯ ಧನುಷ್ ಹಲ್ಲೆಗೆ ಒಳಗಾದವರು. ಮೈಸೂರು ಜಿಲ್ಲಾಸ್ಪತ್ರೆಯಲ್ಲಿ ಚಂದನ್‌ಕುಮಾರ್ ನೀಡಿದ ಹೇಳಿಕೆಯನ್ವಯ ಹೆಬ್ಬಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಮೈಸೂರಿನ ಖಾಸಗಿ ಕಂಪನಿವೊಂದರಲ್ಲಿ ಕೆಲಸ ಮಾಡುತ್ತಿದ್ದೇನೆ. ಮೇ 2ರಂದು ರಾತ್ರಿ 8ರ ಸುಮಾರಿಗೆ ನಾನು, ಧನುಷ್ ಸೇರಿದಂತೆ ಇನ್ನಿತರ ಸ್ನೇಹಿತರು ಮನೆಗೆ ಹೋಗುತ್ತಿದ್ದೆವು. ಈ ವೇಳೆ ನಮ್ಮ ಕಂಪನಿಯಲ್ಲಿ ಕೆಲಸ ಮಾಡುವ ರಮ್ಯ ಮತ್ತು ಆಕೆಯ ಸ್ನೇಹಿತರು ಕಾರಿನಲ್ಲಿ ಬಂದು ನಮ್ಮನ್ನು ತಡೆದು ನಿಂದಿಸುತ್ತಿದ್ದರು.

ಸ್ವಲ್ಪ ಮುಂದೆ ಹೋಗುತ್ತಿದ್ದಂತೆ ಆಟೋರಿಕ್ಷಾ, ಬೈಕ್‌ಗಳಲ್ಲಿ ಬಂದ ಗುಂಪು, ನನ್ನನ್ನು ಲಕ್ಷ್ಮೀಕಾಂತನಗರಕ್ಕೆ ಹೋಗುವ ರಸ್ತೆಗೆ ಓಡಿಸಿಕೊಂಡು ಬಂದಿತು. ಗುಂಪಿನ ಪೈಕಿ ಒಬ್ಬ ಚಾಕುವಿನಿಂದ ನನ್ನ ಎಡಗಾಲಿನ ಹಿಂಭಾಗಕ್ಕೆ ತಿವಿದಿದ್ದು, ಜೋರಾಗಿ ಕೂಗಿಕೊಂಡಾಗ ಗುಂಪು ಪರಾರಿಯಾಯಿತು. ಅಲ್ಲದೆ, ನನ್ನ ಜೊತೆ ಬರುತ್ತಿದ್ದ ಸ್ನೇಹಿತರಿಗೆ ಹಲ್ಲೆ ಮಾಡಿದ್ದು, ಈ ಪೈಕಿ ಹೊಸಳ್ಳಿಯ ಧನುಷ್‌ಗೆ ಆಟೋದಲ್ಲಿ ಹಾಕಿಕೊಂಡು ಬಿಯರ್ ಬಾಟಲ್, ಹೆಲ್ಮೆಟ್‌ನಿಂದ ಹಲ್ಲೆ ಮಾಡಿದ್ದಾರೆ. ರಮ್ಯ ಮತ್ತು ಆಕೆಯ ಕಡೆಯವರು ನಾನು ಮೆಸೇಜ್ ಮಾಡುತ್ತಿದ್ದ ದ್ವೇಷಕ್ಕೆ ಹಲ್ಲೆ ಮಾಡಿದ್ದಾರೆ ಎಂದು ಚಂದನ್‌ಕುಮಾರ್ ನೀಡಿದ ಹೇಳಿಕೆ ಅನ್ವಯ ಮೇ 2ರಂದು ಪ್ರಕರಣ ದಾಖಲಾಗಿದೆ.

ಬಿಜೆಪಿಯಿಂದ ಕಣಕ್ಕಿಳಿದಿದ್ದ ಆರ್‌ಜಿ ಕರ್ ಅತ್ಯಾಚಾರ ಸಂತ್ರಸ್ತೆ ತಾಯಿಗೆ ಜಯ



ಕೋಲ್ಕತ್ತಾ: ಆರ್‌ಜಿ ಕರ್ ಅತ್ಯಾಚಾರ ಸಂತ್ರಸ್ತೆ ತಾಯಿ ಹಾಗೂ ಬಿಜೆಪಿ ಅಭ್ಯರ್ಥಿ ರತ್ನಾ ದೇಬನಾಥ್ ಅವರು ಬಂಗಾಳದ ಪಾಣಿಹಟಿ ಕ್ಷೇತ್ರದಲ್ಲಿ ಜಯಗಳಿಸಿದ್ದಾರೆ.

ಉತ್ತರ 24 ಪರಗಣದಲ್ಲಿರುವ ಪಾಣಿಹಟಿ ವಿಧಾನ ಸಭಾ ಸ್ಥಾನವು ಪಶ್ಚಿಮ ಬಂಗಾಳ ಚುನಾವಣೆಯಲ್ಲಿ ಅತ್ಯಂತ ಗಮನ ಸೆಳೆದ ಕ್ಷೇತ್ರಗಳಲ್ಲಿ ಒಂದಾಗಿತ್ತು. ಈ ಕ್ಷೇತ್ರದಲ್ಲಿ ಐದು ಬಾರಿ ಹಾಲಿ ಶಾಸಕರಾಗಿರುವ ತೀರ್ಥಂಕರ ಘೋಷ್ ಅವರ ಪುತ್ರ ಟಿಎಂಸಿ ಅಭ್ಯರ್ಥಿ ತೀರ್ಥಂಕರ ಘೋಷ್ ವಿರುದ್ಧ ರತ್ನಾ ದೇಬನಾಥ್ ಜಯಗಳಿಸಿದ್ದಾರೆ. ರಾಜ್ಯದಲ್ಲಿ ಮಹಿಳೆಯರ ಮೇಲಿನ ಅಪರಾಧ ಘಟನೆಗಳ ಕುರಿತು ಮಮತಾ ಬ್ಯಾನರ್ಜಿ ಸರ್ಕಾರದ ವಿರುದ್ಧ ರತ್ನಾ ದೇಬನಾಥ್ ಚುನಾವಣಾ ಕಣಕ್ಕೆ ಇಳಿದಿದ್ದರು. ಇತ್ತೀಚಿನ ವರ್ಷಗಳಲ್ಲಿ ಪಶ್ಚಿಮ ಬಂಗಾಳವು ಆಡಳಿತ ವಿಚಾರವಾಗಿ ವಿರೋಧಾಭಾಸ ಎದುರಿಸುತ್ತಿತ್ತು. ಆರ್‌ಜಿ ಕರ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ ಆವರಣದಲ್ಲಿ ಯುವ ವೈದ್ಯೆ ಹತ್ಯೆ ವ್ಯಾಪಕ ಆಕ್ರೋಶಕ್ಕೆ ಕಾರಣವಾಗಿತ್ತು.

ಪಶ್ಚಿಮ ಬಂಗಾಳದಲ್ಲಿ ರಾತ್ರಿ 8:45ರ ವರೆಗೆ ಬಿಜೆಪಿ 208, ಟಿಎಂಸಿ 79, ಕಾಂಗ್ರೆಸ್ 2, ಎಲ್‌ಇಎಫ್‌ಟಿ 2 ಹಾಗೂ ಇತರೆ 2 ಸ್ಥಾನಗಳಲ್ಲಿ ಮುನ್ನಡೆ ಸಾಧಿಸಿವೆ. ಈಗಾಗಲೇ ರಾಜ್ಯದಲ್ಲಿ ಬಿಜೆಪಿಗೆ ಜಯ ಲಭಿಸಿದೆ.

ಆಟೋ ಅಡ್ಡ ಹಾಕಿ ಯುವಕರ ಮೇಲೆ ಅಪರಿಚಿತರಿಂದ ಹಲ್ಲೆ; ಪ್ರಕರಣ ದಾಖಲು

ಮೈಸೂರು,ಮೇ 4(ಪಿಎಂ)– ಆಟೋದಲ್ಲಿ ಮನೆಗೆ ಹೋಗುತ್ತಿದ್ದ ಮೂವರು ಸ್ನೇಹಿತರ ಮೇಲೆ ಅಪರಿಚಿತರ ಗುಂಪು ಹಲ್ಲೆ ನಡೆಸಿರುವ ಸಂಬಂಧ ಅಶೋಕಪುರಂ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಆಟೋ ಚಾಲನೆ ಮಾಡುತ್ತಿದ್ದ ಹಾಗೂ ಹಲ್ಲೆಗೆ ಒಳಗಾದವರಲ್ಲಿ ಒಬ್ಬರಾದ ಜನತಾನಗರ ನಿವಾಸಿ ಆರ್.ಮಧುಸೂದನ್ ನೀಡಿದ ದೂರಿನನ್ವಯ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಮೇ 1ರಂದು ರಾತ್ರಿ ಸುಮಾರು 11.30ರಲ್ಲಿ ಸ್ನೇಹಿತರಾದ ತೇಜಸ್, ಪವನ್ ಅವರ ಜೊತೆ ಆಟೋದಲ್ಲಿ ಮನೆಗೆ ಹೋಗುತ್ತಿದ್ದಾಗ, ಇದ್ದಕ್ಕಿದ್ದಂತೆ ಅಶೋಕಪುರಂ ಸಿಲ್ಕ್ ಫ್ಯಾಕ್ಟರಿ ಸರ್ಕಲ್ ಬಳಿ ಅಪರಿಚಿತರ 5ರಿಂದ 6 ಜನರ ಗುಂಪು ಆಟೋ ಅಡ್ಡಗಟ್ಟಿತು. ಬಳಿಕ ಆಟೋ ಮೇಲೆ ಕಲ್ಲು ತೂರಿ ಆಟೋ ಗ್ಲಾಸ್ ಹೊಡೆದರು. ಗುಂಪಿನಲ್ಲಿದ್ದ ಒಬ್ಬ ನನಗೆ ಕಬ್ಬಿಣದ ಪಂಚ್‌ನಿಂದ ತಲೆಗೆ ಹೊಡೆದ. ಅಲ್ಲದೆ, ನನ್ನ ಸ್ನೇಹಿತರ ಮೇಲೂ ಹಲ್ಲೆ ನಡೆಸಿದರೆಂದು ನೀಡಿರುವ ದೂರಿನಡಿ ಮೇ 2ರಂದು ಎಫ್‌ಐಆರ್ ದಾಖಲಿಸಿ ಕೊಳ್ಳಲಾಗಿದೆ.

ಐದು ಕೆಜಿ ಫ್ರೀ ಟ್ರೇಡ್ ಎಲ್‌ಪಿಜಿ ಸಿಲಿಂಡರ್ ವಿತರಣೆಗೂ ಓಟಿಪಿ ಕಡ್ಡಾಯ

ಈ ಸಿಲಿಂಡರ್‌ನ ಮರು ಬುಕ್ಕಿಂಗ್ ಅವಧಿ 10 ದಿನಕ್ಕೆ ಸೀಮಿತ

ಮೈಸೂರು,ಮೇ 4(ಪಿಎಂ)– ಐದು ಕೆಜಿ ಎಫ್‌ಟಿಎಲ್ (ಫ್ರೀ ಟ್ರೇಡ್ ಎಲ್‌ಪಿಜಿ) ಸಿಲಿಂಡರ್ ವಿತರಣೆಗೆ ಓಟಿಪಿ ಕಡ್ಡಾಯಗೊಳಿಸಲಾಗಿದೆ. ಜೊತೆಗೆ ಈ ಸಿಲಿಂಡರ್‌ನ ಮರು ಬುಕ್ಕಿಂಗ್ ಅವಧಿಯನ್ನು 10 ದಿನಗಳಿಗೆ ಸೀಮಿತಗೊಳಿಸಲಾಗಿದೆ. ಇದು ಮೇ 5ರಿಂದ ಜಾರಿಗೆ ಬರಲಿದೆ.

ಭಾರತೀಯ ಎಲ್‌ಪಿಜಿ ವಿತರಕರ ಸಂಘದ (ಎಲ್‌ಡಿಎಐ) ರಾಜ್ಯಾಧ್ಯಕ್ಷ ಮೆಹುಲ್ ಪಟೇಲ್ 'ಮೈಸೂರು ಮಿತ್ರ'ನಿಗೆ ಈ ವಿಷಯ ತಿಳಿಸಿದರು. ಈ ಹಿಂದೆ ಐದು ಕೆಜಿ ಎಫ್‌ಟಿಎಲ್ ವಿತರಣೆಗೆ ಓಟಿಪಿ ಕಡ್ಡಾಯ ಇರಲಿಲ್ಲ. ದುರ್ಬಳಕೆ ತಡೆಗಟ್ಟುವ ನಿಟ್ಟಿನಲ್ಲಿ ಮೂರು ತೈಲ ಕಂಪನಿಗಳಿಂದ ಈ ರೀತಿಯ ನಿಯಮಾವಳಿ ರೂಪಿಸಲಾಗಿದೆ. ಈ ನೂತನ ನಿಯಮಾವಳಿಗಳು ಹೆಚ್‌ಪಿ, ಇಂಡೇನ್ ಮತ್ತು ಭಾರತ್ ಗ್ಯಾಸ್ ಸೇರಿದಂತೆ ಮೂರು ಕಂಪನಿಗಳಿಂದ ನಾಳೆಯಿಂದಲೇ (ಮೇ 5) ಜಾರಿಗೊಳ್ಳುತ್ತಿದೆ. ಮೊಬೈಲ್‌ಗೆ ಕಳುಹಿಸುವ ಓಟಿಪಿ ಸಂಖ್ಯೆ ತಿಳಿಸಿಯೇ ಸಿಲಿಂಡರ್ ಪಡೆಯಬೇಕು ಎಂದರು.

ವಲಸೆ ಕಾರ್ಮಿಕರು, ಟಿ ಸ್ಟಾಲ್‌ಗಳು, ವಿದ್ಯಾರ್ಥಿಗಳಿಗೆ ಈ ರೀತಿಯ ಸಿಲಿಂಡರ್ ವಿತರಿಸಲು ಅವಕಾಶವಿದೆ. ಆದರೆ ದುರುಪಯೋಗ ತಡೆಗಟ್ಟಲು ಕಟ್ಟುನಿಟ್ಟಿನ ನಿಯಮಾವಳಿ ಜಾರಿಗೊಳಿಸಲಾಗುತ್ತಿದೆ. ಈ ರೀತಿ ಸಿಲಿಂಡರ್ ಸಂಬಂಧ ದಾಸ್ತಾನು ದಾಖಲಾತಿಯನ್ನು ಏಜೆನ್ಸಿಗಳು ಸಮರ್ಪಕವಾಗಿ ನಿರ್ವಹಿಸಬೇಕು. ಹಿಂದೆ ಈ ರೀತಿಯ ಕಟ್ಟುನಿಟ್ಟಿನ ನಿಯಮಾವಳಿ ಇರಲಿಲ್ಲ ಎಂದು ಹೇಳಿದರು.



ಏಜೆನ್ಸಿ, ಡೆಲಿವರಿ ಬಾಯ್ ವಿರುದ್ಧ ಕ್ರಮ: ಗೃಹ ಬಳಕೆ ಸಿಲಿಂಡರ್ ಸಂಬಂಧ ವಿಳಾಸ ಬದಲಾವಣೆ ಮಾಡಿಕೊಳ್ಳದೇ ಹೊಸ ವಿಳಾಸದಲ್ಲಿ ವಾಸವಾಗಿದ್ದು, ಹಳೇ ವಿಳಾಸಕ್ಕೆ ಸಿಲಿಂಡರ್ ವಿತರಣೆ ಮಾಡಿ ಎಂದರೆ ಅದಕ್ಕೆ ಅವಕಾಶವಿಲ್ಲ. ಒಂದು ವೇಳೆ ಹಳೇ ವಿಳಾಸಕ್ಕೆ ವಿತರಣೆ ಮಾಡಿದ್ದರೆ ಏಜೆನ್ಸಿ ಹಾಗೂ ಡೆಲಿವರಿ ಬಾಯ್ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಮೂರು ತೈಲ ಕಂಪನಿಗಳು ಎಚ್ಚರಿಕೆ ನೀಡಿವೆ. ಜೊತೆಗೆ ಸ್ಥಳ ಪರಿಶೀಲನೆ ನಡೆಸುವುದಾಗಿ ಹೇಳಿವೆ ಎಂದರು.

ಗ್ರಾಹಕರು ಆಧಾರ್ ಕಾರ್ಡ್ ವಿವರಗಳನ್ನು ಏಜೆನ್ಸಿಗಳಿಗೆ ಸಲ್ಲಿಸುವುದು ಕಡ್ಡಾಯ ಮಾಡಲಾಗಿದೆ. ಜೊತೆಗೆ ಇಕೆವೈಸಿ ಮಾಡಿಸಿರಬೇಕು. ಆಧಾರ್ ಕಾರ್ಡ್ ವಿವರ ಸಲ್ಲಿಸದಿದ್ದರೆ ಹೊಸ ಗ್ಯಾಸ್ ಸಂಪರ್ಕ ಕಲ್ಪಿಸುವಂತಿಲ್ಲ. ಪಿಎನ್‌ಜಿ ಪೈಪ್‌ಲೈನ್ ಹೊಂದಿರುವವರು ಎಲ್‌ಪಿಜಿ ಸಂಪರ್ಕ ರದ್ದುಪಡಿಸಿಕೊಳ್ಳಬೇಕು. ಏಜೆನ್ಸಿಗಳಿಗೆ ಸಲ್ಲಿಸಿರುವ ದಾಖಲೆಗಳಲ್ಲಿ ಇರುವ ವಿಳಾಸದಲ್ಲೇ ಗ್ರಾಹಕರು ಇರಬೇಕು. ನೋಂದಾಯಿಸಿರುವ ಮೊಬೈಲ್ ಸಂಖ್ಯೆಯು ಗ್ರಾಹಕನ ಹಸರಿನಲ್ಲೇ ಇರಬೇಕು. ಕುಟುಂಬದ ಇತರ ಸದಸ್ಯರ ಮೊಬೈಲ್ ಸಂಖ್ಯೆ ನೀಡಲು ಅವಕಾಶವಿಲ್ಲ. ಗೃಹಬಳಕೆ ಸಿಲಿಂಡರ್ ದುರುಪಯೋಗ ತಡೆಗಟ್ಟುವ ನಿಟ್ಟಿನಲ್ಲಿ ಈ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಮದುವೆ ಸಮಾರಂಭಕ್ಕೆ ಸದ್ಯಕ್ಕಿಲ್ಲ ಸಿಲಿಂಡರ್: 19 ಕೆಜಿಯ ವಾಣಿಜ್ಯ ಸಿಲಿಂಡರ್‌ಗಳನ್ನು ಮದುವೆ ಸಮಾರಂಭಗಳಿಗೆ ಸದ್ಯಕ್ಕೆ ನೀಡದಂತೆ ಮೂರು ತೈಲ ಕಂಪನಿಗಳಿಂದಲೂ ಏಜೆನ್ಸಿಗಳಿಗೆ ಸೂಚನೆ ನೀಡಲಾಗಿದೆ. ಆಸ್ಪತ್ರೆಗಳಿಗೆ ಮೊದಲ ಆದ್ಯತೆಯಾಗಿ ಸಿಲಿಂಡರ್ ಪೂರೈಕೆ ಮಾಡಲು ಸೂಚಿಸಲಾಗಿದೆ. ಈ ಸಂಬಂಧ ತೈಲ ಕಂಪನಿಗಳಿಂದ ಪಟ್ಟಿ ಸಿದ್ಧಪಡಿಸಿದ್ದು, ಮೊದಲ ಆದ್ಯತೆ ಎ ಆಗಿ ಆಸ್ಪತ್ರೆಗಳನ್ನು ಪರಿಗಣಿಸಲಾಗಿದೆ ಎಂದು ಮೆಹುಲ್ ಪಟೇಲ್ ಹೇಳಿದರು.

ಮೊದಲ ಆದ್ಯತೆ ಬಿ ಆಗಿ ಶಿಕ್ಷಣ ಸಂಸ್ಥೆಗಳು ಮತ್ತು ಹಾಸ್ಟೆಲ್‌ಗಳನ್ನು ಪರಿಗಣಿಸಲಾಗಿದೆ. ಅಂತೆಯೇ ಆದ್ಯತೆ 2ರ ಅಡಿಯಲ್ಲಿ ಸರ್ಕಾರಿ ಸಂಸ್ಥೆಗಳು, ವಿಮಾನ ನಿಲ್ದಾಣಗಳು, ರೈಲ್ವೆ–ಬಸ್ ನಿಲ್ದಾಣದಲ್ಲಿರುವ ಕ್ಯಾಂಟೀನ್‌ಗಳು, ಕೆಎಂಎಫ್ (ನಂದಿನಿ), ಇಂದಿರಾ ಕ್ಯಾಂಟೀನ್‌ಗಳಿಗೆ ವಾಣಿಜ್ಯ ಸಿಲಿಂಡರ್ ನೀಡಬಹುದಾಗಿದೆ. ಆದ್ಯತೆ 3ರಡಿ ರೆಸ್ಟೋರೆಂಟ್, ಡಾಬಾ, ಹೋಟೆಲ್, ಕೈಗಾರಿಕಾ ಕ್ಯಾಂಟೀನ್‌ಗಳನ್ನು ಪರಿಗಣಿಸಲಾಗಿದೆ. ಆದ್ಯತೆ 4ರಲ್ಲಿ ಆಹಾರ ಸಂಸ್ಕರಣಾ ಉದ್ಯಮ, ಕೃಷಿ ಸಂಬಂಧಿತ ವಲಯ ಮತ್ತು ಇತರೆ ಕ್ಷೇತ್ರಗಳನ್ನು ವರ್ಗೀಕರಿಸಲಾಗಿದೆ. ಈ ಆದ್ಯತೆ ಪಟ್ಟಿಯ ಕ್ರಮವಾಗಿಯೇ ವಾಣಿಜ್ಯ ಸಿಲಿಂಡರ್ ವಿತರಣೆ ಮಾಡಬೇಕಿದೆ ಎಂದು ಅವರು ತಿಳಿಸಿದರು.

ಮೈಸೂರು ಮಿತ್ರ
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

PUBLIC NOTICE

My client Smt. Vasuda Narayan, Wife of Shri Anantha Narayana B.S., Resident of No. 10/1, 4 Main Road, 3rd Block, Thyagaraja Nagar, Bengaluru-560 028 an absolute owner of the schedule mentioned property. The original Letter of Allotment issued by Gnana Ganga House Building Co-operative Society Limited in the name of Smt Vasuda Narayan is lost. Any person in possession of the Letter of Allotment document is hereby called upon to return the same to undersigned to avoid unpleasant consequences.

The Public cautioned against dealing with any person who may have custody of the document, as custody and/or any transaction thereon will be illegal and liable for prosecution. In this regard, My client has also lodged Police Complaint before the Station House Officer, Bengaluru City, Bengaluru, Lost Report No. 1594050/2025 Dated: 05-05-2025.

SCHEDULE OF THE DOCUMENT

1. Letter of Allotment issued by Gnana Ganga House Building Co-operative Society Limited in favour of Smt. Vasuda Narayan Wife of Shri Anantha Narayana B.S., dated 02-12-2012.

SCHEDULE OF THE PROPERTY

All the piece and parcel of the Property bearing No. 98, Situated at Subramanya Nagar, the layout formed by Gnana Ganga House Building Co-operative Society Limited at Bogadi Village, Kasaba Hobli, Mysuru Taluk and Mysuru District. Measuring: East to West: 12.00 Meters and North to South: 18.00 Meters. In all 216 Square Meters. Bounded on East By: Site No. 97, West By: Site No. 99, North By: Road and South By: Site No. 89 & 90.

Sd/- M.V.Ramesha, B.Com., M.S.W.,L.L.B.,
G V Sudha, B.A., L.L.B.,
Advocates and Notary
#329/2, Ch-5/2, D. Subbaiah Road, Chamaraja Mohalla, Mysore - 570 024.
Mob: 9480118990
Date: 03-05-2026